|| ಶ್ರೀಃ ||


# ಶ್ರೀ ವಾದಿರಾಜರ ನಿಜವಾದ ಸ್ವರೂಪ ಮಹಿಮೆ

## ಶ್ರೀ ವಾದಿರಾಜರ ಋಜುತ್ವಸಾಧಕ ಗ್ರಂಥ

ವಿದ್ಯಾಸಿಂಹಾಚಾರ್ಯ ಮಾಹುಲಿ, ಮುಂಬೈ ಅವರು
ಶ್ರೀ ವಾದಿರಾಜರ ಋಜುತ್ವವನ್ನು ಖಂಡಿಸಲು ಬರೆದ
"ಶ್ರೀ ವಾದಿರಾಜ ಸ್ವರೂಪ ಚಿಂತನ"
ಎಂಬ ಪುಸ್ತಕ ಓದಿದಾಗ ಬರುವ ಶಂಕೆಗಳಿಗೆ ಸೂಕ್ತ ಪರಿಹಾರ

ಸಂಗ್ರಾಹಕರು : ಶ್ರೀ ಗೋಪಾಲ ಕೃಷ್ಣ ಉಪಾಧ್ಯ, ಉಡುಪಿ.
ಪ್ರಕಾಶಕರು : ಶ್ರೀ ಗುರುಕೃಪಾ ಗ್ರಂಥಮಾಲೆ, ಮೈಸೂರು.





ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದರು

ಶ್ರೀ ಸೋದೆವಾದಿರಾಜಮಠದ ಪರಂಪರೆಯಿಂದ ಪೂಜಿಸಲ್ಪಡುತ್ತಿರುವ ಆರಾಧ್ಯದೇವರು (ವಿಗ್ರಹಗಳು), ಶ್ರೀ ವಾದಿರಾಜರ ಸುವರ್ಣಪಾದುಕೆ ಶ್ರೀ ಭೂತರಾಜರ ಪದ್ಮಪೀಠ ಸನ್ನಿಧಾನ

ಶ್ರೀ ಸೋದೆ ವಾದಿರಾಜ ಮಠ

ಉಡುಪಿ



ಉಡುಪಿ

10-3-2003

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ ।
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ ॥
ತಪೋವಿದ್ಯಾವಿರಕ್ತ್ಯಾದಿ ಸದ್ಗುಣೌಘಾಕರಾನಹಂ ।
ವಾದಿರಾಜಗುರೂನ್ ವಂದೇ ಹಯಗ್ರೀವದಯಾಶ್ರಯಾನ್ ॥

# ಸಾನುಗ್ರಹ ಸಂದೇಶ

ಜಗದ್ಗುರುಗಳಾದ ಶ್ರೀ ಮಧ್ವಾಚಾರ್ಯರು ದ್ವೈತವೇದಾಂತ ಸಾಮ್ರಾಜ್ಯದ ಮಹಾರಾಜರು. ಶ್ರೀ ವಾದಿರಾಜ ಗುರುಸಾರ್ವಭೌಮರು ಈಗ ಯುವರಾಜರಾಗಿ ಮೆರೆಯುತ್ತಿದ್ದು, ಮುಂದಿನ ಕಲ್ಪದಲ್ಲಿ ವಾಯುದೇವರ ಪದವಿಯನ್ನೇ ಅಲಂಕರಿಸಲಿರುವವರು. ಅವರು ಋಜು ಶ್ರೇಷ್ಠರಾದ ಲಾತವ್ಯ ದೇವತೆಯ ಅವತಾರವೆಂಬುದು ವೇದಾದಿ ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿದೆ. ಶ್ರೀ ವಿಜಯದಾಸರೇ ಮೊದಲಾದ ಅಪರೋಕ್ಷ ಜ್ಞಾನಿಗಳೆಲ್ಲಾ ಪ್ರಮಾಣಗಳನ್ನು ಉದಾಹರಿಸಿ ಶ್ರೀವಾದಿರಾಜರ ಋಜುತ್ವವೈಭವವನ್ನು ಹಾಡಿ ಕೊಂಡಾಡಿರುತ್ತಾರೆ. ಬಹು ಸಂಖ್ಯಾಕ ಭಕ್ತರು ಶ್ರೀ ವಾದಿರಾಜರ ಋಜುತ್ವವನ್ನು ಉಪಾಸನೆ ಮಾಡಿ ಶ್ರೇಯೋಭಿವೃದ್ಧಿಯನ್ನು ಹೊಂದಿರುತ್ತಾರೆ.

ಶ್ರೀ ವಾದಿರಾಜರು ಸಶರೀರರಾಗಿ ವೃಂದಾವನವನ್ನು ಪ್ರವೇಶಿಸಿದ ಮೇಲೆ ಸುಮಾರು 280 ವರ್ಷಗಳವರೆಗೆ ಅವರ ಸ್ವರೂಪ ಮಹಿಮೆಯ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯಗಳು ಇರಲಿಲ್ಲ. ಉಡುಪಿಯಲ್ಲಿ ಅಷ್ಟಮಠದ ಯತಿಗಳು ಹಾಗೂ ವಿದ್ವಾಂಸರು ಶ್ರೀ ವಾದಿರಾಜರ ಋಜುತ್ವ ಪ್ರಮೇಯದಲ್ಲಿ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿರುವರು. ಮಠತ್ರಯಗಳ ಪೈಕಿ ಶ್ರೀವ್ಯಾಸರಾಜಸ್ವಾಮಿಗಳ ಹಾಗೂ ಶ್ರೀ ರಾಘವೇಂದ್ರಸ್ವಾಮಿಗಳ ಮಠಕ್ಕೆ ಸಂಬಂಧಪಟ್ಟ ಯತಿಗಳಿಗೆ ಹಾಗೂ ವಿದ್ವಾಂಸರಿಗೆ ಶ್ರೀವಾದಿರಾಜಸ್ವಾಮಿಗಳ ಋಜುತ್ವ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದಿಲ್ಲ. ಉತ್ತರಾದಿ ಮಠದಲ್ಲೂ ಹಿಂದೆ ಯಾವ ವಿರೋಧ ಬಂದ ದಾಖಲೆಯೂ ಇಲ್ಲ. ಮೊದಲು ಶ್ರೀ ಸತ್ಯವೀರತೀರ್ಥರ ಕಾಲದಲ್ಲಿ ಕಾರಣಾಂತರದಿಂದ ಶ್ರೀ ವಾದಿರಾಜರ ಋಜುತ್ವ ಪ್ರಮೇಯದಲ್ಲಿ ಅಭಿಪ್ರಾಯ ಭೇದವು ಉದ್ಭವಿಸಿತು. ಅಲ್ಲಿಂದ ಪ್ರಾರಂಭಿಸಿ ಶ್ರೀ ವಾದಿರಾಜರು ಋಜುಗಳಲ್ಲವೆನ್ನುವ ವಾದವು ಅಲ್ಲಲ್ಲಿ, ಕಾಲಾಂತರಗಳಲ್ಲಿ ತಲೆ ಎತ್ತಿರುವುದು ಕಂಡುಬಂದಿದೆ. ವಿವಾದ ಉದ್ಭವಿಸಿದ ಆಯಾಯ ಕಾಲಗಳಲ್ಲಿ ತಪಸ್ವಿಗಳೂ, ಶ್ರೀ ಮಧ್ವಾಚಾರ್ಯರ ಸಿದ್ಧಾಂತಕ್ಕನುಗುಣವಾಗಿ ಉಪಾಸನೆಮಾಡಿ ಸಿದ್ಧಿಪಡೆದವರೂ ಆದ ಜ್ಞಾನಿಗಳಿಂದ ಅಂತಹ ದುರ್ವಾದಗಳು "ಪ್ರಾಮಾಣ್ಯ ಬೋಧಿನೀ" ಮೊದಲಾದ ಗ್ರಂಥರಚನೆಗಳ ಮೂಲಕ ಖಂಡಿಸಲ್ಪಟ್ಟಿರುತ್ತವೆ. ಸ್ವಲ್ಪ ಸಮಯದ ಹಿಂದೆ ತುಮಕೂರಿನ ವಿದ್ವಾಂಸರಾದ ಶ್ರೀ ರಮೇಶಾಚಾರ್ಯರು "ಕುತರ್ಕಚ್ಛೇದಃ" ಎನ್ನುವ ಪುಸ್ತಕದ ಮೂಲಕ ಜಿಜ್ಞಾಸುಭಕ್ತರ ಶಂಕೆಗಳನ್ನು ಪರಿಹರಿಸಿರುತ್ತಾರೆ.

ಪ್ರಕೃತ, ವಿದ್ಯಾಸಿಂಹಾಚಾರ್ಯ ಮಾಹುಲಿ ಎಂಬುವರು "ಶ್ರೀ ವಾದಿರಾಜ ಸ್ವರೂಪ ಚಿಂತನ" ಎಂಬ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಆ ಪುಸ್ತಕದಲ್ಲಿ ಶ್ರೀ ವಾದಿರಾಜರು ಮಹಾಮಹಿಮರು ಎಂದು ಮೊದಲು ಪರಿಚಯಿಸಿ, ಕೊನೆಯಲ್ಲಿ ಮನುಷ್ಯ ಸಾಮಾನ್ಯರೆಂದು ತೋರಿಸಿರುತ್ತಾರೆ. ಶ್ರೀ ವಾದಿರಾಜರ ಆಗಮಸಿದ್ಧ ಋಜುತ್ವ ಪ್ರಮೇಯವನ್ನು ಕುತರ್ಕದಿಂದ ಅಪಲಾಪ ಮಾಡಿರುತ್ತಾರೆ. ಅವರ ಪ್ರತಿಪಾದನೆಯ ಕ್ರಮವು ಶ್ರೀ ಮಧ್ವಾಚಾರ್ಯರ ಸಿದ್ಧಾಂತಕ್ಕೆ ಅತ್ಯಂತ ವಿರುದ್ಧವಾಗಿದೆ. ಮುಗ್ಧ ಸಾತ್ವಿಕರಿಗೆ ಬುದ್ಧಿಭೇದ ಮಾಡಲು ಸಮರ್ಥವಾಗಿದೆ.

ಈ ಪುಸ್ತಕದ ವಿಷಯವಾಗಿ ಚರ್ಚಿಸಲು ಸಭೆಯನ್ನು ನಾವು ಕರೆದಿರುತ್ತೇವೆ. ನಮ್ಮ ಸಮಕ್ಷಮದಲ್ಲಿ ನಡೆದ ಸಭೆಯಲ್ಲಿ ಆ ಪುಸ್ತಕದಲ್ಲಿ ಹೇಳಿದ ವಿಚಾರಗಳನ್ನೆಲ್ಲಾ ಚೆನ್ನಾಗಿ ಚರ್ಚಿಸಲಾಯಿತು. ಹಾಗೆಯೇ ಸಿದ್ಧಾಂತಗಳನ್ನು ನಿರೂಪಣೆ ಮಾಡಲಾಯಿತು. ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದ ವಿಷಯಗಳನ್ನು ನಮ್ಮ ಮಠದ ಅಭಿಮಾನಿಗಳಾದ ಶ್ರೀ ಬಿ. ಗೋಪಾಲಕೃಷ್ಣ ಉಪಾಧ್ಯ ಇವರು ಸಂಗ್ರಹಿಸಿರುತ್ತಾರೆ. ಅದನ್ನು "ಶ್ರೀ ವಾದಿರಾಜರ ನಿಜವಾದ ಸ್ವರೂಪ ಮಹಿಮೆ" ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ತಂದಿರುತ್ತಾರೆ. ಶ್ರೀ ಗುರುಕೃಪಾ ಗ್ರಂಥಮಾಲೆ, ಮೈಸೂರು ಇವರು ಅದನ್ನು ಪ್ರಕಟಿಸಲು ಮುಂದಾಗಿರುತ್ತಾರೆ.

ಪ್ರಶ್ನೋತ್ತರ ರೂಪವಾದ ಈ ಪುಸ್ತಕದಿಂದ ಭಾವಿಸಮೀರ ಶ್ರೀ ವಾದಿರಾಜರ ನಿಜವಾದ ಸ್ವರೂಪ ಮಹಿಮೆಯು ಚೆನ್ನಾಗಿ ಮನದಟ್ಟಾಗುತ್ತದೆ. ಸಂಶಯಗಳು ನಿವಾರಣೆಯಾಗುತ್ತವೆ. ಶ್ರೀ ಗುರುರಾಜರ ಭಕ್ತರೆಲ್ಲ ಈ ಪುಸ್ತಕದ ಸದುಪಯೋಗವನ್ನು ಪಡೆದುಕೊಂಡು ಭಾವಿಸಮೀರರಾದ ಶ್ರೀ ವಾದಿರಾಜರನ್ನು ಚೆನ್ನಾಗಿ ಉಪಾಸನೆ ಮಾಡಿ ಸ್ವರೂಪೋದ್ಧಾರವೇ ಮೊದಲಾದ ಶ್ರೇಯೋಭಿವೃದ್ಧಿಯನ್ನು ಹೊಂದಬೇಕೆಂದು ನಾವು ಅಪೇಕ್ಷಿಸುತ್ತೇವೆ. ಈ ಗ್ರಂಥವನ್ನು ಹೊರತರುವಲ್ಲಿ ಶ್ರಮಿಸಿದ ವಿದ್ವಾಂಸರಿಗೂ, ಸಂಗ್ರಹಕಾರರಿಗೂ, ಪ್ರಕಾಶಕರಿಗೂ ಮತ್ತು ಸಹಕರಿಸಿದ ಗುರುರಾಜರ ಭಕ್ತರಿಗೂ ನಮ್ಮ ಆರಾಧ್ಯ ದೇವರಾದ ಶ್ರೀ ಭೂವರಾಹ ಹಯಗ್ರೀವ ವೇದವ್ಯಾಸ ದೇವರು, ಶ್ರೀ ವಾದಿರಾಜ ಗುರುಸಾರ್ವಭೌಮರು, ಶ್ರೀ ಭೂತರಾಜರು ಪರಮಾನುಗ್ರಹ ಮಾಡಿ, ಇಂತಹ ಸೇವೆ ಇವರಿಂದ ನಿರಂತರವಾಗಿ ನಡೆಯುವಂತೆ ಕರುಣಿಸಲೆಂದು ನಾವು ಪ್ರಾರ್ಥಿಸುತ್ತೇವೆ.

ಇತ್ಯನೇಕ ನಾರಾಯಣ ಸ್ಮರಣೆಗಳು

(ಶ್ರೀ ವಿಶ್ವೋತ್ತಮ ತೀರ್ಥರು)

ಪ್ರಕಾಶಕರು: ಶ್ರೀ ಗುರುಕೃಪಾ ಗ್ರಂಥಮಾಲೆ
ನಂ. 423, ಕೃಷ್ಣಮೂರ್ತಿ ಪುರಂ, ಮೈಸೂರು.

ಫಾಲ್ಗುಣ ಪೂರ್ಣಿಮಾ ಚಿತ್ರಭಾನು ಸಂವತ್ಸರ
ಶ್ರೀ ತ್ರಿವಿಕ್ರಮ ದೇವರ ರಥೋತ್ಸವ
18-3-2003

ಪ್ರತಿಗಳು ದೊರೆಯುವ ಸ್ಥಳ:
1. ಶ್ರೀ ಸೋದೆ ವಾದಿರಾಜ ಮಠ
ಸೋಂದಾ, ಸಿರಸಿ.
2. ಶ್ರೀ ಸೋದೆ ವಾದಿರಾಜ ಮಠ
ಉಡುಪಿ.
3. ಶ್ರೀ ಗುರುಕೃಪಾ ಗ್ರಂಥಮಾಲೆ
ನಂ. 423, ಕೃಷ್ಣಮೂರ್ತಿ ಪುರಂ, ಮೈಸೂರು.

ಬೆಲೆ - ರೂ. 5/-

ಮುದ್ರಣ: ಸುಪ್ರಿಯ ಪ್ರಿಂಟರ್ಸ್
ಬೆಂಗಳೂರು.
ದೂರವಾಣಿ: 2215234

॥ ಶ್ರೀಃ ॥

# ಶ್ರೀ ವಾದಿರಾಜರ ನಿಜವಾದ ಸ್ವರೂಪ ಮಹಿಮೆ

## ಶ್ರೀ ವಾದಿರಾಜರ ಋಜುತ್ವಸಾಧಕ ಗ್ರಂಥ

ವಿದ್ಯಾಸಿಂಹಾಚಾರ್ಯ ಮಾಹುಲಿ, ಮುಂಬೈ ಅವರು
ಶ್ರೀ ವಾದಿರಾಜರ ಋಜುತ್ವವನ್ನು ಖಂಡಿಸಲು ಬರೆದ
"ಶ್ರೀ ವಾದಿರಾಜ ಸ್ವರೂಪ ಚಿಂತನ"
ಎಂಬ ಪುಸ್ತಕ ಓದಿದಾಗ ಬರುವ ಶಂಕೆಗಳಿಗೆ ಸೂಕ್ತ ಪರಿಹಾರ

ಸಂಗ್ರಾಹಕರು : ಶ್ರೀ ಗೋಪಾಲ ಕೃಷ್ಣ ಉಪಾಧ್ಯ, ಉಡುಪಿ.
ಪ್ರಕಾಶಕರು : ಶ್ರೀ ಗುರುಕೃಪಾ ಗ್ರಂಥಮಾಲೆ, ಮೈಸೂರು.

## ॥ ಶ್ರೀಃ॥

॥ ಶ್ರೀ ರಾಮಕೃಷ್ಣವೇದವ್ಯಾಸಾತ್ಮಕ ಲಕ್ಷ್ಮೀ ಹಯಗ್ರೀವಾಯ ನಮಃ ॥

॥ಶ್ರೀ ಶ್ರಿಯೈ ನಮಃ ॥

॥ ಶ್ರೀ ಹನುಮದ್ ಭೀಮಮಧ್ವಾತ್ಮಕ ಶ್ರೀಮುಖ್ಯಪ್ರಾಣಾಯ ನಮಃ ॥

॥ ಶ್ರೀ ವಾದಿರಾಜಗುರುಭ್ಯೋ ನಮಃ ॥

॥ ಶ್ರೀ ವೇದವೇದ್ಯಗುರುಭ್ಯೋ ನಮಃ ॥

॥ ಶ್ರೀ ಭೂತರಾಜ ಗುರುಭ್ಯೋ ನಮಃ ॥

॥ ಶ್ರೀ ವೃಂದಾವನಾಚಾರ್ಯ ಗುರುಭ್ಯೋ ನಮಃ ।

★ ★ ★ ★ ★

# ಶ್ರೀವಾದಿರಾಜರ ನಿಜವಾದ ಸ್ವರೂಪ ಮಹಿಮೆ

★ ★ ★ ★ ★

ಶ್ರೀ ಸೋದೆ ವಾದಿರಾಜ ಮಠದ, ಶ್ರೀ 108 ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರ ಸನ್ನಿಧಾನದಲ್ಲಿ, *'ಶ್ರೀ ವಾದಿರಾಜ ಸ್ವರೂಪ ಚಿಂತನ'* ಎಂಬ ಹೆಸರಿನ ಪುಸ್ತಕದ ವಿಷಯವಾಗಿ, ಜಿಜ್ಞಾಸುಗಳು ಹಾಗೂ ವಿದ್ವಾಂಸರು ಚರ್ಚಿಸಿ, ನಿರ್ಣಯಿಸಿದ ವಿಷಯಗಳ, ಪ್ರಶ್ನೋತ್ತರರೂಪವಾದ ಸಂಗ್ರಹ:

★ ★ ★

ಸಂಗ್ರಾಹಕರು : ಬಿ. ಗೋಪಾಲಕೃಷ್ಣ ಉಪಾಧ್ಯ , ಉಡುಪಿ.



**ಪ್ರಶ್ನೆ: ಭಾವಿಸಮೀರರೆಂದು ವಿಖ್ಯಾತರಾದ ಶ್ರೀ ವಾದಿರಾಜ ಸ್ವಾಮಿಗಳ ಸ್ವರೂಪದ ವಿಷಯದಲ್ಲಿ ತಮ್ಮ ಅಭಿಪ್ರಾಯ ಮಂಡಿಸಿರುವ ವಿದ್ಯಾಸಿಂಹಾಚಾರ್ಯ ಮಾಹುಲಿ ಅವರ ''ಶ್ರೀ ವಾದಿರಾಜ ಸ್ವರೂಪ ಚಿಂತನ'' ವೆಂಬ ಹೆಸರಿನ ಪುಸ್ತಕವನ್ನು ನೋಡಿದ್ದೀರಾ?**

ಉತ್ತರ: ನೋಡಿದ್ದೇವೆ.

(ಸದರೀ ವಿದ್ಯಾಸಿಂಹಾಚಾರ್ಯರು ಇನ್ನು ಮುಂದೆ ಈ ಪುಸ್ತಕದಲ್ಲಿ ಲೇಖಕರು ಎಂದು ಕರೆಯಲ್ಪಡುತ್ತಾರೆ)

**ಪ್ರಶ್ನೆ: ಅದರಲ್ಲಿ ಪ್ರತಿಪಾದಿಸಿದ ವಿಷಯ ಸರಿಯಾಗಿದೆಯೇ?**

ಉತ್ತರ: ಸರಿಯಾಗಿಲ್ಲ.

**ಪ್ರಶ್ನೆ: ಅವರು ಮಾಡಿದ ಪ್ರತಿಪಾದನ ಕ್ರಮ ಸರಿಯಾಗಿಲ್ಲವೇ? ಅಥವಾ ಅವರು ಶ್ರೀ ವಾದಿರಾಜರು ಋಜುಗಳಲ್ಲವೆಂದು ಹೇಳಿರುವ ನಿರ್ಣಯ ಸರಿಯಾಗಿಲ್ಲವೇ?**

ಉತ್ತರ: ಎರಡೂ ಸರಿಯಾಗಿಲ್ಲ. ಅವರು ಮಾಡಿರುವ ಉಪಪಾದನ ಕ್ರಮ ಮಧ್ವಸಿದ್ಧಾಂತಾನುಸಾರಿ ಇಲ್ಲ. ಆದ್ದರಿಂದ ಅವರು ಹೇಳಿದ ನಿರ್ಣಯವೂ ಸರಿಯಾಗಿಲ್ಲ.

ಶ್ರೀಮಧ್ವಾಚಾರ್ಯರ ಮತದಲ್ಲಿ ಪ್ರಮೇಯಗಳು ಪ್ರಮಾಣಗಳಿಂದ ಸಿದ್ಧವಾಗುವುವು. ಶ್ರೀ ಮಧ್ವಮತದಲ್ಲಿ ಪ್ರತ್ಯಕ್ಷ, ಆಗಮ, ಅನುಮಾನಗಳೆಂಬ ಮೂರು ಪ್ರಮಾಣಗಳು. ಪ್ರಮಾಣಗಳಿಂದ ಪ್ರಮೇಯವನ್ನು ಸಿದ್ಧಿಸುವ ಕ್ರಮವನ್ನು ಶ್ರೀ ಮಧ್ವಾಚಾರ್ಯರು ಚೆನ್ನಾಗಿ ನಿರೂಪಿಸಿರುತ್ತಾರೆ. ಆ ಕ್ರಮಕ್ಕನುಸಾರವಾಗಿ ಶ್ರೀ ವಾದಿರಾಜ ಸ್ವಾಮಿಗಳ ಋಜುತ್ವವು ಪೂರ್ವಕಾಲದ ಅನೇಕ ಜ್ಞಾನಿಗಳಿಂದ ಚೆನ್ನಾಗಿ ನಿರ್ಣೀತವಾಗಿದೆ. ಶಿಷ್ಟ ಪರಂಪರೆಯಿಂದ ಅಂಗೀಕರಿಸಲ್ಪಟ್ಟಿದೆ.

**ಪ್ರಶ್ನೆ : ಲೇಖಕರು ಪಂಡಿತರು, ಕುಲಪತಿಗಳು. ಅಂತಹವರ ಉಪಪಾದನ ಕ್ರಮ ಮಧ್ವ ಸಿದ್ಧಾಂತಾನುಸಾರಿಯಾಗಿಲ್ಲವೆಂದು ಹೇಳುವುದು ಸರಿಯೇ?**

ಉತ್ತರ: ಶ್ರೀ ಮಧ್ವಾಚಾರ್ಯರ ಮತದಲ್ಲಿ ಪ್ರತ್ಯಕ್ಷ ಗೋಚರವಲ್ಲದ ಅಂದರೆ ಕಣ್ಣಿಗೆ ಕಾಣದ ತತ್ವಗಳ ವಿಚಾರವು, ಆಗಮದಿಂದಲೇ ನಿರ್ಣಯ ಮಾಡಲ್ಪಡಬೇಕೆಂದು ಸಿದ್ಧಾಂತವಿದೆ. ಇಂದ್ರಿಯಗಳಿಗೆ ಗೋಚರವಲ್ಲದ ವಿಷಯಗಳನ್ನು ಅನುಮಾನದಿಂದ ಸಾಧಿಸಲು ಸಾಧ್ಯವಿಲ್ಲ ಮತ್ತು ಹಾಗೆ ಸಾಧಿಸಲೂ ಬಾರದು. ವಾದಿರಾಜಸ್ವಾಮಿಗಳ ಋಜುತ್ವವು, ಅದು ಸೀದಾಸಾದಾ ಕಣ್ಣಿಗೆ ಗೋಚರವಾಗುವ ತತ್ವವಲ್ಲ. ಅದನ್ನು ಕೇವಲ ಅನುಮಾನಗಳಿಂದ ಸಾಧಿಸಬಾರದು. ಹಾಗಾಗಿ ಆಗಮವನ್ನೇ ಆಶ್ರಯಿಸಿ ಅವರ ಸ್ವರೂಪವನ್ನು ನಿರ್ಧರಿಸಬೇಕಾದ್ದು ಸಿದ್ಧಾಂತ. ಸದರೀ ಪುಸ್ತಕದಲ್ಲಿ ಹಾಗೆ ಮಾಡಿಲ್ಲ.

**ಪ್ರಶ್ನೆ: ಹಾಗೆ ಮಾಡಿಲ್ಲವೆಂದರೆ ಏನು ಮಾಡಿದ್ದಾರೆ?**

ಉತ್ತರ: ಆ ಪುಸ್ತಕದ ಲೇಖಕರು ಕೇವಲ ಅನುಮಾನಗಳನ್ನು ಪ್ರಯೋಗ ಮಾಡಿ, ಅತೀಂದ್ರಿಯ

ತತ್ವ ನಿಶ್ಚಯಿಸಲು ಹೊರಟಿದ್ದಾರೆ. ಅನೇಕ ಪ್ರಮಾಣ ಸಹಾಯ ರಹಿತವಾದ ಅನುಮಾನಗಳನ್ನು, ಆ ಪುಸ್ತಕದಲ್ಲಿ ಮಾಡಿ, ಪೂರ್ವಕಾಲದಿಂದ ಆಗಮ ಸಿದ್ಧವಾದ ತತ್ವವನ್ನೇ ಅಪಲಾಪ ಮಾಡಲು ಯತ್ನಿಸಿದ್ದಾರೆ. ಪೂರ್ವಕಾಲದಿಂದಲೇ ಜ್ಞಾನಿಗಳಿಂದಲೇ ಅಂಗೀಕೃತವಾದ ಶ್ರೀ ವಾದಿರಾಜರ ಸ್ವರೂಪ ಸಾಧಕ ಅನೇಕ ಆಗಮ ವಾಕ್ಯಗಳನ್ನು ಮತ್ತು ಅದಕ್ಕನುಸಾರಿ ಅನುಮಾನಗಳನ್ನು ಉದಾಹರಿಸದೇ, ಬಿಟ್ಟು ಬಿಟ್ಟಿರುತ್ತಾರೆ. ತಾವು ಪ್ರಯೋಗಿಸಿದ ಅನುಮಾನಗಳಿಗೆ ಸಹಾಯಕ ಆಗಮ ವಾಕ್ಯಗಳನ್ನು ಕೊಟ್ಟಿಲ್ಲ. ಶ್ರೀ ವಾದಿರಾಜರ ದಿವ್ಯ ಮಹಿಮೆಯ ವಿಷಯಗಳಲ್ಲಿ ಹಾಗೂ ಪ್ರಮಾಣಗಳ ವಿಷಯದಲ್ಲಿ ತಮಗೆ ಬೇಕಾದ್ದು ಮಾತ್ರ ತೆಗೆದುಕೊಂಡು, ಮಿಕ್ಕದ್ದನ್ನು ಉಪೇಕ್ಷಿಸಿ, ತಮಗೆ ತೋಚಿದ ಅರ್ಥ ಹೇಳಿರುತ್ತಾರೆ. ಸಮಸ್ತ ಪ್ರಮಾಣಗಳಲ್ಲಿ ಸಮನ್ವಯ ಮಾಡದೇ, ಕೇವಲ ಶುಷ್ಕ ತರ್ಕದಿಂದ ನಿರ್ಣಯ ಮಾಡಿಬಿಟ್ಟಿರುತ್ತಾರೆ. ದಾಸ ಸಾಹಿತ್ಯದ ನೂರಾರು ಪ್ರಮಾಣ ವಾಕ್ಯಗಳನ್ನು ಕಡೆಗಣಿಸಿದ್ದಾರೆ. ಆದ್ದರಿಂದ, ಅವರು ಹೇಳುವ ಶ್ರೀ ವಾದಿರಾಜರು ಋಜುಗಳಲ್ಲವೆನ್ನುವ ಅವರ ನಿರ್ಣಯ ಸಾಧುವಲ್ಲ; ಅದು ಸಿದ್ಧಾಂತವಾಗುವುದಿಲ್ಲ.

**ಪ್ರಶ್ನೆ: ಶ್ರೀ ಮಧ್ವಾಚಾರ್ಯರ ಗ್ರಂಥಗಳನ್ನು ಪಾಠ ಹೇಳುವ ಪಂಡಿತರಾದ ಲೇಖಕರು, ಆ ರೀತಿ ಯಾಕೆ ಮಾಡಿದ್ದಾರೆ?**

ಉತ್ತರ: ಯಾರೇ ಆಗಲೀ, ಎಷ್ಟು ದೊಡ್ಡ ಪಂಡಿತರೇ ಆಗಲಿ ಪಕ್ಷಪಾತ ಮಾಡಬಾರದು. ಪಕ್ಷಪಾತರಹಿತವಾದ ಬುದ್ಧಿಯಿಂದ, ಉಪಲಬ್ಧ (ನಮಗೆ ಸಿಕ್ಕಿರುವ) ಪ್ರಮಾಣಗಳನ್ನು, ವಿಚಾರ ಮಾಡಿದಾಗ, ಸಿದ್ಧವಾಗುವ ತತ್ವವನ್ನು, ಜನತೆಯ ಮುಂದಿಡುವುದು ಪಂಡಿತರ ಆದ್ಯ ಕರ್ತವ್ಯ. ಅದರಲ್ಲೂ ದೊಡ್ಡ ಪಂಡಿತರು ಇನ್ನೂ ಹೆಚ್ಚಿಗೆ, ಚೆನ್ನಾಗಿ ಆ ಕೆಲಸ ಮಾಡಬೇಕು. ಆ ಪುಸ್ತಕದ ಲೇಖಕರು ಹಾಗೆ ನಡವಳಿಕೆ ತೋರಿಸಿಲ್ಲ. ಆದ್ದರಿಂದ, ಆ ಪುಸ್ತಕ ವಿಶ್ವಾಸಕ್ಕೆ ಅರ್ಹವಲ್ಲ.

**ಪ್ರಶ್ನೆ: ಈಗ ನಮಗೆ ಸಿಕ್ಕಿರುವ ಪ್ರಮಾಣಗಳಿಂದ ಶ್ರೀ ವಾದಿರಾಜರ ಋಜುತ್ವ ತತ್ವ ಸಿದ್ಧಿಯಾಗುವುದಿಲ್ಲವೆ ಅಥವಾ ಲೇಖಕರು ಹೇಳುವಂತೆ ಋಜುಗಳಲ್ಲವೆಂಬ ಪ್ರಮೇಯವೇ ಸಿದ್ಧಿಸುತ್ತದೆಯೇ?**

ಉತ್ತರ: ಶ್ರೀ ವಾದಿರಾಜರ ಸ್ವರೂಪದ ವಿಷಯವಾಗಿ, ದೇವರ ದಯೆಯಿಂದ ಹಾಗೂ ಸಾಧಕರ ಅದೃಷ್ಟದಿಂದ ಅನೇಕಾನೇಕ ಪ್ರಮಾಣಗಳು ಸಿಕ್ಕಿವೆ. ಅವುಗಳಲ್ಲಿ ಮಧ್ವಾಚಾರ್ಯರ ಮತಕ್ಕನುಸಾರವಾಗಿ ಸಮನ್ವಯದಿಂದ ಸಿದ್ಧಾಂತ ಮಾಡಿದಾಗ, ನಿಸ್ಸಂಶಯವಾಗಿ, ಶ್ರೀ ವಾದಿರಾಜರು ಋಜುಗಳೆಂದು ಸಿದ್ಧಿಸುತ್ತದೆ. ಋಜುಗಳಲ್ಲವೆಂದು ಕೆಲವು ಅನುಮಾನಗಳಿಂದ ಆಪಾತತಃ ತೋರಿದರೂ, ಶ್ರೀ ಮಧ್ವಾಚಾರ್ಯರ ಮತಕ್ಕನುಸಾರವಾದ ಋಜುತ್ವ ಸಿದ್ಧಾಂತ ಸಾಧನೆಯಲ್ಲಿ ಯಾವುದೇ ತೊಡಕು ಇಲ್ಲ.

**ಪ್ರಶ್ನೆ: ಏನೂ ತೊಡಕಿಲ್ಲದಿದ್ದರೆ, ಲೇಖಕರು ಏಕೆ ಅದೇ ಪ್ರಮಾಣಗಳಿಂದ ಶ್ರೀ ವಾದಿರಾಜರು ಋಜುಗಳಲ್ಲವೆಂದು ನಿರ್ಣಯಿಸಿದರು?**

ಉತ್ತರ: ಆ ಲೇಖಕರು, ಶ್ರೀ ವಾದಿರಾಜರ ಕೆಲವು ವಾಕ್ಯಗಳಲ್ಲಿ ಆಪಾತತಃ ತೋರುವ ಅರ್ಥಗಳನ್ನು



ಮಾತ್ರ ಗ್ರಹಿಸಿದ್ದಾರೆ. ಸಿಕ್ಕಿರುವ ಎಲ್ಲಾ ಆಗಮ ಪ್ರಮಾಣಗಳನ್ನು ವಿಚಾರಿಸಲಿಲ್ಲ. ತಮಗೆ ಬೇಕಾದ ಕೆಲವು ವಾಕ್ಯಗಳನ್ನು ಮಾತ್ರ ಉದಾಹರಿಸಿದ್ದಾರೆ. ಸಂಹಿತಾವಾಕ್ಯಗಳು, ಪಂಚರಾತ್ರಾಗಮ ವಾಕ್ಯಗಳು, ಪುರಾಣ ವಾಕ್ಯಗಳು ಮತ್ತು ಅನೇಕ ಅಪರೋಕ್ಷ ಜ್ಞಾನಿಗಳಾದ ದಾಸರ ನೂರಾರು ವಾಕ್ಯಗಳು, ಇವೆಲ್ಲಾ ಇರುವಾಗ, ಅವನ್ನೆಲ್ಲಾ ಬಿಟ್ಟು ಬಿಟ್ಟಿರುತ್ತಾರೆ. ತಮಗೆ ಅನುಕೂಲಕರ ಕೆಲವು ವಾಕ್ಯಗಳಿಂದ ತಮ್ಮ ನಿರ್ಣಯ ಮಾಡಿರುತ್ತಾರೆ. ಕೇವಲ ತರ್ಕ ಪ್ರಯೋಗದಿಂದ, ಸಿದ್ಧಾಂತ ಮಾಡಲು ಯತ್ನಿಸಿದ್ದಾರೆ. ಸಾತ್ವಿಕ ಆಗಮ ವಾಕ್ಯ ಒಂದನ್ನೂ ಉದಾಹರಿಸಲಿಲ್ಲ. ಆದ್ದರಿಂದ ಅವರ ನಿರ್ಣಯ ಸಾಧುವಲ್ಲ.

**ಪ್ರಶ್ನೆ: ಆ ಲೇಖಕರು ತಮ್ಮ ಪುಸ್ತಕದಲ್ಲಿ ಶ್ರೀ ವಾದಿರಾಜರದೇ ಅನೇಕಾನೇಕ ವಾಕ್ಯಗಳನ್ನು ಉದಾಹರಿಸಿದ್ದಾರಲ್ಲ, ಬೇರೆ ವಾಕ್ಯಗಳಿಗಿಂತ, ವಾದಿರಾಜರ ಸ್ವಂತ ವಾಕ್ಯಗಳು ಹೆಚ್ಚಿನ ಬೆಲೆಯುಳ್ಳದ್ದಲ್ಲವೇ?**

ಉತ್ತರ: ಹೌದು, ಆದರೆ, ಶ್ರೀ ವಾದಿರಾಜರದೇ ಬೇರೆ ಅನೇಕ ವಾಕ್ಯಗಳನ್ನು ಆ ಲೇಖಕರು ಉಪೇಕ್ಷಿಸಿ ಬಿಟ್ಟಿದ್ದಾರೆ. ಉದಾಹರಿಸಿರುವ ಕೆಲವು ವಾಕ್ಯಗಳಲ್ಲೂ, ಶ್ರೀ ವಾದಿರಾಜರ ವಿವಕ್ಷಿತ ಅಭಿಪ್ರಾಯವನ್ನು ಅನುವಾದ ಮಾಡಲಿಲ್ಲ. ಆದ್ದರಿಂದ ಅವರ ನಿರ್ಣಯ ಸರಿಯಲ್ಲ.

**ಪ್ರಶ್ನೆ: ಶ್ರೀ ವಾದಿರಾಜರ ಯಾವ ವಾಕ್ಯಗಳನ್ನು ಅವರು ಉಪೇಕ್ಷಿಸಿದ್ದಾರೆ?**

ಉತ್ತರ: ಶ್ರೀ ವಾದಿರಾಜರು ತಮ್ಮ ಗ್ರಂಥಗಳಲ್ಲಿ, ತಮ್ಮ ಸ್ವರೂಪವನ್ನು ಮುಚ್ಚಿಡುವ ಉದ್ದೇಶದಿಂದ, ಅನೇಕ ವಾಕ್ಯಗಳನ್ನು ಪ್ರಯೋಗಿಸಿದ್ದಾರೆ. ಆ ವಾಕ್ಯಗಳಲ್ಲಿ, ಕೇವಲ ಸ್ಥೂಲಾರ್ಥವನ್ನು ಮಾತ್ರ ಗ್ರಹಿಸುವುದರಿಂದ, ನೋಡುವವರಿಗೆ, ಶ್ರೀ ವಾದಿರಾಜರು ಋಜುಗಳಲ್ಲವೇನೋ ಎನ್ನುವ ಭಾವನೆ ಬರಲು ಅವಕಾಶವಿದೆ. ಲೇಖಕರು, ಬಿಡದೆ ಅವೆಲ್ಲಾ ವಾಕ್ಯಗಳನ್ನು ಸಂಗ್ರಹಿಸಿದ್ದಾರೆ. ಅವುಗಳ ಸ್ಥೂಲಾರ್ಥ ಮಾತ್ರ ತೋರಿಸಿ, ಶ್ರೀ ವಾದಿರಾಜರು ಋಜುಗಳಲ್ಲವೆಂದು ನಿರ್ಣಯ ಮಾಡಿಬಿಟ್ಟಿದ್ದಾರೆ. ಆದರೆ, ಆ ವಾಕ್ಯಗಳ ಉದ್ದೇಶವನ್ನು, ಅವುಗಳ ನಿಜವಾದ ಅರ್ಥವನ್ನು, ಅಂದರೆ ಸೂಕ್ಷ್ಮ ಅರ್ಥವನ್ನು ಗ್ರಹಿಸಲಿಲ್ಲ. ಇನ್ನು ತಾವು ಋಜುಗಣಸ್ಥರೆಂದು ವಾದಿರಾಜರು, ತಾವು ಜನರಿಗೆ ದೃಶ್ಯರಾಗಿರುವಾಗ, ರಚಿಸಿದ ತಮ್ಮ ಕೆಲವು ಗ್ರಂಥಗಳಲ್ಲಿ ಸೂಚನಾ ಮಾಡಿದ್ದಾರೆ. ಒಂದೆರಡು ಕಡೆ ಸಾಕ್ಷಾತ್ತಾಗಿ ಹೇಳಿಕೊಂಡಿದ್ದಾರೆ. ವೃಂದಾವನ ಪ್ರವೇಶಿಸಿದ ಮೇಲೆ, ತಾವೇ ಉಪದೇಶಿಸಿದ ಸುಮಾರು 2200 ಶ್ಲೋಕಗಳ ಅದ್ಭುತ ಗ್ರಂಥದ (ಶ್ರೀ ಸ್ವಾಪ್ನ ವೃಂದಾವನಾಖ್ಯಾನದ) ಮೂಲಕ ಚೆನ್ನಾಗಿ ಹೇಳಿಕೊಂಡಿದ್ದಾರೆ. ಅವೆಲ್ಲವನ್ನೂ ಲೇಖಕರು ಉಪೇಕ್ಷಿಸಿರುತ್ತಾರೆ.

**ಪ್ರಶ್ನೆ: ಲೇಖಕರು ತಮ್ಮ ಪುಸ್ತಕದಲ್ಲಿ ''ಸ್ವಪ್ನ ವೃಂದಾವನಾಖ್ಯಾನ ವಿಮರ್ಶೆ'' ಅಂತ (ಪುಟ 25) ಬರೆದಿದ್ದಾರಲ್ಲ?**

ಉತ್ತರ: ''ಸ್ವಪ್ನ ವೃಂದಾವನಾಖ್ಯಾನ ವಿಮರ್ಶೆ'' ಅಂತ ಹತ್ತು ವಾಕ್ಯ ಬರೆದಿದ್ದಾರೆ. ಆದರೆ, ಆ 2200 ಶ್ಲೋಕಗಳಲ್ಲಿ ಯಾವುದೇ ಸಂಶಯ ಬರದಂತೆ, ಬಂದ ಶಂಕಾ ಪರಿಹರಿಸುವಂತೆ, ಶ್ರೀವಾದಿರಾಜರೇ ತಮ್ಮ ಋಜುತ್ವವನ್ನು ಪ್ರತಿಪಾದಿಸಿಕೊಂಡಿದ್ದಾರೆ. ಆ ವಾಕ್ಯಗಳನ್ನು ಲೇಖಕರು ಉದಾಹರಿಸದೇ, ಹೊರಗಡೆಯಿಂದ, ಬರೀ ಅನುಮಾನ ಮಾತ್ರದಿಂದ, ಆ ದಿವ್ಯ ಗ್ರಂಥವನ್ನು ನಿರಾಕರಿಸಿದ್ದಾರೆ. ಅದು ಸಾಧುವಲ್ಲ. ಶ್ರೀಮದಾಚಾರ್ಯರ ಸಿದ್ಧಾಂತಕ್ಕೆ ಅತ್ಯಂತ ವಿರುದ್ಧವು.

**ಪ್ರಶ್ನೆ : ಹಾಗಾದರೆ ಶ್ರೀ ವಾದಿರಾಜರು ವೃಂದಾವನಾಖ್ಯಾನದಿಂದ ಸ್ಥೂಲಾರ್ಥ ಗ್ರಹಣದಿಂದಲೇ ಸಿಗುವಂತೆ, ತಮ್ಮ ಋಜುತ್ವವನ್ನು ಹೇಳಿಕೊಂಡಿದ್ದಾರೆಂದು ಹೇಳಿದಂತಾಯಿತಲ್ಲವೇ?**

ಉತ್ತರ: ಹೌದು, ಅದರಲ್ಲಿ ಸಂಶಯವಿಲ್ಲ.

**ಪ್ರಶ್ನೆ: ಹಾಗಿದ್ದರೆ, ಶ್ರೀ ವಾದಿರಾಜರ, ಬೇರೆ ಗ್ರಂಥಗಳ ವಾಕ್ಯಗಳಿಂದ, ಅವರ ಋಜುತ್ವ ನೇರವಾಗಿ ಸಿದ್ಧವಾಗದೇ ಇರುವಾಗ , ವೃಂದಾವನಾಖ್ಯಾನದಿಂದ ಮಾತ್ರ ನೇರವಾಗಿ ಸಿದ್ಧವಾಗುವಂತೆ ಶ್ರೀ ವಾದಿರಾಜರು, ಯಾಕೆ ಋಜುತ್ವ ಪ್ರತಿಪಾದಿಸಿಕೊಂಡರು? ಅದರಿಂದ ಅವರಿಗೇ ವಿರೋಧ ಬರುವುದಿಲ್ಲವೇ?**

ಉತ್ತರ: ಇಲ್ಲ. ಬೇರೆ ಗ್ರಂಥಗಳನ್ನು ಶ್ರೀ ವಾದಿರಾಜರು ವಿಷ್ಣು ಸರ್ವೋತ್ತಮತ್ವ ಮೊದಲಾದ ತತ್ವ ಪ್ರತಿಪಾದನೆಯ ಮುಖ್ಯ ಉದ್ದೇಶದಿಂದ, ದೃಶ್ಯರಾಗಿರುವಾಗ, ರಚಿಸಿದ್ದಾರೆ. ವೃಂದಾವನಾಖ್ಯಾನವನ್ನು, ತಮ್ಮ ಸ್ವರೂಪ ಮಹಿಮೆಯ ಕಥನದ ಮುಖ್ಯ ಉದ್ದೇಶದಿಂದಲೇ, ಅದೃಶ್ಯರಾಗಿ ರಚಿಸಿದ್ದಾರೆ. ಅವರಿಗಲ್ಲಿ ಉದ್ದೇಶ ಸಾಫಲ್ಯವಿದೆ. ಅಷ್ಟು ದೊಡ್ಡ ತತ್ವ ಅದು ಎಂದು ತಿಳಿಯಿರಿ. ಬೇರೆ ಗ್ರಂಥಗಳಲ್ಲಿ, ಮೇಲ್ನೋಟದ ಸ್ಥೂಲಾರ್ಥ ಬೇರೆ ರೀತಿ ಕಂಡರೂ, ಸೂಕ್ಷ್ಮಾರ್ಥ ಗ್ರಹಣ ಮಾಡಿದಲ್ಲಿ, ಶ್ರೀ ವಾದಿರಾಜರ ಋಜುತ್ವವೇ ಸಿದ್ಧವಾಗುತ್ತದೆ. ಇದನ್ನು ಮುಂದೆ ನಿರೂಪಿಸುತ್ತೇವೆ. ಬೇರೆ ಗ್ರಂಥಗಳ ಆ ರೀತಿಯ, ಆ ಮೇಲ್ನೋಟದ ವಾಕ್ಯಗಳಲ್ಲಿ, ನಿಖರವಾಗಿ ಅವರ ಸ್ವರೂಪ ಹೇಳಲಾಗಿಲ್ಲವೆಂದು ತಿಳಿಯಿರಿ. ಅವರು ಋಜುಗಳಲ್ಲವೆಂದು ವಿರುದ್ಧವಾಗಿಯೂ ಹೇಳಿಲ್ಲ. ಆ ವಾಕ್ಯಗಳಲ್ಲಿ ಸ್ವರೂಪ ವಿಚಾರ ಪ್ರಸಕ್ತಿಯೇ ಇಲ್ಲ. ಲೇಖಕರು ಅಂತಹ ವಾಕ್ಯಗಳನ್ನು ಮಾತ್ರ ಆರಿಸಿದ್ದಾರೆ. ಆ ವಾಕ್ಯಗಳು ಸ್ವರೂಪ ಸಾಧನೆಗೆ ಸಹಾಯಕಗಳೇ ಅಲ್ಲ. ಆದರೂ ಅವುಗಳಿಂದ ಸ್ವರೂಪ ನಿರ್ಣಯ ತಮಗೆ ತೋರಿದಂತೆ ಮಾಡಿದ್ದಾರೆ.

**ಪ್ರಶ್ನೆ: ''ಅಹಂ ತು ಮಾನುಷಃ ಕುರ್ಯಾಂ'' ಅಂತ ಲಕ್ಷಾಲಂಕಾರದಲ್ಲಿರುವ ವಾಕ್ಯವನ್ನು ಲೇಖಕರು ಉದಾಹರಿಸಿ ಶ್ರೀ ವಾದಿರಾಜರು ತಮ್ಮನ್ನು ತಾವು ನಿಖರವಾಗಿ ಮನುಷ್ಯನೆಂದು ಹೇಳಿಕೊಂಡಿರುತ್ತಾರೆ ಎಂದು ಬರೆದಿದ್ದಾರೆ. ಅದರಿಂದ ಶ್ರೀ ವಾದಿರಾಜರು ಅಲ್ಲಿ ಮನುಷ್ಯನೆಂದು ತಮ್ಮ ಸ್ವರೂಪ ಹೇಳಿಕೊಂಡಿದ್ದಾರಲ್ಲಾ?**

ಉತ್ತರ: ಹೀಗೆ ಶ್ರೀ ವಾದಿರಾಜರ ವಾಕ್ಯಕ್ಕೆ ದುರರ್ಥ ಸಾಧಿಸಬಾರದು. ಅದು ದೊಡ್ಡವರಿಗೆ ಮಾಡುವ ದ್ರೋಹವೆನಿಸುತ್ತದೆ. ಅಲ್ಲಿ ಶ್ರೀ ವಾದಿರಾಜರು **ಮಾನುಷವೆಂಬ** ಪದ ಪ್ರಯೋಗ ಮಾಡಿದ್ದಾರೆಯೇ ಹೊರತು **ನಾನು ಮನುಷ್ಯನೆಂದಲ್ಲ.**

ಪ್ರಶ್ನೆ: ಅದರಲ್ಲೇನು ವಿಶೇಷ?

ಉತ್ತರ: ಮಾನುಷನೆಂದರೆ, ಮನುಷ್ಯರಂತೆ ವ್ಯವಹಾರ ಮಾಡುವವರು, ಮನುಷ್ಯ ಲೋಕದಲ್ಲಿ ಹುಟ್ಟಿದವರೆಂದು ಅರ್ಥ ಪ್ರಾಪ್ತವಾಗುತ್ತದೆಯೇ ಹೊರತು, ದೇವ ಋಷಿ ಮೊದಲಾದ ಅಧಿಕಾರಿಗಳ ಮಧ್ಯೆ, 'ನಾವು ಮನುಷ್ಯರು' ಎಂದು ತಮ್ಮ ಸ್ವರೂಪ ಹೇಳಿಕೊಂಡಿಲ್ಲ. ಲೇಖಕರೇ ಶ್ರೀ ವಾದಿರಾಜರನ್ನು ಜ್ಞಾನಿಪ್ರವರರೂ, ಮಹಾಮಹಿಮರು, ತಪಸ್ವಿವರೇಣ್ಯರು ಹಾಗೂ ಲಕ್ಷಾವಧಿ



ಭಕ್ತರ ಉದ್ಧಾರಕರು ಎಂದೇ ಪರಿಚಯಿಸಿದ್ದಾರೆ. ಅವರೇ ಶ್ರೀ ವಾದಿರಾಜರನ್ನು ಮನುಷ್ಯರೆಂದರೆ, ಸ್ವವಾಕ್ಯ ವಿರೋಧ ಬರುತ್ತದೆ. ಇನ್ನು ಬರೀ ಮನುಷ್ಯರಲ್ಲಿ, ನಿತ್ಯ ಸಂಸಾರಿಗಳೋ, ಮನುಷ್ಯಾಧಮರಾದ ತಮೋ ಯೋಗ್ಯರೋ ಇರಬೇಕು ಅಂತ, ಅರ್ಥ ಗ್ರಹಣ ಮಾಡಿದರೆ, ಮಹಾ ಅನರ್ಥ. ಲೇಖಕರ ತರ್ಕ ಅಲ್ಲಿಗೂ ವ್ಯಾಪಿಸುತ್ತದೆ. ಆದರೆ, ಅದು ಅವರಿಗೂ ಸಮ್ಮತವಲ್ಲ.

**ಪ್ರಶ್ನೆ : ಹಾಗಾದರೆ ಲೇಖಕರು ಮಾನುಷ ಪದಕ್ಕೆ ಏನು ಅರ್ಥ ತೋರಿಸಿದ್ದಾರೆ?**

ಉತ್ತರ: ಅವರು ಅದರಿಂದ ''ಶ್ರೀ ವಾದಿರಾಜರು ತಮ್ಮನ್ನು ಮನುಷ್ಯನೆಂದು ಹೇಳಿಕೊಂಡಿದ್ದಾರೆ'' ಅಂತ, ಉದಾಹರಿಸಿದ್ದಾರೆಯೇ ಹೊರತು, ಮನುಷ್ಯರೇ ಅಂತ ನೇರವಾಗಿ ಹೇಳಲಿಲ್ಲ. ಆದರೆ ವಾಚಕರಿಗೆ, ಶ್ರೀ ವಾದಿರಾಜರು ಮನುಷ್ಯರು ಅಂತ ಭಾಸವಾಗುವಂತೆ, ಲೇಖಕರು ವಾಕ್ಯ ರಚನಾ ಮಾಡಿದ್ದಾರೆ. ಲೇಖಕರೇ, ಶ್ರೀ ವಾದಿರಾಜರನ್ನು ದೊಡ್ಡವರು ಎಂದು ಬೇರೆ ಕಡೆ ತೋರಿಸಿರುವುದರಿಂದ ಆ ವಾಕ್ಯದ, ಮೇಲ್ನೋಟಕ್ಕೆ ಕಾಣುವ ಮನುಷ್ಯ ಸ್ವರೂಪದವರು ಅನ್ನುವ ಅರ್ಥವನ್ನು ಅವರೇ ಅಂಗೀಕರಿಸಿಲ್ಲ. ನಿತ್ಯ ಶ್ರೀ ಹಯಗ್ರೀವ ದೇವರ ಪ್ರತ್ಯಕ್ಷ ಉಳ್ಳವರೂ, ಯುಕ್ತಿಮಲ್ಲಿಕಾದಿ ಗ್ರಂಥ ರಚಿಸಿದವರೂ, ದಿಕ್ಕು ದಿಕ್ಕಿನಲ್ಲಿ ಮಧ್ವಮತ ಪ್ರತಿಷ್ಠಾಪನೆ ಮಾಡಿದವರೂ ಆದ ಅವರು ಸಾಮಾನ್ಯ ಮನುಷ್ಯರು ಅಂದರೆ, ಆ ಸ್ಥೂಲ ಅರ್ಥ ಕೂಡುವುದೇ ಇಲ್ಲ. ಆದ್ದರಿಂದ, ಮಾನುಷ ಅನ್ನುವ ಉದಾಹರಣೆಯಿಂದ ಲೇಖಕರಿಗೆ ಏನೇನೂ ಪ್ರಯೋಜನವಿಲ್ಲ.

**ಪ್ರಶ್ನೆ : ಯಾಕೆ ಪ್ರಯೋಜನವಿಲ್ಲ?**

ಉತ್ತರ: ಅವರನ್ನು ಮನುಷ್ಯರೆಂದರೆ, ಲಕ್ಷಾವಧಿ ಭಕ್ತರ ಉದ್ಧಾರಕರೂ ಇತ್ಯಾದಿ ಸ್ವವಾಕ್ಯ ವಿರೋಧ ಬರುತ್ತದೆ. ಮನುಷ್ಯಮಾತ್ರರು ಮಹಾಭಾರತ ಲಕ್ಷಾಲಂಕಾರ ಮಾಡುವುದೆಂದರೇನು? ಶ್ರೀ ವಾದಿರಾಜರನ್ನೇ ಮನುಷ್ಯರೆಂದಾಗ, ಮಿಕ್ಕವರೆಲ್ಲಾ ಅವರಿಗಿಂತ ಕಡಿಮೆ ಯೋಗ್ಯತೆಯವರು ಎಂದು ಸಿದ್ಧವಾಗುತ್ತದೆ. ಆ ಮಿಕ್ಕವರೆಲ್ಲಾ ಮನುಷ್ಯಾಧಮರು, ತಮೋ ಯೋಗ್ಯರು ಅಂತಲೂ ಸಿದ್ಧವಾಗಿ ಬಿಡುತ್ತದೆ. ಅದರಿಂದ ಮಾನ ಹಾನಿ ಆಗುತ್ತದೆ. ಇನ್ನು ಆ ವಾಕ್ಯದಿಂದ ಸ್ವರೂಪ ಸಾಧಿಸಲಾಗದೆಂದೇ ಒಪ್ಪಬೇಕು. ಒಪ್ಪಿದರೆ, ಋಜುಗಳಲ್ಲ ಎನ್ನುವುದಕ್ಕೆ ಆ ವಾಕ್ಯ ಉದಾಹರಿಸಿ, ಸ್ವರೂಪ ಸಾಧಿಸಲಾಗದಿದ್ದುದರಿಂದ, ಲೇಖಕರಿಗೆ ಪ್ರತಿಜ್ಞಾಹಾನಿಯು ಆಗುತ್ತದೆ. ಅದೇ ಸಂದರ್ಭದ ಲಕ್ಷಾಲಂಕಾರದ ಮುಂದಿನ ವಾಕ್ಯದಲ್ಲಿ, ಶ್ರೀ ವಾದಿರಾಜರು, ತಮಗೆ ಪ್ರಯಾಗದಲ್ಲಿ ಶ್ರೀ ವೇದವ್ಯಾಸ ದೇವರು ಪ್ರತ್ಯಕ್ಷವಾಗಿ ಲಕ್ಷಾಲಂಕಾರ ರಚಿಸೆಂದು ಆಜ್ಞೆ ಕೊಟ್ಟರೆಂದೂ, ಹೇಳಿಕೊಂಡಿದ್ದಾರೆ. ಲೇಖಕರು ಅದನ್ನು ಬಿಟ್ಟು, ಅರ್ಧ ಮಾತ್ರ ಉದಾಹರಿಸಿದ್ದರಿಂದ, ಲೇಖಕರಲ್ಲಿ ವಿಶ್ವಾಸವೂ ಹೋಗಿಬಿಡುತ್ತದೆ.

**ಪ್ರಶ್ನೆ: ಮಾನುಷ ಇತ್ಯಾದಿ ವಾಕ್ಯದಿಂದ ಅವರು ಮನುಷ್ಯರಲ್ಲವೆಂದು ನಾವು ಒಪ್ಪಿದರೂ, ಅವರು ಋಜುಗಳೂ ಅಲ್ಲ ಎನ್ನುವುದೂ ಸಿದ್ಧವಾಗುವುದಿಲ್ಲವೇ?**

ಉತ್ತರ: ಹೇಗೆ ಸಿದ್ಧವಾಗುತ್ತದೆ? ಆ ವಾಕ್ಯ ಸ್ವರೂಪ ಸಾಧಕವಲ್ಲ ಎಂದಾದಮೇಲೆ, ಋಜುತ್ವಕ್ಕೂ ಬಾಧಕವಿಲ್ಲ, ದೇವತ್ವಕ್ಕೂ ಬಾಧಕವಿಲ್ಲ. ಇನ್ನು ಆ ವಾಕ್ಯ ಅವರನ್ನು ಮನುಷ್ಯರೇ ಅಂತ ಹೇಳುತ್ತದೆ ಎನ್ನ ಬಾರದು. ''ಮಾನವರಾಗಿ ಅವತರಿಸಿದ ಭೀಮಸೇನದೇವರು'' ಅನ್ನುವ ವಾಕ್ಯವನ್ನು ಲೇಖಕರೇ

15ನೇ ಪುಟದಲ್ಲಿ ಬರೆದಿದ್ದಾರೆ. ಅವರಿಗೂ ಇದೇ ಒಪ್ಪಿಗೆಯಾಗಬೇಕು. ಹಾಗೆ ನೋಡಿದರೆ, 'ಮಾನವರಂತೆ' ಅಂತ ಲೇಖಕರು ಹೇಳಬೇಕಿತ್ತು. ಮಾನವರಾಗಿ ಅಂದದ್ದರಿಂದ ಮನುಷ್ಯರಂತೆ ವ್ಯವಹಾರ ಮಾಡುವವರು ಅಂತ ಅವರೂ ಒಪ್ಪಿಕೊಳ್ಳಬೇಕು.

**ಪ್ರಶ್ನೆ : ಮಾನುಷವೆನ್ನುವ ವಾಕ್ಯದಿಂದ ಸ್ವರೂಪ ಸಿದ್ಧಿಸದಿದ್ದರೂ, ಅಲ್ಲಿ ಶ್ರೀ ವಾದಿರಾಜರು ನಮಗೆ ಮಹಾ ಕಾರ್ಯ ಮಾಡಲಾಗದು ಎನ್ನುವಾಗ, ಅವರ ಅಸಾಮರ್ಥ್ಯವೋ ಅವರಿಗೆ ದೋಷಗಳಿವೆಯೆಂದೋ ಸಿದ್ಧವಾಗುವುದಿಲ್ಲವೇನು ?**

ಉತ್ತರ: ಕೇವಲ ಅವಿಚಾರಿತ ಮೇಲ್ನೋಟದ ಅರ್ಥಗ್ರಹಣದಿಂದ ಅವರು ಅಸಮರ್ಥರೆನ್ನುವ ಶಂಕೆ ಬರುತ್ತದೆ. ಸರ್ವಜ್ಞರಾದ ಶ್ರೀ ವೇದವ್ಯಾಸದೇವರು, ಸರ್ವತ್ರ, ದಶಾರ್ಥಗಳನ್ನಿಟ್ಟು ಭಾಷಾವೈವಿಧ್ಯದಿಂದ ಮಹಾಭಾರತವನ್ನು ರಚಿಸಿರುವರು. ಅವರ ಅನುಗ್ರಹವಿಲ್ಲದೇ ಭಾರತಾರ್ಥ ಗೊತ್ತಾಗುವುದಿಲ್ಲವೆಂದು ತಿಳಿಯಿರಿ. ಹಾಗೆಯೇ ಶ್ರೀ ವೇದವ್ಯಾಸ ದೇವರು ಪ್ರತ್ಯಕ್ಷರಾಗಿ ಅನುಗ್ರಹಿಸಿದ್ದರಿಂದ, ಅವರ ಅನುಗ್ರಹ ಗಣನೆ ನಿಮಿತ್ತದಿಂದ ಈ ರೀತಿಯ ವಿನಯವನ್ನು ತೋರುವ ವಾಕ್ಯ ಪ್ರವೃತ್ತಿ ಶ್ರೀ ವಾದಿರಾಜರದೆಂದು ತಿಳಿಯಬೇಕು. ಶ್ರೀ ಜಯತೀರ್ಥರೂ, ತಮ್ಮನ್ನು ತಾವು, ವೇದಾರ್ಥವನ್ನು ಬಲ್ಲವರಲ್ಲ, ಇತ್ಯಾದಿಯಾಗಿ ನ್ಯಾಯಸುಧೆಯಲ್ಲಿ ಹೇಳಿಕೊಂಡಿದ್ದಾರೆ. ಅಲ್ಲಿ ಅವರಿಗೆ ಶ್ರೀಮದಾಚಾರ್ಯರ ಅನುಗ್ರಹ ಗಣನೆಮಾಡುವ ನಿಮಿತ್ತದಿಂದ ಪ್ರವೃತ್ತಿಯೆಂದು ತಿಳಿಯಬೇಕು. ವಿಷ್ಣುತತ್ವನಿರ್ಣಯ ಟೀಕೆಯ ಕೊನೆಯಲ್ಲಿ, ಶ್ರೀ ಜಯತೀರ್ಥರು, ಶ್ರೀಮದಾಚಾರ್ಯರ ಗ್ರಂಥಗಳಿಗೆ ಟೀಕೆ ಬರೆಯಲು, ದೇವತೆಗಳೇ ಅಧಿಕಾರಿಗಳು; ತಮ್ಮಂಥವರೂ, ಬರೆಯಲು ಪ್ರಯತ್ನ ಮಾಡುವುದು ಹಾಸ್ಯಾಸ್ಪದವೇ ಸರಿ ಅಂತ ಅಂದಿದ್ದಾರೆ. ಅವೆಲ್ಲಾ ಸ್ಥೂಲಾರ್ಥಕಗಳು. ಆದರಿಂದ ಶ್ರೀ ಜಯತೀರ್ಥರು ಮಂದಮತಿಗಳೆಂದು ಹೇಳಲು ಸಾಧ್ಯವೇ? ಶ್ರೀ ವಿಜಯದಾಸರು, ಶ್ರೀ ವಾದಿರಾಜರ ಮಹಾತ್ಮೆ ಬೋಧಿಸುವ ಸುಳಾದಿ ರಚಿಸಿ, ಅಲ್ಲಿ **''ಈ ಮುನಿಯು ಸಾಮಾನ್ಯನೆಂದು ಎಣಿಸಿದರೆ ಇನಸೂನು ( ಯಮದೇವರು) ಘನವಾದ ಶಿಕ್ಷೆ ಈವನು''** ಅಂತ ಎಚ್ಚರಿಸಿದ್ದಾರೆ.

**ಪ್ರಶ್ನೆ: ವಿನಯ ಪ್ರದರ್ಶನಕ್ಕೆ ಮಾನುಷ ಅಂತ ಯಾಕೆ ಹೇಳಿಕೊಳ್ಳಬೇಕು?**

ಉತ್ತರ: ಭಗವಂತನ ಮುಂದೆ ವಿನಯ ಪ್ರದರ್ಶನವು ಶ್ರೀ ವಾದಿರಾಜರ ಸ್ವಭಾವವು. ಆ ರೀತಿ ವಿನಯ ಪ್ರದರ್ಶನವು ಆ ವಾಕ್ಯದ ಸ್ಥೂಲ ಅರ್ಥ ಆದರೂ, ಅದು ಮೇಲ್ನೋಟಕ್ಕೆ ಮಾತ್ರ ಎಂಗು ತಿಳಿಯಿರಿ. ಮೇಲ್ನೋಟಕ್ಕೆ ಮಾತ್ರವಾದರೂ, ಅದರಲ್ಲಿ ಕಪಟವೇನಿಲ್ಲ. ಆದರೆ, ಅದಕ್ಕೆ ನಿಜವಾದ ಅರ್ಥ ಬೇರೆ ಇದೆ.

**ಪ್ರಶ್ನೆ: ಆ ಅರ್ಥವೇನು?**

ಉತ್ತರ: ಆ ವಾಕ್ಯದಲ್ಲಿ **''ಅಹಂ ತು''** ಎನ್ನುವಲ್ಲಿ 'ತು' ಶಬ್ದವು 'ಆದರೆ' ಅನ್ನುವ ಅರ್ಥದಲ್ಲಿದೆ. ''ನಾವು ಸಾಮಾನ್ಯ ಮನುಷ್ಯರಾಗಿದ್ದರೆ, ಇಂತಹ ಮಹಾಕಾರ್ಯಕ್ಕೆ ಎಲ್ಲಾದರೂ ಕೈ ಹಾಕುತ್ತಿದ್ದೆವೇನು? ಅಂತ ಅರ್ಥ'' (ಇಲ್ಲವೆಂದು ಭಾವ). ಭಾರತದ ಅರ್ಥ ಸಾಧನೆಗೆ, ಭಾರತೀರಮಣ ಪ್ರಾಣದೇವರು ಮೊದಲಾದ ದೇವತೆಗಳು ಮಾತ್ರ, ಸಮರ್ಥರೆಂದು ಹಿಂದಿನ ವಾಕ್ಯದಲ್ಲಿ ಶ್ರೀ ವಾದಿರಾಜರೇ



ಹೇಳಿದ್ದಾರೆ. ಅದನ್ನು ಹೊಂದಿಸಿ ಕೊಳ್ಳಬೇಕು. ಅದೇ ಶ್ರೀ ವಾದಿರಾಜರ ಭಾವವೆಂದು ತಿಳಿಯಿರಿ. ಈ ಅರ್ಥ ಅಂಗೀಕರಿಸದಿದ್ದರೆ, ಅಲ್ಲಿಯೇ, ಪೂರ್ವಾಪರ ವಿರೋಧ ಬಂದುಬಿಡುತ್ತದೆ. ಶ್ರೀ ಪ್ರಾಣದೇವರು ಮೊದಲಾದ ದೇವತೆಗಳು ಮಾತ್ರ ಸಮರ್ಥರೆಂದು ಹೇಳಿ, ನಾವು ಮನುಷ್ಯರು, ಈಗ ಮಾಡಿದೆವೆನ್ನುವುದು ಎಲ್ಲಾದರೂ ಕೂಡುತ್ತದೆಯೇ? ಇಲ್ಲ. ನಾವೂ ಅಂತಹವರೇ ಅನ್ನುವುದೇ ಸಿದ್ಧವಾಗುತ್ತದೆ. ಆದ್ದರಿಂದ ಲಕ್ಷಾಲಂಕಾರದ ವಾಕ್ಯದಿಂದ ಅವರ ಋಜುತ್ವ ನಿರಾಕರಣೆ ಮಾಡಲು ಸಾಧ್ಯವಿಲ್ಲ. ಹಾಗೆ ನೋಡಿದರೆ, ಪೂರ್ಣ ಭಾರತಕ್ಕೆ ವ್ಯಾಖ್ಯಾನ ಮಾಡಿರುವುದೇ ಋಜುತ್ವಸಾಧಕ ಯುಕ್ತಿಯು.

**ಪ್ರಶ್ನೆ: ಲಕ್ಷಾಲಂಕಾರದ ವಾಕ್ಯದಿಂದ ಪ್ರಯೋಜನವಾಗದಿದ್ದರೆ, ಶ್ರೀ ವಾದಿರಾಜರ ಬೇರೆ ವಾಕ್ಯಗಳನ್ನು ಅವರು ಉದಾಹರಿಸಿದ್ದಾರೆ. ಆದರಿಂದ ಅವರ ಋಜುತ್ವವು ನಿಲ್ಲದೆಂದು ಲೇಖಕರು ಹೇಳಿರುತ್ತಾರೆ. ಅದು ಸರಿಯೇ?**

ಉತ್ತರ: ಸರಿಯಲ್ಲ. ಆ ಎಲ್ಲಾ ವಾಕ್ಯಗಳಲ್ಲಿ ಶ್ರೀ ವಾದಿರಾಜರು ತಾವು ಶ್ರೀಮದಾಚಾರ್ಯರಿಗಿಂತ ಕಡಿಮೆ, ದೇವರ ದಾಸ ಇತ್ಯಾದಿ ಭಾವ ಪ್ರದರ್ಶನವನ್ನು ಚೆನ್ನಾಗಿ ಮಾಡಿದ್ದಾರೆ. ಅದು ಅವರ ಸ್ವಭಾವ. ಉತ್ತಮ ದೇವತೆಗಳೆಲ್ಲಾ ತಮಗಿಂತ ಶ್ರೇಷ್ಠರ ಮುಂದೆ, ತಾವು ಕಡಿಮೆ, ಅವರ ದಯೆಯಿಂದಲೇ ಇರುವವರು ಎಂದು ನಮ್ರಭಾವ ಪ್ರದರ್ಶನ ಮಾಡುವ ನಡವಳಿಕೆ ಉಳ್ಳವರು. ಇದು ದೇವತೆಗಳ ಮೂಲ ರೂಪದಲ್ಲೂ ಅವತಾರದಲ್ಲೂ ಅನ್ವಯಿಸತಕ್ಕದ್ದು ಎಂದು ತಿಳಿಯಿರಿ. ಶ್ರೀಮದಾಚಾರ್ಯರು ಬದರೀನಾರಾಯಣ ದೇವರ ಮುಂದೆ ತಮ್ಮ ಗೀತಾಭಾಷ್ಯ ಮಂಗಳ ಶ್ಲೋಕದಲ್ಲಿ ಮೊದಲು *'ಶಕ್ತಿತಃ'* ಅಂತ ಪದಪ್ರಯೋಗ ಮಾಡಿ ತಾವು ಅಲ್ಪರೇನೋ ಅಂತ ಭಾವ ತೋರಿಸಿದ್ದರು. ಅದೇ ಅವರ ನಡವಳಿಕೆ. ಆದರೆ, ದೇವರ ಆಜ್ಞೆಯಿಂದ ಅದನ್ನು *'ಲೇಶತಃ'* ಅಂತ ತಿದ್ದಿದರು. ದೇವರು ಆಜ್ಞೆ ಮಾಡದಿದ್ದರೆ, ಶಕ್ತಿತಃ ಅಂತ ಪದವೇ ಉಳಿಯುತ್ತಿತ್ತು. ಆಗ ಶ್ರೀ ಮದಾಚಾರ್ಯರು ಋಜುಗಳಲ್ಲವೇನೋ ಎಂಬ ಶಂಕೆ ಬರಲು ಸಾಧ್ಯವಿತ್ತು. ಹಾಗೇ, ಶ್ರೀ ವಾದಿರಾಜರು ಶ್ರೀ ವೇದವ್ಯಾಸದೇವರ ಮುಂದೆ, ನೀತಿ ತೋರಿಸಲು, ತಮ್ಮಂಥವರು, ಮಂದಬುದ್ಧಿಗಳೆಂದು ಹೇಳಿಕೊಂಡಿರುವರು. ಭೂಮಿಯಲ್ಲಿ ನರವತ್ ಪ್ರವೃತ್ತಿಯನ್ನು ಅವರು ತೋರುವುದರಿಂದ, ಲೋಕ ಶಿಕ್ಷಣ ಎಂಬುದೂ ಇರುತ್ತದೆ. ಕೇವಲ ಆ ವಾಕ್ಯಗಳಿಂದ, ಶ್ರೀ ವಾದಿರಾಜರ ಸ್ವರೂಪ ವಿಷಯ ಸಿದ್ಧಿಸಲಾಗುವುದಿಲ್ಲ.

**ಪ್ರಶ್ನೆ: ಹಾಗಾದರೆ ಶ್ರೀ ವಾದಿರಾಜರ ಆ ವಾಕ್ಯಗಳಿಂದ ಅವರು ಋಜುಗಳಲ್ಲವೆಂಬುದು ಸಿದ್ಧಿಯಾಗುತ್ತದೆ ಎಂದು ಲೇಖಕರು ಏಕೆ ಹೇಳಿರುತ್ತಾರೆ?**

ಉತ್ತರ: ಲಕ್ಷಾಲಂಕಾರ ವಾಕ್ಯದಂತೆ, ಅವರ ಇತರ ಗ್ರಂಥದ ವಾಕ್ಯಗಳಲ್ಲೂ, ಕಣ್ಣಿಗೆ ಕಾಣುವ ಹಾಗೆ ಅವರು ಅಲ್ಪರೇನೋ ಅನ್ನುವ ಶ್ರೀ ವಾದಿರಾಜರ ಭಾವ ಗೋಚರವಾಗುತ್ತದೆಯೇ ಹೊರತು ಅವರ ಸ್ವರೂಪವಲ್ಲ. ಲೇಖಕರ ಪ್ರಕಾರ, ಶ್ರೀ ವಾದಿರಾಜರ ಸ್ವರೂಪ ಗೊತ್ತಾಗುವುದಾದರೆ, ಯಾಕೆ ಅದನ್ನು ತಮ್ಮ ಪುಸ್ತಕದಲ್ಲಿ ಬರೆಯಲಿಲ್ಲ? ಉತ್ತಮ ದೇವತೆಗಳು ಭೂಮಿಯಲ್ಲಿ ಅವತರಿಸಿದಾಗ, ತಮ್ಮ ಸ್ವರೂಪವನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡುವುದರಿಂದ, ಆ ಎಲ್ಲಾ ವಾಕ್ಯಗಳ ಪ್ರವೃತ್ತಿಯು, ಆಪಾತತಃ ಸ್ವರೂಪ ಗೂಹನವೆಂದೇ ವಿವೇಕಿಗಳಿಗೆ ಚೆನ್ನಾಗಿ ಗೊತ್ತಾಗುತ್ತದೆ.

**ಪ್ರಶ್ನೆ : ಸ್ವರೂಪ ಗೂಹನವೇ ಎಂದು ಯಾಕೆ ಹೇಳಬೇಕು?**

ಉತ್ತರ: 'ಮಾನುಷ ' ಇತ್ಯಾದಿ ವಾಕ್ಯಗಳ ಸ್ಥೂಲಾರ್ಥವು, ನಮಗೂ ಲೇಖಕರಿಗೂ ಒಪ್ಪಿಗೆ ಆಗದಿದ್ದುದರಿಂದ, ಅಂತಹ ವಾಕ್ಯಗಳು ನಿರರ್ಥಕ ಎನ್ನಬಾರದು. ಉತ್ತಮರು, ಜ್ಞಾನಿಗಳು ಎಂದಿಗೂ ವ್ಯರ್ಥ ವಾಕ್ಯ ಪ್ರಯೋಗ ಮಾಡುವವರಲ್ಲ. ಹಾಗೆಯೇ, ಶ್ರೀ ವಾದಿರಾಜರು ಆ ವಾಕ್ಯಗಳಿಗೆ ಸೂಕ್ಷ್ಮವಾದ ದಿವ್ಯ ಅರ್ಥಗಳನ್ನಿಟ್ಟು ರಚಿಸಿದ್ದರೂ, ಮೇಲ್ನೋಟಕ್ಕೆ ಲೋಕ ಶಿಕ್ಷಣ, ವಿನಯ ಪ್ರದರ್ಶನ, ನಮ್ರ ಭಾವ ಇವೇ ಪ್ರವೃತ್ತಿಯನ್ನು ತೋರುತ್ತಾರೆಂದು ನಿಶ್ಚಯಿಸದೇ ಬೇರೆ ದಾರಿ ಇಲ್ಲ. ಆಗಮದಿಂದ ಶ್ರೀ ವಾದಿರಾಜರು ದೊಡ್ಡವರೆಂದು ಗೊತ್ತಾಗುವುದರಿಂದ, ಆಯಾ ವಾಕ್ಯಗಳ ನೆಪದಿಂದ ಶ್ರೀ ವಾದಿರಾಜರು, ಲೋಕದ ದಷ್ಟಿಯಿಂದ, ತಮ್ಮ ಸ್ವರೂಪವನ್ನು ಬೇಕೆಂದೇ ಮುಚ್ಚಿಕೊಳ್ಳುತ್ತಾರೆಂದು ಹೇಳಬೇಕಾಗುತ್ತದೆ.

**ಪ್ರಶ್ನೆ : ಲೇಖಕರು ಯುಕ್ತಿ ಮಲ್ಲಿಕಾ ವಾಕ್ಯ ಉದಾಹರಿಸಿದ್ದಾರೆ. ಅದರಲ್ಲಿ ಶ್ರೀ ವಾದಿರಾಜರಿಗೆ ವಾಸ್ತವ ವಿದ್ಯಾ ದಾರಿದ್ರ್ಯ ದೋಷ ಇದೆಯೆಂದು ಹೇಳಿದ್ದಾರೆ. ಅದರಿಂದ ಅದು ಶ್ರೀ ವಾದಿರಾಜರ ವಿನಯ ಪ್ರದರ್ಶನವೂ ಅಲ್ಲ, ಸ್ವರೂಪಗೂಹನವೂ ಅಲ್ಲ, ಯಥಾರ್ಥವಾದದ್ದೇ ಅಂದಿದ್ದಾರೆ. ದೇವ ಋಷಿ ಗಂಧರ್ವ ಮನುಷ್ಯೋತ್ತಮ ಪರ್ಯಂತ ಸೇನೆಯಲ್ಲಿ ನಾನು ಭಿಕ್ಷುಕ ಅಂತ ಶ್ರೀ ವಾದಿರಾಜರ ಅಭಿಪ್ರಾಯವೆಂದೂ ತೋರಿಸಿದ್ದಾರೆ. ಅದು ಹೇಗೆ ಕೂಡುತ್ತದೆ?**

ಉತ್ತರ: ಶ್ರೀ ವಾದಿರಾಜರಿಗೆ ವಿದ್ಯಾದಾರಿದ್ರ್ಯ ದೋಷವಿದೆಯೆಂದು ಪ್ರತಿಪಾದಿಸುವುದು ಅನರ್ಥಕಾರಿಯಾದ ನಿರ್ಣಯವು. ಮಹಾಭಾರತ ಲಕ್ಷಾಲಂಕಾರ, ಯುಕ್ತಿ ಮಲ್ಲಿಕಾ ಇತ್ಯಾದಿ ದಿವ್ಯ ಗ್ರಂಥ ರಚಿಸಿದ ಶ್ರೀ ವಾದಿರಾಜರಿಗೆ, ನಿಜವಾದ ವಿದ್ಯಾ ದಾರಿದ್ರ್ಯವಿದೆ ಎನ್ನುವುದಾದರೆ, ಅದಕ್ಕಿಂತ ಪ್ರತ್ಯಕ್ಷ ವಿರೋಧ ಇನ್ನಿಲ್ಲ.

**ಪ್ರಶ್ನೆ : ಅದು ಹೇಗೆ ಪ್ರತ್ಯಕ್ಷ ವಿರುದ್ಧವು?**

ಉತ್ತರ: ವಿದ್ಯಾ ದಾರಿದ್ರ್ಯ ಅಲ್ಲಿ ಹೇಳಿಕೊಂಡಿದ್ದು, ಅವರಿಗೆ ಪೂರ್ವ ಕಾಲದಲ್ಲಿ ಇದ್ದದ್ದು, ಈಗ ದೇವ ಋಷಿ ಮನುಷ್ಯೋತ್ತಮಾದಿ ಸೇನೆಯ ಸೇವೆಯಿಂದ, ಅದು ಪರಿಹೃತವಾಯಿತು ಅನ್ನುವುದೇ ಶ್ರೀ ವಾದಿರಾಜರ ಭಾವ ಅಂತ ಹೇಳುವುದಾದರೆ, ಅದು ಅಲ್ಲಿನ ಕ್ರಿಯಾಪದ ಪ್ರಯೋಗದಿಂದಲೇ ಕೂಡುವುದಿಲ್ಲ. ಈಗಿರುವ ವಿದ್ಯಾದಾರಿದ್ರ್ಯ ಮುಂದೆ ಪರಿಹೃತವಾಗಲಿ ಎನ್ನುವ ಭಾವವೇ ನಿರೂಪಿತವಾಗಿದೆ ಎನ್ನುವುದಾದರೆ, ಆ ದಿವ್ಯ ಗ್ರಂಥ ರಚನೆ ಮಾಡಿದ (ಸುಮಾರು 5000 ಶ್ಲೋಕದ ಗ್ರಂಥ ರಚಿಸಿದ ಮೇಲೆ ವಿದ್ಯಾದಾರಿದ್ರ್ಯ ಹೇಳಿಕೊಂಡ) ಅವರಿಗೇ ಸ್ವವಾಕ್ಯ ವಿರೋಧವು. ನನ್ನ ತಾಯಿ ಬಂಜೆ ಅಂದಂತೆ, ಪ್ರತ್ಯಕ್ಷ ವಿರೋಧವು. ಆದ್ದರಿಂದ, ಅಲ್ಲೇ ಮನುಷ್ಯೋತ್ತಮ ಪರ್ಯಂತ ಸೇನೆಯಲ್ಲಿ, ವಿದ್ಯಾಭಿಕ್ಷುಕ ನಾನು, ಅನ್ನುವ ವಾಕ್ಯವೂ ಪ್ರತ್ಯಕ್ಷಕ್ಕೆ ವಿರುದ್ಧವೇ. ಆ ರೀತಿ ದುರರ್ಥದ ಪ್ರತ್ಯಕ್ಷ ವಿರೋಧವನ್ನು ವಾದಿರಾಜರಿಗೆ ಕಲ್ಪಿಸಬಾರದು.

**ಪ್ರಶ್ನೆ: ಶ್ರೀ ವಾದಿರಾಜರೇ ಹೇಳಿಕೊಂಡಿದ್ದರಿಂದ ಯಾಕೆ ಕಲ್ಪಿಸಬಾರದು?**

ಉತ್ತರ : ಬ್ರಹ್ಮದೇವರು, ತಮ್ಮ ಮೂಲರೂಪದಲ್ಲೇ, ಸಾಕ್ಷಾತ್ ನಾರಾಯಣನ ಮುಂದೆ ನಾನು



ಪಾಪಿಷ್ಠ, ನಾನು ಕ್ರೂರ, ನಾನು ಕೃತಘ್ನ, ದುಷ್ಕರ್ಮ ಭಾಜನ ಇತ್ಯಾದಿ ಹೇಳಿಕೊಂಡರು. ಬ್ರಹ್ಮದೇವರು ಸುಳ್ಳನ್ನು ಹೇಳುವುದಿಲ್ಲ. ಅವರಲ್ಲಿ ಆ ದೋಷಗಳೂ ಇಲ್ಲ. ಹಾಗಾದರೆ, ಅವರಿಗೆ ಪ್ರತ್ಯಕ್ಷ ವಿರೋಧ ಬರಲಿ, ಅಂದರೆ ನಾವು ಒಪ್ಪುವುದಿಲ್ಲ. ಹಾಗೆಯೇ, ಶ್ರೀ ವಾದಿರಾಜರಲ್ಲೂ ಅವರ ಮಹಾ ಮತಿಯು, ನಮಗೆ, ಪ್ರತ್ಯಕ್ಷ ಸಿದ್ಧವಾದ್ದರಿಂದ, ಈ ರೀತಿಯ ಪ್ರತ್ಯಕ್ಷ ವಿರೋಧ ಒಪ್ಪಬಾರದು. ಶ್ರೀ ವಾದಿರಾಜರು ಸುಳ್ಳನ್ನಾಡುವವರಲ್ಲ. ಸಾಕ್ಷಾತ್ ನಾರಾಯಣನೇ ಸನಕಾದಿಗಳನ್ನು ಉದ್ದೇಶಿಸಿ, ''ಛಿಂದ್ಯಾಂ ಸ್ವಬಾಹುಮಪಿ ಪ್ರತಿಕೂಲವೃತ್ತಿಂ'' ಎಂದಿರುವನು. ಆ ಭಾಗವತ ವಾಕ್ಯದಲ್ಲಿ, 'ಬ್ರಾಹ್ಮಣ ವಿರೋಧ ಮಾಡುವ ಸ್ವಂತ ಕೈಯನ್ನೇ ತುಂಡರಿಸೇನು' ಅಂತ ಸಾಕ್ಷಾನ್ನಾರಾಯಣನೇ ಹೇಳಿಕೊಂಡಿದ್ದಾನೆ. ಅವನು ಅಚ್ಛೇದ್ಯ ಅಭೇದ್ಯ ಶರೀರ ಉಳ್ಳವನು, ಜ್ಞಾನಾನಂದ ಶರೀರನೂ ಆಗಿರುವನು. ಆದ್ದರಿಂದ, ಅಲ್ಲೂ, ಪ್ರತ್ಯಕ್ಷ ವಿರೋಧ ಪ್ರಾಪ್ತವಾಯಿತು ಅಂದರೆ ನಾವು ಒಪ್ಪುವುದಿಲ್ಲ.

**ಪ್ರಶ್ನೆ: ಹಾಗಾದರೆ, ಆ ಪ್ರತ್ಯಕ್ಷ ವಿರೋಧ ಹೇಗೆ ಪರಿಹರಿಸುವುದು ?**

ಉತ್ತರ: ಶ್ರೀ ವಾದಿರಾಜರ ಆ ವಾಕ್ಯಕ್ಕೆ, ಬ್ರಹ್ಮದೇವರ ಆ ವಾಕ್ಯದಂತೆ, ಅವರ ನಿಜವಾದ ಉದ್ದೇಶದ ಅರ್ಥ ಹೇಳುವುದೇ ಪರಿಹಾರಕವು. ಬ್ರಹ್ಮದೇವರು, ಜೀವಗಣಕ್ಕೆ ಅಭಿಮಾನಿಗಳಾದ್ದರಿಂದ, ಜೀವರನ್ನು ಅಭಿಪ್ರಾಯದಲ್ಲಿಟ್ಟುಕೊಂಡು, ಅವರು ಭಗವಂತನ ಮುಂದೆ, ಆ ರೀತಿ ವಿನಯ ಪ್ರದರ್ಶಿಸಿರುವರು. ಶ್ರೀ ವಾದಿರಾಜರು, ಶ್ರೀಮದಾಚಾರ್ಯರ ಮುಂದೆ, ಈ ರೀತಿ ವಿನಯ ಪ್ರದರ್ಶಿಸಿರುವರು. ಜಿಜ್ಞಾಸುಗಳು, ಆ ರೀತಿ ವಿದ್ಯಾ ಭಿಕ್ಷುಗಳು ಆಗಿರಬೇಕೆಂದು, ತೋರಿಸುವುದು ಅಲ್ಲಿ ಶ್ರೀ ವಾದಿರಾಜರ ಭಾವ. ಅದರಿಂದ ಏನೂ ವಿರೋಧವಿಲ್ಲ. ಅಲ್ಲಿ ಸಾಕ್ಷಾತ್ ನಾರಾಯಣನು ಹೇಳಿದ ವಾಕ್ಯದಲ್ಲಿ, ಸ್ಥೂಲಾರ್ಥ ಕೂಡದೇ ಇರುವುದರಿಂದ, ಅರ್ಥಾಂತರವನ್ನೇ ಹೇಳಬೇಕು.

**ಪ್ರಶ್ನೆ: ಹಾಗೆ ಯಾಕೆ ಹೇಳಬೇಕು? ಲೇಖಕರು ತೋರಿಸಿದಂತೆ ಶ್ರೀ ವಾದಿರಾಜರಿಗೆ ವಿದ್ಯಾದಾರಿದ್ರ್ಯ ಒಪ್ಪಿದರೆ ಏನು ಹಾನಿ?**

ಉತ್ತರ: ವಿದ್ಯಾದಾರಿದ್ರ್ಯವೆಂದರೆ, ವಿದ್ಯೆ ಏನೇನೂ ಇಲ್ಲದ ಶುದ್ಧ ಶುಂಠನೆಂಬರ್ಥ ಗ್ರಾಹ್ಯವೋ? ಅಥವಾ ವಿದ್ಯೆಯಲ್ಲಿ ಕೊರತೆಯಿದೆ ಎಂಬ ಅಭಿಪ್ರಾಯ ಗ್ರಾಹ್ಯವೋ? ವಾದಿರಾಜರು ಶುದ್ಧ ಶುಂಠನೆಂಬುದನ್ನು ಲೇಖಕರು ಒಪ್ಪಿಲ್ಲ, ಮಹಾಜ್ಞಾನಿಗಳೆಂದಿದ್ದಾರೆ. ಇನ್ನು ವಿದ್ಯೆಯಲ್ಲಿ ಕೊರತೆ ಎಂದರೆ, ಬ್ರಹ್ಮದೇವರ ಜ್ಞಾನಕ್ಕೆ, ಶ್ರೀಮದಾಚಾರ್ಯರ ಜ್ಞಾನಕ್ಕೆ ಹೋಲಿಸಿದರೆ, ವಾದಿರಾಜರ ಜ್ಞಾನವು, ಅಭಿವ್ಯಕ್ತಿಯಲ್ಲಿ ಕಿಂಚಿತ್ ಕಡಿಮೆಯೆನ್ನುವುದು ಶಾಸ್ತ್ರ ಸಿದ್ಧವೇ. ಅಲ್ಲಿ ಭಗವದ್ವಿಷಯಕ ಜ್ಞಾನದ ಕೊರತೆ ಎಂದರೆ, ಸರಿ. ಆ ರೀತಿಯ ಕೊರತೆಯನ್ನು ಚತುರ್ಮುಖನಿಗೂ, ಶಾಸ್ತ್ರಕಾರರು ಒಪ್ಪಿರುತ್ತಾರೆ. ಭಗವಂತನ ಸೃಷ್ಟಿ, ಸ್ಥಿತಿ, ಜ್ಞಾನ, ಅಜ್ಞಾನಾದಿ ಅಷ್ಟವಿಧ ಕರ್ತೃತ್ವವನ್ನು, ಮುಕ್ತ ಬ್ರಹ್ಮರ ವಿಷಯದಲ್ಲೂ, ಶಾಸ್ತ್ರಕಾರರು ಒಪ್ಪಿದ್ದಾರೆ. ಲಕ್ಷ್ಮೀ ವಿಷಯಕವಾದ, ವಿಷ್ಣು ವಿಷಯಕವಾದ, ಪೂರ್ಣ ಜ್ಞಾನದ ಅಭಾವ, ಮುಕ್ತ ಬ್ರಹ್ಮರಿಗೂ ಇದೆ ಎಂದು ಶಾಸ್ತ್ರ ಹೇಳುತ್ತದೆ. ಆದ್ದರಿಂದ ಈ ವಾಕ್ಯದಿಂದ ಶ್ರೀ ವಾದಿರಾಜರು ಋಜುಗಳಲ್ಲ ಅನ್ನುವುದು ಸಿದ್ಧಿಯಾಗುವುದೇ ಇಲ್ಲ. ಶ್ರೀ ವಾದಿರಾಜರ ಋಜುತ್ವಕ್ಕೆ ಏನೂ ಹಾನಿ ಇಲ್ಲ.

**ಪ್ರಶ್ನೆ: ಆ ವಾಕ್ಯದಿಂದ, ಶ್ರೀ ವಾದಿರಾಜರಿಗೆ ಸಂಶಯಗಳಿವೆ, ಅವರಿಗೆ ಸರಿಯಾದ ಜ್ಞಾನ ಇಲ್ಲ ಅಂತ ಅರ್ಥ ಹೇಳಬಹುದೇ?**

ಉತ್ತರ: ಲೇಖಕರೇ ಹಾಗೆ ನಿರಾಧಾರ ಆಪಾದನೆಯನ್ನು ತಮ್ಮ ಪುಸ್ತಕದ ಕೊನೆಯಲ್ಲಿ (ಪುಟ 19) ಮಾಡಿರುತ್ತಾರೆ. ಆ ವಾಕ್ಯದಿಂದ ಶ್ರೀ ವಾದಿರಾಜರಿಗೆ ಸಂಶಯಗಳಿವೆ ಅಂತ ಅರ್ಥ ದೊರಕುವುದೇ ಇಲ್ಲ. ಶ್ರೀ ವಾದಿರಾಜರು ತಾವು ಮಹಾಮತಿಗಳೆಂದೂ ಹೇಳಿಕೊಂಡಿದ್ದಾರೆ. ಲೇಖಕರು ಅದನ್ನು ಗಣನೆಯೇ ಮಾಡಲಿಲ್ಲ. ಇದನ್ನು ಮುಂದೆ ವಿವರಿಸುತ್ತೇವೆ. ಶ್ರೀ ವಾದಿರಾಜರಿಗೇ, ವಿದ್ಯಾದಾರಿದ್ರ್ಯವಿದೆ, ಸರಿಯಾದ ಜ್ಞಾನವಿಲ್ಲವೆಂದು ನಿರ್ಣಯಿಸಲು, ಒಂದೇ ಒಂದು ಗ್ರಂಥರಚನೆ ಮಾಡಿಲ್ಲದ, ಈಗಿನ ಕಾಲದ ಪಂಡಿತರಿಗೆ ಏನು ಅರ್ಹತೆ ಇದೆ? ಅಂತಹ ಈಗಿನ ಕಾಲದ ಪಂಡಿತರಿಗೆ ಇನ್ನೆಷ್ಟು ವಿದ್ಯಾದಾರಿದ್ರ್ಯ ಇರಬಹುದು?

**ಪ್ರಶ್ನೆ: ಹಾಗಿದ್ದರೂ, ಶ್ರೀ ವಾದಿರಾಜರು ಯಾಕೆ ವಿದ್ಯಾದಾರಿದ್ರ್ಯ ಹೇಳಿಕೊಂಡಿದ್ದಾರೆ?**

ಉತ್ತರ: ಲೇಖಕರು, ಸುರೋತ್ತಮ ತೀರ್ಥರ ಟಿಪ್ಪಣಿಯಿಂದ ತೋರಿಸಿದಂತೆ, ಋಷಿ ಗಂಧರ್ವಾದಿ ಸೇನೆಯಲ್ಲಿ ವಿದ್ಯಾ ಭಿಕ್ಷುಕ ಎಂದು ಶ್ರೀ ವಾದಿರಾಜರು ಹೇಳಿಕೊಂಡಾಗ, ತಮ್ಮ ನಿಜ ಸ್ವರೂಪ ಗೂಹನವು ಅಲ್ಲಿ ಪರಮಾರ್ಥವು. ನಿಜವಾಗಿ, ಶ್ರೀ ವಾದಿರಾಜರು ಋಷಿಗಳಿಂದ, ಮನುಷ್ಯರಿಂದ ಕಲಿಯಬೇಕಾದ್ದಿಲ್ಲ. ತಮ್ಮ 22-24 ವರ್ಷಗಳಷ್ಟು ಹೊತ್ತಿಗೇ ಶ್ರೀ ವಾದಿರಾಜರು, ವಿಜಯನಗರದಲ್ಲಿ ಸರ್ವಶಾಸ್ತ್ರಗಳ ಪ್ರಸಂಗದ ಸಭೆಯಲ್ಲಿ ಸರ್ವವಿಧಜಯ ಸಾಧಿಸಿದವರು. ಮಹಾರಾಜರಿಂದ ಪ್ರಸಂಗಾಭರಣ ತೀರ್ಥರೆಂಬ ಬಿರುದು ಅವರಿಗೆ ಬಂದಿದೆ. ಶ್ರೀ ವ್ಯಾಸರಾಜ ಸ್ವಾಮಿಗಳೇ, ''ಮತ್ತವಾದಿಗಳ ನೆತ್ತಿಯ ತೊಣೆದು ಹತ್ತಿದೆ ಮುತ್ತಿನ ಗದ್ದುಗೆಯನ್ನು'' ಅಂತ ಶ್ರೀ ವಾದಿರಾಜರನ್ನು ಹೊಗಳಿದ್ದಾರೆ. ಶ್ರೀ ವಾದಿರಾಜರ ರತ್ನಸಿಂಹಾಸನಾರೋಹಣ ಅಲ್ಲಿ ಪ್ರಸಿದ್ಧವಾಯಿತು. ಅಷ್ಟು ವಯಸ್ಸಿಗೆ, ಶ್ರೀ ವಾದಿರಾಜರು, ಯಾವ ಮನುಷ್ಯರ ಹತ್ತಿರ ವಿದ್ಯಾಭಿಕ್ಷುಕರಾಗಿದ್ದರು? ಮುಂದೆ ಯಾರ ಬಳಿ ವಿದ್ಯೆ ಕಲಿತರು? ಯಾರೂ ಇಲ್ಲ. ವಿದ್ಯಾ ದಾರಿದ್ರ್ಯವಿದ್ದರೆ, ಶೃಂಗೇರಿಯಲ್ಲಿ, ಕಾಶಿಯಲ್ಲಿ, ಕುಂಭಕೋಣದಲ್ಲಿ ಹೇಗೆ ಸರ್ವ ಪ್ರತಿವಾದಿಗಳನ್ನು ಜಯಿಸಿ, ಮಧ್ವಮತ ಸ್ಥಾಪನೆ ಮಾಡಿದರು? ಆದ್ದರಿಂದ ಆ ಮೇಲ್ನೋಟದ ಅರ್ಥ ಕೂಡುವುದೇ ಇಲ್ಲ.

**ಪ್ರಶ್ನೆ: ಹಾಗಾದರೆ ಆ ವಾಕ್ಯದ ಸರಿಯಾದ ಅರ್ಥವೇನು?**

ಉತ್ತರ: ಆ ವಾಕ್ಯದ ಸರಿಯಾದ ಅರ್ಥವೇನೆಂದರೆ, ಜನರ ವಿದ್ಯಾ ದಾರಿದ್ರ್ಯ ದೋಷವನ್ನು ನಾವು ನೋಡಿ, ಯತ್ಕಿಂಚಿತ್ ವ್ಯಸನ ಹೊಂದಿ, ನಾವು ಭಿಕ್ಷುಕ = ಯಾಚಕ ಅಂದರೆ ಯತಿರೂಪದಿಂದ, ಭೂಮಿಯಲ್ಲಿ ತತ್ವವನ್ನು ವಿಸ್ತರಿಸಿದ್ದೇವೆ, ಎಂದೇ ಶ್ರೀ ವಾದಿರಾಜರ ಭಾವ. ಅದು ಬ್ರಹ್ಮಾಂಡ ಪುರಾಣಕ್ಕೆ ಅನುಸಾರಿಯೇ ಆಗಿದೆ. ಶ್ರೀ ವಾದಿರಾಜರೇ ತಮ್ಮನ್ನು ಸರ್ವಜ್ಞರೆಂದು ಹೇಳಿಕೊಂಡಿದ್ದಾರೆ. 3 ಕೋಟಿ ಋಷಿಗಳು, ತಮ್ಮ ಶಿಷ್ಯತ್ವ ವಹಿಸಿದ್ದಾರೆಂದೂ ಹೇಳಿಕೊಂಡಿದ್ದಾರೆ. ಆ ವಾಕ್ಯಗಳನ್ನೂ ಸೇರಿಸಿ ಸಮನ್ವಯ ಮಾಡಿಕೊಂಡು, ಅರ್ಥ ಸಾಧಿಸಬೇಕು. ಯುಕ್ತಿ ಮಲ್ಲಿಕಾ ಗ್ರಂಥ ರಚನೆಯ ಮೂಲ ಉದ್ದೇಶವೇ, ಲೋಕದ ಜನರ ವಿದ್ಯಾದಾರಿದ್ರ್ಯ ಪರಿಹಾರವೆಂಬುದಾಗಿದೆ.



**ಪ್ರಶ್ನೆ: ಅಲ್ಲೇ ಮುಂದೆ ''ತೇಷಾಂ ಕೃಪಯಾ ಈಷದ್ ವಿದ್ಯಾಭ್ಯಾಸವಾನ್'' ಅಂತ ಸುರೋತ್ತಮರ ಟಿಪ್ಪಣಿ ಇದೆಯಲ್ಲಾ?**

ಉತ್ತರ: ಅಲ್ಲಿ ಸುರೋತ್ತಮರ ಟಿಪ್ಪಣಿ ಶ್ರೀ ವಾದಿರಾಜರ ಅಭಿಪ್ರಾಯವೇ ಹೊರತು ಬೇರೆಯಲ್ಲ. ಸ್ವಯಂ ಸರ್ವಜ್ಞರಾದ ನಾವು ಭೂತಳದಲ್ಲಿ ಕಲಿಯಬೇಕಾದ್ದು ಏನೂ ಇಲ್ಲ. ಲೋಕವೃತ್ತಿಯಿಂದ ಶ್ರೀ ವಾಗೀಶತೀರ್ಥರು ಮೊದಲಾದವರಲ್ಲಿ ಈಷತ್ ಅಂದರೆ ಅತ್ಯಲ್ಪ ವಿದ್ಯಾಭ್ಯಾಸವನ್ನು ಮಾಡಿದಂತೆ ತೋರಿಸಿದೆವು ಎಂದೇ ಶ್ರೀ ವಾದಿರಾಜರ ಭಾವವು.

**ಪ್ರಶ್ನೆ: ''ಸ ಏವ ಮಧ್ವೋ ವಿದ್ರಾವಯೇತ್ ದಾರಿದ್ರ್ಯಂ'' ಅಂತ ಮುಂದಿದೆಯಲ್ಲಾ?**

ಉತ್ತರ: ನಮ್ಮೊಳಗೆ ನಿಂತು ಜನರ ವಿದ್ಯಾದಾರಿದ್ರ್ಯವನ್ನು ಪರಿಹರಿಸುವವರು ಶ್ರೀಮದಾಚಾರ್ಯರೇ ಅನ್ನುವ ನಮ್ಮ ಭಾವ ಪ್ರದರ್ಶನವೇ ಅಲ್ಲಿಯ ಭಾವವು.

**ಪ್ರಶ್ನೆ: ಮತ್ತೆ ಮುಂದೆ '' ದದ್ಯಾತ್ ಮಧ್ವೋ ಗತಿಂ ಚ ಮೇ'' ಅಂತಿದೆಯಲ್ಲಾ?**

ಉತ್ತರ: ಶ್ರೀಮದಾಚಾರ್ಯರು ಅದ್ಯಾಪಿ ಶ್ರೀವೇದವ್ಯಾಸದೇವರ ಮುಂದೆ ಸ್ಥಿತರಾಗಿದ್ದಾರೆಂದು ನಂಬಿದ್ದೇವೆ. ಹಾಗೆಯೇ, ವಾದಿರಾಜರೂ ತಾವು ಉತ್ತರ ಬದರಿಯಲ್ಲಿ ಶ್ರೀ ವೇದವ್ಯಾಸ ದೇವರ ಎದುರು ಸ್ಥಿತರಾಗಿದ್ದೇವೆಂದು ಹೇಳಿಕೊಂಡಿದ್ದಾರೆ. ಆ ರೀತಿಯ ಶ್ರೀಮದಾಚಾರ್ಯರ ವೈಭವ, ವಾದಿರಾಜರಿಗೂ ಶ್ರೀ ವೇದವ್ಯಾಸ ದೇವರ ದಯೆಯಿಂದ ಒದಗಿದೆ. ಆ ರೀತಿಯ ತಮ್ಮ ತತ್ವಜ್ಞಾನ ವಿಸ್ತಾರದ ಸೇವಾಫಲವನ್ನು ಶ್ರೀಮದಾಚಾರ್ಯರೂ ಒಪ್ಪಿ ಅನುಗ್ರಹಿಸುವರೆಂದೇ ಅಭಿಪ್ರಾಯವು.

**ಪ್ರಶ್ನೆ: ವೈಕುಂಠದಲ್ಲೂ ಅವರೇ ನನ್ನ ಯೋಗಕ್ಷೇಮ ಧುರಂಧರರೆಂದು ಹೇಳಿಕೊಂಡಿದ್ದಾರಲ್ಲ?**

ಉತ್ತರ: ಶ್ರೀಮದಾಚಾರ್ಯರು ವಾಯುದೇವರೆಂಬ ತಮ್ಮ ಮೂಲರೂಪದಿಂದ ಲೋಕಾಧಿಪತ್ಯ ಉಳ್ಳವರು. ಹಾಗೆಯೇ ಅದರಿಂದ ಅವರು, ವೈಕುಂಠಾದಿಗಳಲ್ಲೂ ಯೋಗಕ್ಷೇಮ ನೋಡಿಕೊಳ್ಳುವವರು ಎನ್ನುವುದು ಶಾಸ್ತ್ರ ಸಿದ್ಧವೇ. ಅದರಲ್ಲಿ ಶ್ರೀ ವಾದಿರಾಜರ ಋಜುತ್ವದ ವಿರೋಧ ಅಂಶ ಏನೇನೂ ಇಲ್ಲ.

**ಪ್ರಶ್ನೆ: ಲೇಖಕರು, ಟಿಪ್ಪಣಿಯ ''ಅಸ್ಮಾಕಂ ತು ಏತಾವತೀ ಏವ ಶಕ್ತಿ:'' ಅನ್ನುವ ವಾಕ್ಯ ಉದಾಹರಿಸಿ ಶ್ರೀ ವಾದಿರಾಜರಿಗೆ ಪೂರ್ಣಾಧಿಕಾರ ಇಲ್ಲವೆಂದು ಹೇಳಿದ್ದಾರಲ್ಲ? ಅದರಿಂದ ಋಜುತ್ವ ಹಾನಿಯಾಗುವುದಿಲ್ಲವೇ?**

ಉತ್ತರ: ಇಲ್ಲ. ಅಲ್ಲಿ ಅವರಿಗೆ ಪೂರ್ಣಾಧಿಕಾರ ಇಲ್ಲವೆಂದು ಮೂಲದಿಂದಾಗಲೀ, ಟಿಪ್ಪಣಿಯಿಂದಾಗಲೀ ಅರ್ಥ ಸಿದ್ಧಿಯಾಗುವುದೇ ಇಲ್ಲ. ರುದ್ರಾದಿಗಳು ಅಧಿಕಾರಿಗಳು ಅಂದದ್ದರಿಂದ ಏನೂ ಬಾಧಕವಿಲ್ಲ. ''ಇಷ್ಟೇ ಶಕ್ತಿ'' ಅನ್ನುವಲ್ಲಿ ಅಲ್ಪಶಕ್ತಿ ಅಂತ ಅರ್ಥ ಹೇಗೆ ಸಿಗುತ್ತದೆ? ''ಏತಾವತೀ ಏವ'' ಅನ್ನುವ ಶಬ್ದದಲ್ಲಿ ಏವ ಶಬ್ದವು ಅಧಿಕ ಅಧಿಕಾರವೆಂಬ ಅರ್ಥಾಂತರವನ್ನೂ ಹೇಳುತ್ತದೆ. ಅಲ್ಲಿ ಋಜುತ್ವ ವಿರೋಧದ ಲೇಶಾಂಶವೂ ಇಲ್ಲ. ಜನರನ್ನು ನೋಡಿ, ಅವರ ಯೋಗ್ಯತೆ ಇಷ್ಟೇ ಎಂದು ನಾವು ನಿಶ್ಚಯಿಸಿ, ಅದಕ್ಕನುಸಾರ, ಜ್ಞಾನ ಪ್ರಕಾಶನ ಮಾಡಿದ್ದೇವೆ ಅನ್ನುವುದೇ ಅಲ್ಲಿಯ

ಅಭಿಪ್ರಾಯವು. ಏತಾವತೀ ಅನ್ನುವ ಪದ ವನ್ನೇ ಉಪಯೋಗಿಸಿ, ಅಂಭ್ರಣೀ ಸೂಕ್ತದಲ್ಲಿ, ಶ್ರೀದೇವಿಯು ''ಇಷ್ಟು ಮಹಿಮೆ'' ಅಂತ ಹೇಳಿಕೊಂಡಿದ್ದಾಳೆ. ಅದರಿಂದ ಆ ದೇವಿಯ ಮಹಿಮೆ ಕಡಿಮೆಯೆಂದಾಗುವುದೇ? ಎಂದಿಗೂ ಇಲ್ಲ.

**ಪ್ರಶ್ನೆ: ಹಾಗಿದ್ದರೆ ಲೇಖಕರು, ಈ ವಾಕ್ಯ ಉದಾಹರಿಸಿ ವಾದಿರಾಜರ ಋಜುತ್ವ ಇದರಿಂದ ಸಿದ್ಧಿಸುವುದಿಲ್ಲವೆಂದು ಹೇಗೆ ಹೇಳಿದರು?**

ಉತ್ತರ : ಅವರು ಪೂರ್ವಾಪರ ಹೊಂದಿಸಲಿಲ್ಲ. ಶ್ರೀ ವಾದಿರಾಜರದೇ ಬೇರೆ ವಾಕ್ಯಗಳೊಂದಿಗೆ ಸಮನ್ವಯ ಮಾಡಿಕೊಳ್ಳಲಿಲ್ಲ. ಹಾಗಾಗಿ ಆಪಾತತಃ ತೋರುವ ಸ್ಥೂಲಾರ್ಥ ಗ್ರಹಿಸಿ, ತರ್ಕ ಪ್ರಯೋಗ ಮಾಡಿ, ಹಾಗೆ ಹೇಳಿ ಬಿಟ್ಟಿದ್ದಾರೆ. ತಮ್ಮ ನ್ಯಾಯ ರತ್ನಾವಲೀ ಎಂಬ ಗ್ರಂಥರತ್ನದ ಅಂತ್ಯದಲ್ಲಿ ಶ್ರೀ ವಾದಿರಾಜರೇ, ಆ ಗ್ರಂಥಾಭ್ಯಾಸಿಗಳಿಗೆ ವಾಗ್‌ದಾರಿದ್ರ್ಯ ಬರುವುದಿಲ್ಲವೆಂದು ಹೇಳಿದ್ದಾರೆ. **'ವಾದಿರಾಜೇನ ರಚಿತಾಂ ನ್ಯಾಯರತ್ನಾವಲೀ ಮಿಮಾಂ ॥ ಸಂಗೃಹ್ಣತಃ ಸಭಾ ಮಧ್ಯೇ ವಾಗ್‌ದಾರಿದ್ರ್ಯಂ ನ ವಿದ್ಯತೇ ॥** ಅನ್ನುವ ಶ್ಲೋಕವಿದೆ. ಶ್ರೀ ವಾದಿರಾಜರು ತಮ್ಮನ್ನು ಮಹಾಮತಿಯೆಂದು ಸರಸಭಾರತೀವಿಲಾಸವೆಂಬ ಗ್ರಂಥದಲ್ಲಿ ಹೇಳಿಕೊಂಡಿದ್ದಾರೆ. ತಮ್ಮನ್ನು ಸರ್ವಜ್ಞರೆಂದೂ ಹೇಳಿಕೊಂಡಿದ್ದಾರೆ. ಲೇಖಕರು ಅದನ್ನು ಗಣನೆಯೇ ಮಾಡಲಿಲ್ಲವೆಂದು ತಿಳಿಯಿರಿ.

**ಪ್ರಶ್ನೆ : ಬೇರೆ ವಾಕ್ಯಗಳಿಂದಲೂ ಋಜುತ್ವ ನಿವಾರಣೆಯನ್ನು ಲೇಖಕರು ಮಾಡಿದ್ದಾರಲ್ಲಾ. ''ತತ್ವದೇವಾನಾಂ ಕೃಪಂ ನ ಸ್ವಶಕ್ತಿತಃ'' ಅನ್ನುವ ಗುರ್ವರ್ಥದೀಪಿಕಾ ವಾಕ್ಯ ಉದಾಹರಿಸಿದ್ದಾರೆ. ತತ್ವ ದೇವತೆಗಳ ಕೃಪೆಯಿಂದಲ್ಲದೇ, ಗ್ರಂಥರಚನೆ, ನನ್ನ ಸ್ವಂತ ಶಕ್ತಿಯಿಂದಲ್ಲ ಅಂತ ಅರ್ಥ ಬರೆದಿದ್ದಾರೆ. ಶ್ರೀ ವಾದಿರಾಜರು ಯಾಕೆ ಹಾಗೆ ಹೇಳಿರುವರು?**

ಉತ್ತರ: ಶ್ರೀ ವಾದಿರಾಜರ ಬೇರೆ ವಾಕ್ಯಗಳನ್ನು ಉದಾಹರಿಸಿದಾಗಲೂ ಪ್ರತಿಯೊಂದರಲ್ಲು ಪೂರ್ವಾಪರ ಹೊಂದಿಸಿ, ಶಾಸ್ತ್ರದೊಂದಿಗೆ ಸಮನ್ವಯ ಸಾಧಿಸಿ, ಅರ್ಥ ಹೇಳಬೇಕು. ಶ್ರೀ ವಾದಿರಾಜರು ಮಹಾಜ್ಞಾನಿಗಳೆಂದು ಲೇಖಕರೇ ಒಪ್ಪಿರುವುದರಿಂದ ಶ್ರೀ ವಾದಿರಾಜರು ಬಾಯಿಗೆ ಬಂದಂತಹ ವಾಕ್ಯ ಹೇಳುವುದಿಲ್ಲವೆಂದು ಒಪ್ಪಬೇಕು. ಇಲ್ಲಿ '' ತತ್ವ ದೇವಾನಾಂ ಕೃಪಯಾ ನ, ಸ್ವಶಕ್ತಿತಃ'' ಅಂತಲೂ ಯೋಜನೆ ಸಾಧ್ಯವಾದುದರಿಂದ, ನಾವು ನಮ್ಮ ನೈಜ ಪ್ರತಿಭಾದಿ ಬಲಗಳಿಂದ ರಚಿಸುತ್ತೇವೆಯೇ ಹೊರತು, ತತ್ವ ದೇವತೆಗಳ ಕೃಪೆಯಿಂದಲ್ಲ (ರುದ್ರಾದಿ ಕೆಳಗಿನ ದೇವತೆಗಳು ಋಜುಗಳಿಗೆ ನಿಯಾಮಕರಲ್ಲ) ಅನ್ನುವ ಅರ್ಥವೇ ಸಿದ್ಧವಾಗುತ್ತದೆ. ಅದರಲ್ಲಿ ಏನೇನೂ ಬಾಧಕವಿಲ್ಲ. ಅದರಿಂದ ಅವರ ಋಜುತ್ವವೇ ಸೂಚಿತವಾಗಿದೆ.

**ಪ್ರಶ್ನೆ: ಅದೇ ವಾಕ್ಯದಲ್ಲಿ ಭಾರತ್ಯಾಃ ಎಂದೂ, *ಆನಂದತೀರ್ಥಾಖ್ಯ ಗುರೋಃ ತಥಾ ವ್ಯಾಸಸ್ಯ ತದ್ಗುರೋಃ* ಎಂದೂ, ಇದೆಯಲ್ಲಾ, ಅದರಿಂದ ವ್ಯಾಸರ ಕೃಪೆ, ಶ್ರೀಮದಾಚಾರ್ಯರ ಕೃಪೆಯೂ ಹೇಳಲ್ಪಟ್ಟಿದೆ. ಅದನ್ನು ಹೇಗೆ ಹೊಂದಿಸುವುದು ?**

ಉತ್ತರ: ಭಾರತ್ಯಾಃ ತತ್ವ ದೇವಾನಾಂ ಅನ್ನುವುದು ಒಂದೇ ಶ್ಲೋಕದಲ್ಲಿದೆ. ಆನಂದತೀರ್ಥಾಖ್ಯ ಗುರೋಃ, ತಥಾ ವ್ಯಾಸಸ್ಯ ತದ್ಗುರೋಃ, ಅನ್ನುವುದು ಹಿಂದಿನ ಶ್ಲೋಕದಲ್ಲಿರುವುದು. ಅಲ್ಲಿ



ಗುರ್ವರ್ಥದೀಪಿಕಾ ಅನ್ನುವ ತಮ್ಮ ಗ್ರಂಥದ ಹೆಸರನ್ನು ವಿವರಿಸುತ್ತಾರೆ. ಶ್ರೀ ಆನಂದತೀರ್ಥರೆಂಬ ಗುರುಗಳ, ಹಾಗೂ ಅವರ ಗುರುಗಳಾದ ಶ್ರೀ ವೇದವ್ಯಾಸದೇವರ ಅರ್ಥ ಗೌರವವು ಅಂದರೆ, ಭಾವವನ್ನು ದೀಪನಮಾಡುವ ಗ್ರಂಥವು, ಶ್ರೀ ವಾದಿರಾಜರಿಂದ ರಚಿತವಾಯಿತು ಅನ್ನುವ ತಾತ್ಪರ್ಯ ಆ ಹಿಂದಿನ ಶ್ಲೋಕಕ್ಕೆ.

**ಪ್ರಶ್ನೆ: ಆಗ ಇನ್ನುಳಿದ ಭಾರತ್ಯಾಃ ಅನ್ನುವುದನ್ನು ಹೇಗೆ ಹೊಂದಿಸುವುದು?**

ಉತ್ತರ: ಗುರ್ವರ್ಥ ಅಂದರೆ ವೇದದ ಸರಿಯಾದ ಅರ್ಥವು ನಮ್ಮಿಂದ ದೀಪನ ಮಾಡಲ್ಪಟ್ಟಿದೆ: ವೇದಾಭಿಮಾನಿನಿಯಾದ ಶ್ರೀದೇವಿಯ ಮತ್ತು ಅವಾಂತರಾಭಿಮಾನಿನಿಯರಾದ ಸರಸ್ವತೀ ಭಾರತೀ ದೇವಿಯರ, ಅಭಿಪ್ರಾಯ ಕಥನವು ಹಾಗೆ ಮಾಡಲ್ಪಟ್ಟಿದೆ ಅಂತ ಅಲ್ಲಿ ಭಾವ.

**ಪ್ರಶ್ನೆ: ಅರ್ಥಾಂತರದಿಂದ, ಶ್ರೀ ವೇದವ್ಯಾಸದೇವರ, ಆನಂದತೀರ್ಥರ, ಭಾರತಿಯ, ಬೇರೆ ತಾತ್ವಿಕರ ದಯದಿಂದ ರಚಿಸಲ್ಪಟ್ಟದೆ, ನನ್ನ ಸ್ವಂತ ಶಕ್ತಿಯಿಂದಲ್ಲ ಅನ್ನುವ ಅರ್ಥವೂ ಲಭ್ಯವಾಗುತ್ತದೆಯಲ್ಲಾ? ಹಾಗೆ ಬೇರೆಯವರು ಹೇಳಿದ್ದಾರಲ್ಲಾ?**

ಉತ್ತರ : ಹಾಗೆ ಹೇಳುವುದು ಪೂರ್ತಿ ಕೂಡುವುದಿಲ್ಲ. ಆ ಅರ್ಥಾಂತರ ಮಾಡಿದಾಗಲೂ, ಆನಂದ ತೀರ್ಥರೂ, ಅವರ ಗುರುಗಳಾದ ಶ್ರೀ ವೇದವ್ಯಾಸರು ಹಾಗೂ ಶ್ರೀ ದೇವಿಯು ಇವರು, ತಮಗೆ ತತ್ವನಿಯಾಮಕರಾದ್ದರಿಂದ ಅವರ ಕೃಪೆಯಿಂದ ರಚಿಸಲ್ಪಟ್ಟಿತ್ತೆನ್ನುವ ಅರ್ಥವು ಹೊಂದುತ್ತದೆ. ಆಗ ತಮ್ಮ ದೇಹದಲ್ಲಿ, ವಾಯುದೇವರು ಹಾಗೂ ನಾನಾ ರೂಪಗಳಿಂದ ಲಕ್ಷ್ಮೀ ನಾರಾಯಣರೇ ತಾತ್ವಿಕರಾಗಿದ್ದಾರೆ ಅಂತ ವಾದಿರಾಜರ ಭಾವ ವ್ಯಕ್ತವಾಗುತ್ತದೆ. ಅದರಿಂದ, ಶ್ರೀ ವಾದಿರಾಜರ ಋಜುತ್ವವೇ ಸಿದ್ಧವಾಗುತ್ತದೆ. ಸಮುಚ್ಚಯ ಹೇಳುವ 'ಆಥ' ಶಬ್ದ ಇಲ್ಲದಿರುವುದರಿಂದ, ನೀವು ಹೇಳಿದ ಅರ್ಥಾಂತರ ಪೂರ್ತಿ ಕೂಡುವುದಿಲ್ಲ.

**ಪ್ರಶ್ನೆ : ಆ ರೀತಿ ಬೇರೆ ಯೋಜನೆ ಮಾಡಿ, ಅರ್ಥಾಂತರ ಯಾಕೆ ಹೇಳಬೇಕು? ಲೇಖಕರು, ತೋರಿಸಿದ ಅರ್ಥವನ್ನೇ ಯಾಕೆ ಅಂಗೀಕರಿಸಬಾರದು?**

ಉತ್ತರ: ಪ್ರಬಲ ಆಗಮ ವಾಕ್ಯ ವಿರೋಧ ಬಂದಾಗ, ದುರ್ಬಲ ವಾಕ್ಯಗಳಿಗೆ ಮತ್ತು ಅರ್ಥಾಂತರ ಸಾಧ್ಯವಿರುವ ವಾಕ್ಯಗಳಿಗೆ, ಯೋಗ್ಯ ಅರ್ಥಾಂತರ ಹೇಳಬೇಕೆಂಬುದು ಶ್ರೀಮದಾಚಾರ್ಯರ ಸಿದ್ಧಾಂತವೇ ಆಗಿದೆ. ಭೇದಸಾಧಕ ವೇದವಾಕ್ಯಗಳು ಪ್ರಬಲವಾಗಿದ್ದಾಗ, ಅಹಂ ಬ್ರಹ್ಮಾಸ್ಮಿ ಅನ್ನುವ ಐಕ್ಯ ಪ್ರತಿಪಾದಕ ವೇದ ವಾಕ್ಯಕ್ಕೆ ಅರ್ಥಾಂತರವನ್ನು ಸಾಧಿಸುತ್ತೇವೆ. ಇಲ್ಲಿ, ಲೇಖಕರು ಹೇಳಿದ ಅರ್ಥ ಅಂಗೀಕರಿಸಿದರೆ, ಪ್ರಬಲ ಆಗಮ ವಿರೋಧ ಬರುತ್ತದೆ.

**ಪ್ರಶ್ನೆ : ಯಾವ ಪ್ರಬಲ ಆಗಮ ವಿರೋಧ ಬರುತ್ತದೆ?**

ಉತ್ತರ: ಬ್ರಹ್ಮಾಂಡ ಪುರಾಣದಲ್ಲಿ ''ಋಜುಸ್ಥೋ ಹಿ ಸುರೇಶ್ವರಃ, ವಾದಿರಾಜೋ ಯತಿಃ ಭೂತ್ವಾ ಚೈತತ್ ವಿಸ್ತಾರಯಿಷ್ಯತಿ'' ಅಂತ ವಾಕ್ಯವಿದೆ. ಪೂರ್ವ ಕಾಲದ ಅನೇಕ ಜ್ಞಾನಿಗಳು, ಶ್ರೀ ಸತ್ಯಧರ್ಮ ಸ್ವಾಮಿಗಳು ಮೊದಲಾಗಿ, ಈ ವಾಕ್ಯಕ್ಕೆ ಪ್ರಾಮಾಣ್ಯ ಒಪ್ಪಿದ್ದಾರೆ. ಈ ಪುರಾಣದ ವಾಕ್ಯಕ್ಕೆ ಅರ್ಥಾಂತರವು

ಸಾಧ್ಯವೇ ಇಲ್ಲ (ನಿರವಕಾಶ ವಾಕ್ಯ). ಹಾಗೆಯೇ ಋಕ್ಸಂಹಿತಾ ವಾಕ್ಯಗಳು ನಿರವಕಾಶ ವಾಕ್ಯಗಳು. ಆದ್ದರಿಂದ ವಾದಿರಾಜರ ಬೇರೆ ಗ್ರಂಥಸ್ಥ ವಾಕ್ಯಗಳಿಗೆ, ಇದಕ್ಕನುಸಾರವಾದ ಯೋಗ್ಯ ಅರ್ಥಾಂತರ ಸಾಧ್ಯವಿರುವುದರಿಂದ, ಆ ರೀತಿ ಅರ್ಥಾಂತರ ಮಾಡಬೇಕಾಗುತ್ತದೆ. ಆ ವಾಕ್ಯಗಳು ಸಾವಕಾಶ ವಾಕ್ಯಗಳು.

**ಪ್ರಶ್ನೆ: ಹಿಂದಿನ ಸಂದರ್ಭದಲ್ಲಿ, ದೇವತಾಭಕ್ತಿಯನ್ನು ಶ್ರೀ ವಾದಿರಾಜರು ಮಾಡಿದ್ದರಿಂದ ಅವರು ಋಜುಗಳಲ್ಲವೆಂದು ಎರಡನ್ನೂ ಸೇರಿಸಿ, ಲೇಖಕರು, ಶ್ರೀ ವಾದಿರಾಜರು ಋಜುಗಳಲ್ಲ ಅನ್ನುತ್ತಾರೆ ಅದು ಸರಿಯೆ?**

ಉತ್ತರ: ಸರಿಯಲ್ಲ. ಇಲ್ಲಿ ನಾವು ತಿಳಿಯಬೇಕಾದ ಮುಖ್ಯ ತತ್ವವೆಂದರೆ ಶ್ರೀ ವಾದಿರಾಜರ ಋಜುತ್ವವು ಕಣ್ಣಿಗೆ ಗೋಚರವಾಗದಿದ್ದುದರಿಂದ, ಆಗಮದಿಂದಲೇ ಸಿದ್ಧವಾಗಬೇಕಾಯಿತು. ಅವರ ಸ್ವರೂಪವನ್ನು ಆಗಮದಿಂದ ಸಾಧಿಸಬೇಕೇ ಹೊರತು, ಅನುಮಾನದಿಂದಲ್ಲ. ಇದು ಮಧ್ವ ಸಿದ್ಧಾಂತ. ಲೇಖಕರು, ಇಲ್ಲಿ ದೇವತೆಗಳಿಗೆ ನಮಸ್ಕಾರಾದಿ ತೋರುವ ಶ್ರೀ ವಾದಿರಾಜರ ವಾಕ್ಯಗಳಿಂದ ಯುಕ್ತಿ ಚಾಲನೆ ಮಾಡುತ್ತಿದ್ದಾರೆ. ಇಲ್ಲಿ ಲೇಖಕರು ದೇವತಾ ನಮನದಿಂದ ಅನುಮಾನ ಪ್ರಮಾಣ ತೋರಿಸಿದ್ದಾರೆಯೇ ಹೊರತು, ಅದು ಆಗಮ ಪ್ರಮಾಣ ಅಲ್ಲವೇ ಅಲ್ಲ. ಲೋಕದ ಜನರಿಗೆ, ತಮ್ಮ ಪುಸ್ತಕ ಓದುವವರಿಗೆ, ''ಓಹೋ, ಆಗಮ ಪ್ರಮಾಣದಲ್ಲಿ ನೂರಾರು ವಾಕ್ಯಗಳು ಶ್ರೀ ವಾದಿರಾಜರ ಋಜುತ್ವಕ್ಕೆ ವಿರೋಧವಿದೆಯಲ್ಲಾ'' ಅಂತ ಭಾಸವಾಗುವಂತೆ, ಲೇಖಕರು ವಾಕ್ಯ ರಚನೆ ಮಾಡಿದ್ದಾರೆ. ಅಲ್ಲಿ ಲೇಖಕರು ತಾವು ಮಾಡಿರುವ ಅನುಮಾನಗಳಿಗೆ ಸಹಾಯಕ ಸಾತ್ವಿಕ ಆಗಮ ವಾಕ್ಯಗಳನ್ನು ಕೊಟ್ಟಿಲ್ಲದಿರುವುದರಿಂದ ಆ ಅನುಮಾನಗಳಿಗೆ ಏನೇನೂ ಬೆಲೆ ಇಲ್ಲ. ಆ ಯಾವ ವಾಕ್ಯದಲ್ಲೂ, ಅವರು ವಸಿಷ್ಠಾದಿ ಋಷಿ ಸ್ವರೂಪವೇ?, ಚಿತ್ರರಥಾದಿ ಗಂಧರ್ವ ಅವತಾರವೇ? ಇತ್ಯಾದಿ ಏನೂ ಸ್ವರೂಪ ವಿಚಾರವೇ ಬರುವುದಿಲ್ಲ. ಅಂದ ಮೇಲೆ ಅವು ಸ್ವರೂಪ ಸಾಧಕ ಆಗಮವಾಗಲು ಸಾಧ್ಯವೇ ಇಲ್ಲ. ಆಗಮ ಸಹಾಯವಿಲ್ಲದ ಶುಷ್ಕ ತರ್ಕವನ್ನು ವರ್ಜಿಸಬೇಕೆಂದು ಶ್ರೀಮದಾಚಾರ್ಯರ ಕಟ್ಟಪ್ಪಣೆ ಇದೆ. ಅದನ್ನು ಲೇಖಕರು ಉಲ್ಲಂಘಿಸಿದ್ದಾರೆ. ಆದುದರಿಂದ ಆ ಉಪಪಾದನ ಕ್ರಮ ಮಧ್ವ ಸಿದ್ಧಾಂತಕ್ಕೆ ವಿರುದ್ಧವಾಗಿದೆ.

**ಪ್ರಶ್ನೆ: ಲೇಖಕರು ತಾವು ಪ್ರಯೋಗಿಸಿರುವ ಅನುಮಾನಗಳಿಗೆ, ಯಾವ ರೀತಿಯ ಆಗಮ ಸಹಾಯವನ್ನು ಕೊಡಬೇಕು?**

ಉತ್ತರ: ಶ್ರೀ ವಾದಿರಾಜರು ದೇವತೆಗಳಿಗೆ ನಮಸ್ಕಾರವನ್ನು ಮಾಡಿದ್ದರಿಂದ ಅವರು ಋಜುವಲ್ಲವೆಂದು ಲೇಖಕರು ಅನುಮಾನ ಹೇಳುತ್ತಾರೆ. ಆ ಅನುಮಾನ ಹೇಳುವಾಗ, ದೇವತೆಗಳಿಗೆ ಭೂಮಿಯಲ್ಲಿ ನಮಸ್ಕಾರ ಮಾಡಿದವರು, ಆ ದೇವತೆಗಳಿಗೆ ಸ್ವರೂಪತಃ ಕಡಿಮೆ ಎನ್ನುವ ವ್ಯಾಪ್ತಿ ತೋರುವ ಆಗಮ ವಾಕ್ಯ ಸಹಾಯ ತೋರಿಸಬೇಕು. ಅದನ್ನು ಲೇಖಕರು ತೋರಿಸಿಲ್ಲ. ಆ ವಾಕ್ಯ ಇರಲೂ ಸಾಧ್ಯವಿಲ್ಲ. ಯಾಕೆಂದರೆ, ಶ್ರೀಕೃಷ್ಣನು ಬ್ರಾಹ್ಮಣರಿಗೆ ನಮಸ್ಕರಿಸಿ ಅವರ ಪಾದಧೂಳಿಯನ್ನು ಧರಿಸುತ್ತಿದ್ದನು. ಆದರೂ, ಅವನ ಸರ್ವೋತ್ತಮತ್ವಕ್ಕೆ ಹಾನಿಯಿಲ್ಲವೆಂದು ಶ್ರೀಮದಾಚಾರ್ಯರು ಸಿದ್ಧಾಂತ ತೋರಿಸಿದ್ದಾರೆ. ಶ್ರೀರುಗ್ಮಿಣೀ ದೇವಿಯು, ಶ್ರೀಸತ್ಯಭಾಮಾ ದೇವಿಯು ಬ್ರಾಹ್ಮಣರಿಗೆ, ಋಷಿಗಳಿಗೆ



ನಮಸ್ಕರಿಸುತ್ತಿದ್ದರು. ಶ್ರೀಕೃಷ್ಣನೂ, ಶ್ರೀದೇವಿಯೂ, ಹನುಮಂತ ದೇವರು, ಭೀಮಸೇನ ದೇವರು, ಶ್ರೀಮದಾಚಾರ್ಯರು ದೇವತೆಗಳಿಗೆ ನಮಸ್ಕಾರ ಮಾಡಿರುವುದು ಶಾಸ್ತ್ರ ಸಿದ್ಧವಾಗಿದೆ. ಆದುದರಿಂದ ದೇವತಾ ನಮಸ್ಕಾರದಿಂದ ಋಜುತ್ವಕ್ಕೆ ಏನೇನೂ ಹಾನಿಯಿಲ್ಲ. ಶ್ರೀಕೃಷ್ಣನ ಸರ್ವೋತ್ತಮತ್ವಕ್ಕೆ ಹೇಗೆ ಹಾನಿಯಿಲ್ಲವೋ ಹಾಗೆ.

**ಪ್ರಶ್ನೆ: ಶ್ರೀಕೃಷ್ಣನ ನಡವಳಿಕೆ ಲೋಕಮೋಹಕ ವ್ಯಾಪಾರವೆಂದು ಸಿದ್ಧವಾಗಿದೆ. ಅದಕ್ಕೆ ವಾದಿರಾಜರ ನಡವಳಿಕೆ ಹೋಲಿಸಬಾರದು ಎಂದು ಹೇಳಬಹುದಲ್ಲಾ?**

ಉತ್ತರ: ಯಾಕೆ ಹೋಲಿಸಬಾರದು? ಶ್ರೀಮದಾಚಾರ್ಯರೂ, ಶ್ರೀ ಭೀಮಸೇನ ದೇವರೂ, ಶ್ರೀ ಹನುಮಂತ ದೇವರೂ ಹಾಗೆ ಲೋಕ ಮೋಹಕ ವ್ಯಾಪಾರ ಮಾಡಿದವರೇ. ಅದರಲ್ಲಿ ವಿಶೇಷವೇನಿಲ್ಲ. ಅವರೆಲ್ಲಾ ಭಗವಂತನ ಲೋಕಮೋಹಕ ಲೀಲಾವಿಲಾಸಗಳನ್ನು ಅನುಸರಿಸಿಯೇ, ಚೇಷ್ಟೆ ಮಾಡುವವರೆಂದು ಶ್ರೀಮದಾಚಾರ್ಯರು ಹೇಳಿದ್ದಾರೆ.

**ಪ್ರಶ್ನೆ: ಶ್ರೀಕೃಷ್ಣನ ಸರ್ವೋತ್ತಮತ್ವವೂ ಶ್ರೀ ಹನುಮಂತ ದೇವರೇ ಮೊದಲಾದ ವಾಯುದೇವರ ಅವತಾರತ್ರಯದ ಋಜುತ್ವವೂ, ನಿರ್ದುಷ್ಟವಾದ, ಆಗಮದಿಂದ ಸಿದ್ಧವಾಗಿ ಬಿಟ್ಟಿದೆ. ಅದರಿಂದಲೇ, ಶ್ರೀ ವಾದಿರಾಜರ ವಿಷಯಕ್ಕೆ ಹೋಲಿಸಬಾರದು ಎನ್ನಬಹುದಲ್ಲವೇ?**

ಉತ್ತರ: ಶ್ರೀಕೃಷ್ಣನ ಸರ್ವೋತ್ತಮತ್ವವು ಅನಂತ ಪ್ರಮಾಣಗಳಿಂದ ಸಿದ್ಧವು. ಆದರೆ ಶ್ರೀ ಹನುಮಂತ ದೇವರು ಮತ್ತು ಶ್ರೀ ಭೀಮಸೇನ ದೇವರ ಋಜುತ್ವವು ನೇರವಾಗಿ ವೇದಾದಿ ಶಾಸ್ತ್ರದಿಂದ ಸಿದ್ಧಿಯಾಗುವುದಿಲ್ಲ. ಶ್ರೀಮದಾಚಾರ್ಯರು ಅದನ್ನು ಸಾಧಿಸಿಕೊಟ್ಟಿದ್ದಾರೆ. ಶ್ರೀಮದಾಚಾರ್ಯರು, ಅವರ ಋಜುತ್ವ ಸಾಧಿಸುವಾಗ ಮತ್ತು ತಮ್ಮ ಋಜುತ್ವ ಸಾಧಿಸುವಾಗ ಆಗಮವಾಕ್ಯ ಮಾತ್ರ ಉದಾಹರಿಸಿದ್ದಾರೆ. ಅಲ್ಲಿ ಅನುಮಾನ ಪ್ರಯೋಗ ಮಾಡಲಿಲ್ಲ. ತಾವೇ ಅನ್ಯ ದೇವತಾ ದೇವಾಲಯಗಳಲ್ಲಿ ನಮಸ್ಕಾರ ಮಾಡುತ್ತಿದ್ದರು. ''ಪ್ರಣಮ್ಯ ನಾನಾಯತನೇಷು ಸಂಚರನ್'' ಅಂತ ಮಧ್ವ ವಿಜಯದಲ್ಲಿದೆ. ಲೇಖಕರು ತಮ್ಮ ಗ್ರಂಥದ ಪುಟ 16ರಲ್ಲಿ ಅದನ್ನು ಒಪ್ಪಿದ್ದಾರೆ. ಶ್ರೀ ಭೀಮಸೇನ ದೇವರು, ಯುಧಿಷ್ಠಿರನ ವಾಕ್ಯಕ್ಕೆ ಅಧೀನವಾಗಿ ನಡೆದಂತೆ ತೋರಿಸುತ್ತಿದ್ದರು. ತಾವೇ, ಅನ್ಯದೇವತೆಗಳಿಗೆ ನಮಸ್ಕಾರ ಮಾಡುತ್ತಿದ್ದರೆಂಬ ಆ ಯುಕ್ತಿ ಚಾಲನೆಯಿಂದ, ತಮ್ಮ ಋಜುತ್ವವೇ ಬಾಧಿತವಾಯಿತೆಂದು ಶ್ರೀಮದಾಚಾರ್ಯರು ಹೇಳಲಿಲ್ಲ. ಆಗಮದಿಂದ ಸಿದ್ಧವಾದುದನ್ನು ಶುಷ್ಕ ಅನುಮಾನಗಳಿಂದ ವಿರೋಧಿಸಬಾರದೆಂದೇ ಶ್ರೀ ಮಧ್ವ ಸಿದ್ಧಾಂತ. ಅದು ಚೆನ್ನಾಗಿ ವಾದಿರಾಜರ ನಿದರ್ಶನದಲ್ಲೂ ಅನ್ವಯಿಸುತ್ತದೆ.

**ಪ್ರಶ್ನೆ: ಶ್ರೀಮದಾಚಾರ್ಯರು ವೇದ ಪ್ರತಿಪಾದ್ಯರು. ಅವರ ವಿಷಯದಲ್ಲಿ ಅನುಮಾನಗಳು ಬೇಕಾಗಿಲ್ಲ. ಅಥವಾ ಶಂಕಾ ಹುಟ್ಟುವುದೇ ಇಲ್ಲ ಅನ್ನಬಹುದು. ವಾದಿರಾಜರ ವಿಷಯದಲ್ಲಿ ಹಾಗಲ್ಲ, ಶಂಕಾ ಹುಟ್ಟುತ್ತದೆ, ಎಂದು ಹೇಳಬಹುದಲ್ಲ?**

ಉತ್ತರ: ಶ್ರೀಮದಾಚಾರ್ಯರು ಹೇಗೆ ವೇದ ಪ್ರತಿಪಾದ್ಯರು ಎಂದು ಕೇಳಿದರೆ, ಬಳಿತ್ಥಾ ಸೂಕ್ತಾದಿ ಪ್ರತಿಪಾದ್ಯರು ಎಂದೇ ನಾವು ಹೇಳುತ್ತೇವೆ. ಶ್ರೀಮದಾಚಾರ್ಯರ ವೇದ ಪ್ರತಿಪಾದ್ಯತ್ವ ಎಂಬುದು

ಅವರು ತಾವೇ ಕಲ್ಪಿಸಿಕೊಂಡದ್ದಲ್ಲ. ಆ ಅರ್ಥ ಪ್ರತಿ ಪಾದನೆಯು ಶಾಸ್ತ್ರ ಸಿದ್ಧವೇ. ಆ ರೀತಿ ಶಾಸ್ತ್ರ ಸಿದ್ಧ ವಾದ ಮೇಲೆ ಶುಷ್ಕ ಅನುಮಾನಗಳನ್ನು ಪ್ರಯೋಗಿಸಬಾರದು. ವಾದಿರಾಜರ ವಿಷಯದಲ್ಲೂ ಇದೇ ರೀತಿ ತಿಳಿದುಕೊಳ್ಳಬೇಕು.

**ಪ್ರಶ್ನೆ: ಶ್ರೀ ವಾದಿರಾಜರು ಹೇಗೆ ವೇದಾದಿ ಶಾಸ್ತ್ರ ಪ್ರತಿಪಾದ್ಯರು?**

ಉತ್ತರ: ಶ್ರೀ ವಾದಿರಾಜರು ಬಳಿತ್ಥಾ ಸೂಕ್ತಾದಿ ವೇದ ಪ್ರತಿಪಾದ್ಯರು. ಪವಮಾನ ಸೂಕ್ತವು ಅವರ ಮಹಿಮೆ ಹೇಳುತ್ತದೆ ಎಂದು ಪ್ರಮಾಣಾಂತರಗಳಿವೆ. ವ್ಯೋಮ ಸಂಹಿತಾ, ಪ್ರಕಾಶ ಸಂಹಿತಾ ಮೊದಲಾದ ಪಂಚರಾತ್ರಾಗಮದ ನಿರ್ದೋಷ ವಾಕ್ಯಗಳು, ಋಕ್ ಸಂಹಿತಾ ಮೊದಲಾದವು ಅವರ ಮಹಿಮೆಯನ್ನು ಹೇಳುತ್ತವೆ. ಇದನ್ನು ಮುಂದೆ ವಿಸ್ತರಿಸುತ್ತೇವೆ.

**ಪ್ರಶ್ನೆ: ಬಳಿತ್ಥಾ ಸೂಕ್ತವು ಶ್ರೀ ವಾಯುದೇವರ ಪರವು. ಆ ಸೂಕ್ತವು ಹೇಗೆ ಶ್ರೀ ವಾದಿರಾಜರ ಪರವಾಗುವುದು?**

ಉತ್ತರ: ಬಳಿತ್ಥಾ ಸೂಕ್ತವು ವಾಯುಪರವೂ ಅಲ್ಲ, ಅದು ಅಗ್ನಿ ದೇವತಾ ಪರ ಅಂತ ಸಾಯಣಾಚಾರ್ಯರು (ಅನ್ಯಮತೀಯರು) ಹೇಳುತ್ತಾರೆ. ಅದಕ್ಕೆ ಶ್ರೀ ವಾಯುದೇವರ ಪರ ಅರ್ಥ ಹಾಗಾದರೆ ನಷ್ಟವಾಯಿತು ಎನ್ನಬಾರದು. ಶ್ರೀ ಮದಾಚಾರ್ಯರು, ಆ ಸೂಕ್ತವನ್ನು ವಾಯುಪರವೆಂದು ತೋರಿಸಿದರು. ಹೇಗೆ ತೋರಿಸಿದರು ಎಂದು ಅನ್ಯರು ಕೇಳಬಹುದು. ಬಳಿತ್ಥಾ ಸೂಕ್ತಕ್ಕೆ ವಾಯುದೇವರ ಪರ ಅರ್ಥವು ಕಲ್ಪಿತವಲ್ಲ. ಅದು ಪುರಾಣಾದಿಗಳಲ್ಲಿ ಶ್ರೀ ವೇದವ್ಯಾಸ ದೇವರಿಂದಲೇ ಪ್ರತಿಪಾದಿತವಾದದ್ದು. ಯಾವ ಪುರಾಣಾದಿಗಳ ಬಲದಿಂದ ಬಳಿತ್ಥಾ ಸೂಕ್ತವು ಶ್ರೀ ವಾಯುದೇವರ ಪರವೆಂದು ನಾವು ಸಾಧಿಸುತ್ತೇವೆಯೋ, ಹಾಗೇ ಪರಮತ ನಿರಾಕರಣೆ ಮಾಡುತ್ತೇವೆಯೋ, ಅದೇ ಪುರಾಣಾದಿಗಳ ಭಾಗದಲ್ಲೇ, ಶ್ರೀ ವೇದವ್ಯಾಸದೇವರು ಬಳಿತ್ಥಾ ಸೂಕ್ತವು ಲಾತವ್ಯ ದೇವತೆಯ ಪರವೆಂದೂ ಅರ್ಥ ತೋರಿಸಿರುವರು. ಅದರಿಂದ ಶ್ರೀ ವಾದಿರಾಜರು ವಾಯುದೇವರಂತೇ ವೇದ ಪ್ರತಿಪಾದ್ಯರೆನ್ನುವುದರಲ್ಲಿ ಸಂಶಯವಿಲ್ಲ. ಇದು ಕಲ್ಪಿಸಿದ್ದಲ್ಲ. ಪುರಾಣದಲ್ಲೇ ಇದೆ.

**ಪ್ರಶ್ನೆ: ಯಾವ ಪುರಾಣದಲ್ಲಿ ಇದೆ?**

ಉತ್ತರ: ವಾಯು ಪುರಾಣದಲ್ಲಿ ಇದೆ. ಋಕ್ ಸಂಹಿತೆಯಲ್ಲೂ ಇದೆ.

**ಪ್ರಶ್ನೆ: ಶ್ರೀ ವಾಯುದೇವರು ಮತ್ತು ಲಾತವ್ಯರೂ, ಇಬ್ಬರೂ ಹೇಗೆ ಒಂದೇ ಸೂಕ್ತದಿಂದ ಪ್ರತಿಪಾದ್ಯರಾಗುವರು?**

ಉತ್ತರ: ಆ ವೇದಭಾಗದಿಂದ ಮೊದಲು ನಾರಾಯಣನು ಆ ಮೇಲೆ ರಮಾದೇವಿಯು ಮುಖ್ಯ ಪ್ರತಿಪಾದ್ಯರು. ಆ ಮೇಲೆ ಶ್ರೀ ವಾಯುದೇವರು ಹಾಗೇ ಲಾತವ್ಯರು. ಅದರಲ್ಲೇನೂ ಬಾಧಕವಿಲ್ಲ. ವೇದ ವಾಕ್ಯಗಳಿಗೆ ಕನಿಷ್ಠ ಮೂರು ವಿಧ ಅರ್ಥ ಇದೆ ಎಂದು ತಿಳಿಯಿರಿ.

**ಪ್ರಶ್ನೆ: ಶ್ರೀ ವಾದಿರಾಜರ ವೇದ ಪ್ರತಿಪಾದ್ಯತ್ವವನ್ನು ಒಪ್ಪಿದರೂ, ಋಜುತ್ವಸಿದ್ಧಿ ಹೇಗೆ?**

ಉತ್ತರ: ಬಳಿತ್ಥಾ ಸೂಕ್ತದ ಅರ್ಥ ವಿಸ್ತಾರ ಮಾಡುವ ಸಂಹಿತೆಗಳಲ್ಲಿ ಬ್ರಹ್ಮಾಂಡವೇ ಮೊದಲಾಗಿ



ಪುರಾಣಾಂತರದ ವಾಕ್ಯಗಳಲ್ಲೂ, ಶ್ರೀ ವಾದಿರಾಜರು ಲಾತವ್ಯದೇವತೆಯ ಅವತಾರ, ಋಜುಗಣಸ್ಥರು ಎಂದು ಚೆನ್ನಾಗಿ ಪ್ರತಿಪಾದಿತವಾಗಿದೆ.

**ಪ್ರಶ್ನೆ: ಋಜುಗಳೆಂದು ಬಳಿತ್ಥಾ ಸೂಕ್ತ ಒಂದರಿಂದ ಸಿದ್ಧಿಯಾದರೆ ಸಾಕೇ? ಶ್ರೀ ಕೃಷ್ಣನ ಸರ್ವೋತ್ತಮತ್ವವು ರಾಮಾಯಣ ಮಹಾಭಾರತಾದಿ ಬಹು ಪ್ರಮಾಣಗಳಿಂದ ಸಿದ್ಧವಾಗುವಂತೆ, ಇನ್ನೂ ಅನೇಕ ಪ್ರಮಾಣಗಳನ್ನು ಹೇಳಬೇಕಲ್ಲವೇ?**

ಉತ್ತರ: ಬೇಕಿಲ್ಲ. ಒಂದು ತತ್ವಸಾಧನೆಗೆ ನಿರ್ದೋಷವಾದ ಒಂದೇ ಪ್ರಮಾಣ ಸಾಕು. ಶ್ರೀ ವಾದಿರಾಜರು ಋಜುಗಳೆಂದು ಸಂಹಿತಾ ಪ್ರಮಾಣ ಒಂದೇ ಸಾಕು. ಅಥವಾ ವಿಶ್ವಾಸಿಗಳಿಗೆ ಶ್ರೀ ವಿಜಯದಾಸರ ಒಂದು ವಾಕ್ಯವೇ ಸಾಕು. ನೂರು ಹೆಚ್ಚಿನ ವಾಕ್ಯಗಳಿಂದ ಅವರ ಋಜುತ್ವ ಹೆಚ್ಚು ಕಡಿಮೆ ಆಗುವುದಿಲ್ಲ. ಸತ್ಯಸಾಧನೆಗೆ ನಿರ್ದೋಷವಾದ ಒಂದೇ ಪ್ರಮಾಣ ಸಾಕಾಗುತ್ತದೆ. ಆದರೆ ಶ್ರೀ ವಾದಿರಾಜರ ಋಜುತ್ವವು, ವ್ಯೋಮ ಸಂಹಿತಾ, ಲಕ್ಷ್ಮೀ ಸಂಹಿತಾ, ಪ್ರಕಾಶ ಸಂಹಿತಾ ಇತ್ಯಾದಿ ಆಗಮ ವಾಕ್ಯಗಳಿಂದಲೂ, ಬ್ರಹ್ಮಾಂಡ, ಬ್ರಹ್ಮ ವೈವರ್ತಾದಿ ಪುರಾಣ ವಾಕ್ಯಗಳಿಂದಲೂ, ಅಪರೋಕ್ಷ ಜ್ಞಾನಿಗಳ ನೂರಾರು ವಚನಗಳಿಂದಲೂ ಪ್ರತಿಪಾದಿತವಾಗಿದೆ.

**ಪ್ರಶ್ನೆ: ಲೇಖಕರು ಶ್ರೀ ವಾದಿರಾಜರ ಋಜುತ್ವ ನಿರಾಕರಣೆ ಮಾಡುವ ಉದ್ದೇಶದಿಂದ ವಾದಿರಾಜರದೇ ಅನೇಕ ವಾಕ್ಯ ಉದಾಹರಿಸಿದ್ದಾರಲ್ಲಾ, ಆ ವಿರೋಧವಾಕ್ಯಗಳೂ, ಋಜುತ್ವ ಸಾಧಕ ವಾಕ್ಯಗಳೂ ಇರುವಾಗ, ಈ ಪರಸ್ಪರ ವಾಕ್ಯ ವಿರೋಧ ಪರಿಹಾರ ಹೇಗೆ?**

ಉತ್ತರ: ಯಾವ ವಿರೋಧವಾಕ್ಯಗಳೂ ಇಲ್ಲ. ಮೇಲ್ನೋಟಕ್ಕೆ ಬೇರೆ ಅರ್ಥ ಕಾಣುವ ಆ ವಾಕ್ಯಗಳಿಗೆ ಯೋಗ್ಯ ಅರ್ಥಾಂತರವನ್ನು ಹಿಂದೆಯೇ ನಿರೂಪಿಸಿರುತ್ತೇವೆ.

**ಪ್ರಶ್ನೆ: ಋಜುತ್ವವನ್ನು ನಿರಾಕರಿಸುವ ಬಲವು ತಾವು ಉದಾಹರಿಸಿರುವ ಅನೇಕ ವಾಕ್ಯಗಳಿಗೆ ಇದೆ ಎಂದು ಲೇಖಕರು ಹೇಳಿರುವಾಗ, ಕೆಲವು ವಾಕ್ಯಗಳಿಗೆ ಅರ್ಥಾಂತರ ಹೇಳಿದ್ದರಿಂದ, ಸಂಶಯ ಹೇಗೆ ಪರಿಹಾರವಾಗುವುದು?**

ಉತ್ತರ: ಇಲ್ಲಿ ನೀವು ತಿಳಿಯಬೇಕಾದ್ದೇನೆಂದರೆ, ಲೇಖಕರು ಪಟ್ಟಿ ಮಾಡಿದ, ಆ ಯಾವ ವಾಕ್ಯಗಳಲ್ಲೂ ಶ್ರೀ ವಾದಿರಾಜರ ಸ್ವರೂಪ ವಿವಕ್ಷೆಯಿಲ್ಲ. ಅಲ್ಲಿ ಶ್ರೀ ವಾದಿರಾಜರ ತಾತ್ವಿಕ ದೇವತಾನಮನ, ದೇವತಾ ಪ್ರಾರ್ಥನೆ, ತೀರ್ಥಾಭಿಮಾನಿ ದೇವತೆಗಳ ಪ್ರಾರ್ಥನೆ ಇವೆಲ್ಲಾ, ಲೋಕರೀತಿಯ ನಡವಳಿಕೆ ತೋರುವ ವಾಕ್ಯಗಳು. ಅಲ್ಲಿ ಸಹಾಯಕ ಆಗಮವಾಕ್ಯಗಳೊಂದನ್ನೂ ತೋರಿಸದೇ, ಲೇಖಕರು ಆ ವಾಕ್ಯಗಳಿಂದ ಶುಷ್ಕ ಯುಕ್ತಿ ಚಾಲನೆಯನ್ನೇ ಮಾಡಿರುತ್ತಾರೆ. ಬರೀ ಅನುಮಾನಗಳಿಗೆ, ಶ್ರೀ ಮಧ್ವ ಸಿದ್ಧಾಂತದಲ್ಲಿ ಏನೇನೂ ಬೆಲೆಯಿಲ್ಲ. ಆಗಮ ವಿರುದ್ಧ ಅನುಮಾನಗಳನ್ನು ಹೇಳುವುದು, ವಾಕ್ಯ ಹೀನವಾದ ಯುಕ್ತಿ ಹೇಳುವುದು. ಶ್ರೀಮದಾಚಾರ್ಯರ ಮತಕ್ಕೆ ಅತ್ಯಂತ ವಿರುದ್ಧ. ಲೇಖಕರು ಈ ರೀತಿ ಪ್ರತಿಪಾದಿಸಿರುವುದರಿಂದ, ನಿರ್ಣಯ ಮಾಡಲು ಹೊರಟಿದ್ದರಿಂದ ಶ್ರೀಮದಾಚಾರ್ಯರ ಸಿದ್ಧಾಂತಕ್ಕೆ ವಿರೋಧವನ್ನೇ ಮಾಡಿದ್ದಾರೆ.

**ಪ್ರಶ್ನೆ: ಲೇಖಕರು ಶ್ರೀ ವಾದಿರಾಜರ ಬಹುವಾಕ್ಯಗಳನ್ನು ಉದಾಹರಿಸಿರುತ್ತಾರೆ. ಅವುಗಳ ಸಂಖ್ಯೆಯ ಬಾಹುಳ್ಯದಿಂದ ಶ್ರೀ ವಾದಿರಾಜರ ಸ್ವರೂಪವನ್ನು ಹೇಳುವ, ನಿರ್ದೋಷ ಆಗಮ ವಾಕ್ಯವೇ, ನಷ್ಟವಾಗಲೀ ಎನ್ನಬಹುದಲ್ಲವೇ?**

ಉತ್ತರ: ಹಾಗೆ ಹೇಳಬಾರದು. ಆ ಬಹು ವಾಕ್ಯಗಳು ಮಂತ್ರವಿಲ್ಲದ ಅಸ್ತ್ರ ಪ್ರಯೋಗ ಮಾಡಿದಂತೆ. ಅವುಗಳಿಂದ ಈ ಲೇಖಕರ ಅಪೇಕ್ಷಿತ ಕಾರ್ಯಸಿದ್ಧಿ ಇಲ್ಲ. ಋಜುಗಳೆಂದು ಅವರ ಸ್ವರೂಪ ಸಾಧನೆಗೆ ಒಂದಲ್ಲ ನೂರು ಪ್ರಮಾಣಗಳಿವೆ. ಆದರೆ ಲೇಖಕರು, ಶ್ರೀ ವಾದಿರಾಜರ ಗ್ರಂಥಸ್ಥ ಬಹುವಾಕ್ಯಗಳನ್ನು, ಅವರ ಋಜುತ್ವಕ್ಕೆ ವಿರುದ್ಧ ಆಗಮಪ್ರಮಾಣವಾಗಲೀ ಅಂತ ಉದಾಹರಿಸಿದ್ದಾರೆ. ಅವು ಸೀದಾ ಸಾದಾ ಆಗಮವಲ್ಲ. ಅದು ಯುಕ್ತಿ ಚಾಲನೆ ಅಷ್ಟೇ ಅಂತ ಹಿಂದೆಯೂ ನಿರೂಪಿಸಿದ್ದೇವೆ. ಆ ಅನುಮಾನಗಳು, ಬೆಲೆಕಟ್ಟಲಿಕ್ಕಾಗದ ಮೂಲಾಗಮ ವಾಕ್ಯರತ್ನಗಳ ಮುಂದೆ, ಕಾಸಿನ ಬೆಲೆಯೂ ಇಲ್ಲದವು. ಆ ಅನುಮಾನಗಳಿಂದ ಮಾಡಿದ ನಿರ್ಣಯ, ಶ್ರೀಮದಾಚಾರ್ಯರ ಮತಾನುಸಾರಿ ನಿರ್ಣಯವೇ ಅಲ್ಲ.

**ಪ್ರಶ್ನೆ: ನೀವು ಹೇಳಿದ ರೀತಿ, ಶ್ರೀಮದಾಚಾರ್ಯರ ಸಿದ್ಧಾಂತ ಒಪ್ಪಿದರೂ, ಲೇಖಕರು ಶ್ರೀಮದಾಚಾರ್ಯರ ಸಿದ್ಧಾಂತ ವಿರೋಧದಿಂದ ನಿರ್ಣಯ ಮಾಡಿದ್ದಾರೆಂದು ಒಪ್ಪಿದರೂ, ಸಂಶಯ ಇನ್ನೂ ಉಳಿಯುತ್ತದೆಯಲ್ಲಾ?**

ಉತ್ತರ: ಸಂಶಯ ಉಳಿಯುವ ಕಾರಣವೇನು?

**ಪ್ರಶ್ನೆ: ''ಶಿವಾಜ್ಞಯಾ ವಾದಿರಾಜಃ ಶಿವಾದೀನಾಂ ಅನುಗ್ರಹಾತ್'' ಅನ್ನುವ ಹರಿಭಕ್ತಿಲತೆಯ ವಾಕ್ಯ ಪುನಃ ಸಂಶಯ ಬರಿಸುತ್ತದೆಯಲ್ಲಾ?**

ಉತ್ತರ: ಸಂಶಯಕ್ಕೆ ಅವಕಾಶವಿಲ್ಲ. ಅಲ್ಲಿ ಶ್ರೀ ವಾದಿರಾಜರು ನಿಖರವಾಗಿ ಸ್ವರೂಪ ಹೇಳಿಕೊಂಡಿದ್ದಾರೇನು? ಇಲ್ಲ. ಶಿವಾದಿಗಳ ಅನುಗ್ರಹ ಅಂತ ಹೇಳಿದ್ದರಿಂದ ಶ್ರೀ ವಾದಿರಾಜರು ಸ್ವರೂಪತಃ ಕಡಿಮೆಯಾಗಿರಬೇಕು ಅನ್ನುವ ಅನುಮಾನವೇ ಅಲ್ಲಿ ಪ್ರಾಪ್ತವಾಗುತ್ತದೆ. ಈ ಅನುಮಾನಕ್ಕೆ ನಿರವಕಾಶ ಆಗಮವನ್ನು ಜಯಿಸುವ ಬಲವಿಲ್ಲ.

**ಪ್ರಶ್ನೆ: ಶ್ರೀ ವಾದಿರಾಜರು ಋಜುಗಳಾಗಿದ್ದರೆ ಯಾಕೆ ಶಿವನ ಅನುಗ್ರಹ ಉಲ್ಲೇಖಿಸಬೇಕು?**

ಉತ್ತರ: ಹರಿಭಕ್ತಿಲತೆಯಲ್ಲಿ ವಾದಿರಾಜರು ಶಿವನ ಕ್ರೋಧ, ಮೋಹ, ಕಾಮಾದಿ ದೋಷ ತೋರಿಸಿ , ಶಿವ ಸರ್ವೋತ್ತಮತ್ವವನ್ನು ಚೆನ್ನಾಗಿ ನಿರಾಕರಿಸಿ , ವಿಷ್ಣುವೇ ಸರ್ವೋತ್ತಮನೆಂದು ಸ್ಥಾಪಿಸಿದ್ದಾರೆ. ಅಲ್ಲಿ, ಶಿವಾಜ್ಞಯಾ ಅಂತಿರುವುದರಿಂದ, ಶಿವ ಶಬ್ದದಿಂದ ಉಮಾಪತಿಯನ್ನು ಗ್ರಹಿಸಿದರೆ ಕೂಡುವುದಿಲ್ಲ. ಯಾಕೆಂದರೆ, ಆಗ ಈಶ್ವರನೇ ತನ್ನ ದೋಷಗಳನ್ನು ಹೊರಹಾಕಿಸಿ, ತನ್ನ ನಿಜ ಸ್ವರೂಪ ಸಾಧಿಸಲು, ಶ್ರೀ ವಾದಿರಾಜರಿಗೆ ಆಜ್ಞೆ ಮಾಡಿದನು ಎನ್ನುವ ಅರ್ಥ ಲಭಿಸುತ್ತದೆ. ಅದು ಕೂಡುವುದಿಲ್ಲ. ಲೇಖಕರು ಈ ವಾಕ್ಯದಿಂದ ಶ್ರೀ ವಾದಿರಾಜರ ಋಜುತ್ವ ನಿರಾಕರಣೆ ಮಾಡುತ್ತೇವೆ ಅನ್ನುವುದಾದರೆ, ಅವರಿಗೆ ಕಾರ್ಯ ಹಾನಿ. ಯಾಕೆಂದರೆ, ತನಗಿಂತ ಅತೀ ಕಡಿಮೆ ಸ್ವರೂಪದ (ಲೇಖಕರ ಪ್ರಕಾರ ವಿದ್ಯಾ ದಾರಿದ್ರ್ಯವುಳ್ಳ ಮನುಷ್ಯರಾದ) ಯತಿಯೊಬ್ಬರಿಗೆ (ಶ್ರೀ ವಾದಿರಾಜರಿಗೆ) ಈಶ್ವರನು '' ನನ್ನ ದೋಷ



ಹೊರಹಾಕಿ, ನನ್ನ ಸ್ವರೂಪ ಸಾಧಿಸಿ'' ಅಂತ ಆಜ್ಞೆ ಯಾಕೆ ಮಾಡುವನು? ಯಾವಾಗ ಪ್ರತ್ಯಕ್ಷನಾಗಿ ಆಜ್ಞೆ ಮಾಡಿದನು? ತಮಗಿಂತ ಸ್ವರೂಪತಃ ನೀಚರು, ತಮ್ಮ ದೋಷಗಳನ್ನು ಕಂಠತಃ ಹೇಳಿ ಸಾಧಿಸುವುದನ್ನು ದೇವತೆಗಳು ಸಹಿಸುವುದಿಲ್ಲ, ಶಾಪ ಕೊಡುತ್ತಾರೆ. ತಮಗಿಂತ ಉತ್ತಮರು ಮಾಡಿದರೆ ಸುಮ್ಮನಿದ್ದಾರೆನ್ನುವುದೇ ಪರಮಾರ್ಥವು. ಶಿವಾ ಅಂದರೆ ಶ್ರೀ ದುರ್ಗಾ ದೇವಿಯು. ಆ ವಿವಕ್ಷೆ ಇಟ್ಟುಕೊಳ್ಳುವುದು ಸಮನ್ವಯ ಸಿದ್ಧವು. ತಮ್ಮ ಮಾತಿಗೆ ಶ್ರೀ ದುರ್ಗಾದೇವಿಯು, ನಿಯಾಮಕ ದೇವತೆ ಎಂತ ವಾದಿರಾಜರೇ ಹೇಳಿಕೊಂಡಿದ್ದಾರೆ. ಆ ಅರ್ಥ ಗ್ರಹಿಸದಿದ್ದರೆ, ಅಲ್ಲಿ ಪೂರ್ವಾಪರ ವಿರೋಧ ಪ್ರಾಪ್ತವಾಗುತ್ತದೆ. ಈ ಅರ್ಥ ಗ್ರಹಿಸಿದರೆ ಋಜುತ್ವಕ್ಕೆ ಏನೇನೂ ಹಾನಿಯಿಲ್ಲ.

**ಪ್ರಶ್ನೆ: ಶಿವ ಶಬ್ದಕ್ಕೆ ಪ್ರಸಿದ್ಧ ಈಶ್ವರನನ್ನೇ ಯಾಕೆ ಗ್ರಹಿಸಬಾರದು?**

ಉತ್ತರ: ಶಿವ ಶಬ್ದವು ವಿಷ್ಣು ಸಹಸ್ರನಾಮದಲ್ಲಿ ಪಠಿತವಾಗಿದೆ. ದುರ್ಗಾಸಹಸ್ರನಾಮದಲ್ಲೂ ಶಿವಾ ಶಬ್ದವಿದೆ. ಅದು ಶ್ರೀ ವಾಯುದೇವರ ಹೆಸರೂ ಹೌದು. ಪಾರ್ವತೀ ಪರಮೇಶ್ವರ ವಾಚಕವೂ ಹೌದು. ಸಂದರ್ಭದಲ್ಲಿ, ಶಿವಾಜ್ಞಯಾ ಅನ್ನುವಾಗ ಕನಿಷ್ಠ ಐದು ಅರ್ಥ ಸಾಧ್ಯ. ಋಕ್ಸಂಹಿತಾ ವಾಕ್ಯಗಳಿಗೆ, ಬ್ರಹ್ಮಾಂಡ ಪುರಾಣವಾಕ್ಯಕ್ಕೆ ಅರ್ಥಾಂತರ ಸಾಧ್ಯವಿಲ್ಲ. ಅದ್ದರಿಂದ ದುರ್ಗಾದೇವಿಯ ಪರ ಅರ್ಥ ಸ್ವೀಕರಿಸಿದಾಗ, ಹರಿಭಕ್ತಿಲತಾ ಗ್ರಂಥದ ಶ್ಲೋಕದಲ್ಲಿ ಪೂರ್ವಾಪರ ವಿರೋಧವೂ ಪರಿಹಾರವಾಗುತ್ತದೆ, ಸಮನ್ವಯವೂ ಸಿದ್ಧವಾಗುತ್ತದೆ. 'ಶಿವಾದೀನಾಂ ಅನುಗ್ರಹಾತ್'' ಅನ್ನುವಾಗ, ''ಶಿವಾದೀನಾಂ'' ಅನ್ನುವಲ್ಲಿ, ಈಶ್ವರ ಮೊದಲಾದವರಿಗೆ ಅನುಗ್ರಹಿಸುವುದಕ್ಕೋಸ್ಕರ, ಶ್ರೀ ವಾದಿರಾಜರು ರಚಿಸಿದರು ಅನ್ನುವ ಅರ್ಥವೂ ಲಭ್ಯವು.

**ಪ್ರಶ್ನೆ: ''ದೋಷಂ ಮೇ ಹರ ಹೇ ಹರ'' ಅಂತ ಶ್ರೀ ವಾದಿರಾಜರೇ ಈಶ್ವರನನ್ನು ಪ್ರಾರ್ಥಿಸಿದ್ದಾರೆಂದು ಲೇಖಕರು ಬರೆದಿದ್ದಾರೆ. ಈ ವಾಕ್ಯ ಪುನಃ ಸಂಶಯ ತರಿಸುತ್ತದೆಯಲ್ಲಾ?**

ಉತ್ತರ: ಅಲ್ಲಿ ಲೇಖಕರು, ತಮ್ಮ ಪುಸ್ತಕ ಓದುವವರಿಗೆ, ದೊಡ್ಡ ಮೋಸವನ್ನು ಮಾಡಿದ್ದಾರೆ. ತೀರ್ಥ ಪ್ರಬಂಧದ ಆ ಶ್ಲೋಕದಲ್ಲಿ, ನನ್ನ ದೋಷ ಪರಿಹರಿಸಿ ಎಂದು ದೇವತೆಯಾದ ಚಂದ್ರನು, ಚಂದ್ರಕಲೆಯನ್ನು ಹೋಲುವ, ಈಶ್ವರನ ಪಾದನಖದ ನೆಪದಲ್ಲಿ ಆಶ್ರಯಿಸಿದ್ದಾನೆಂದು ಉತ್ಪ್ರೇಕ್ಷೆಯನ್ನು, ಶ್ರೀ ವಾದಿರಾಜರು, ಮಾಡಿದ್ದಾರೆಯೇ ಹೊರತು ತಮ್ಮ ದೋಷ ಹೇಳಿಕೊಳ್ಳಲಿಲ್ಲ. ಶಿವನು ಚಂದ್ರನ ಆ ಕಳಂಕ ದೋಷ ಪರಿಹರಿಸಿ, ಆ ಕಳಂಕರೂಪ ಜಿಂಕೆಯನ್ನು ಕೈಲಿ ಹಿಡಿದಂತೆ ಮಾಡಿ, ಈಗ ದೋಷ ಕಳಕೊಂಡ ಚಂದ್ರನನ್ನು, ಶಿರಸ್ಸಿನಲ್ಲಿ ಧರಿಸಿದನು, ಅಂತ ಆ ಶ್ಲೋಕ ತಾತ್ಪರ್ಯ. ಅಲ್ಲಿ ಶ್ರೀ ವಾದಿರಾಜರ ದೋಷ ಪ್ರಸಕ್ತಿಯೇ ಇಲ್ಲ. ಅವರು ಈಶ್ವರನ ಪಾದಕ್ಕೆ ಬೀಳುವ ಪ್ರಸಂಗವೇ ಅಲ್ಲಿಲ್ಲ. ಅಲ್ಲಿ ಶ್ರೀ ವಾದಿರಾಜರದೇ ದೋಷ ಎಂದು ಅನುವಾದಿಸಿ, ಲೇಖಕರು ಸತ್ಯಾಂಶವನ್ನು ಮರೆಮಾಚಿದ್ದಾರೆ. ಲೇಖಕರು ಹೇಳುವ ಅರ್ಥ, ಆ ವಾಕ್ಯಕ್ಕೆ ಕೂಡುವುದೇ ಇಲ್ಲ.

**ಪ್ರಶ್ನೆ : ''ತತ್ ಖಂಡಿತಾವದ್ಯೇನ ಅಮಲ ವಾದಿರಾಜ ಯತಿನಾ'' ಅನ್ನುವ ವಾಕ್ಯವನ್ನು (ಪುಟ 7 ರಲ್ಲಿ) ಲೇಖಕರು ಉದಾಹರಿಸಿದ್ದಾರೆ. ಅದರಿಂದ ಅವರಿಗೆ ಪಾಪ ಮತ್ತು ದೋಷಗಳಿದ್ದವು. ಅವನ್ನು ನದೀ ಸೇವನೆಯಿಂದ ಕಳೆದುಕೊಂಡು ಶುದ್ಧರಾದರು ಎಂತ ಅರ್ಥ ಹೇಳಿದ್ದಾರೆ. ಆದ್ದರಿಂದ ಪುನಃ ಸಂಶಯ ಬರುತ್ತದೆಯಲ್ಲಾ?**

ಉತ್ತರ: ಅಲ್ಲಿ ಶ್ರೀ ವಾದಿರಾಜರಿಗೆ ದೋಷ ಮತ್ತು ಪಾಪಗಳಿದ್ದವು, ಅವು ,ನದೀ ಸೇವನೆಯಿಂದ ಹೋದವು ಎಂದು ಅರ್ಥ ಮಾಡುವುದು ಏನೇನೂ ಸರಿಯಲ್ಲ. ''ಅಮಲ ವಾದಿರಾಜ ಯತಿನಾ'' ಅಂತ ಬೇರೆ ಸ್ವತಂತ್ರ ವಿಶೇಷಣವೇ ಇರುವುದರಿಂದ, ಅವರು ತಾವು ದೋಷ ರಹಿತರೆಂದೇ ಅಲ್ಲಿ ಹೇಳಿಕೊಂಡಿರುವರು. ''ತತ್ ಖಂಡಿತಾವದ್ಯ'' ಅನ್ನುವ ಪದಕ್ಕೆ ಪಾಪ ಇತ್ತು, ಹೋಯಿತು ಅಂತ ಅರ್ಥ ಹೇಳಿದರೆ ಅಲ್ಲೇ ಪೂರ್ವಾಪರ ವಿರೋಧ ಬಂದು ಶ್ಲೋಕ ತಾತ್ಪರ್ಯವೇ ಕೂಡುವುದಿಲ್ಲ. ಅನಾದಿಯಾದ ಭಗವದ್ ಅನುಗ್ರಹದಿಂದ ಖಂಡಿತವಾದ ಸಮಸ್ತ ದೋಷಗಳುಳ್ಳ ಶ್ರೀ ವಾದಿರಾಜ ಸ್ವಾಮಿಗಳು ಎಂದು ಅರ್ಥೈಸಿದರೆ, ಪೂರ್ವಾಪರ ವಿರೋಧವಿಲ್ಲ. ಅದೇ ಅವರ ಭಾವ. ಅದನ್ನು ಗ್ರಹಿಸಬೇಕು. ತಮ್ಮನ್ನು 'ವಿಮಲವಾದಿರಾಜಾಭಿಧಃ' ಅಂತ ಅವರೇ ಹೇಳಿಕೊಂಡಿದ್ದಾರೆ. ಹೀಗೆಯೆ ಬೇರೆ ವಾಕ್ಯಗಳ ವಿಷಯದಲ್ಲೂ ಪೂರ್ವಾಪರ ವಿರೋಧ ಬರದಂತೆ ಅರ್ಥೈಸುವ ಪರಿಯನ್ನು ಸದ್ಗುರುಗಳ ಮುಖದಿಂದ ತಿಳಿಯಬೇಕು. ಆ ವಾಕ್ಯಗಳಲ್ಲಿ ವಾದಿರಾಜರ ಸ್ವರೂಪ ಉಲ್ಲೇಖದ ಪ್ರಸಕ್ತಿ ಇಲ್ಲ. ಲೇಖಕರು ಈ ವಾಕ್ಯಗಳಿಂದ ಮಾಡುವ ಋಜುತ್ವ ವಿರೋಧಕ ಯುಕ್ತಿ ನಿಲ್ಲುವುದಿಲ್ಲವೆಂದು ಹಿಂದೆಯೂ ತೋರಿಸಿದ್ದೇವೆ.

**ಪ್ರಶ್ನೆ: ಗೋದಾವರೀ, ತ್ರಿವೇಣೀ, ಗಂಗಾ, ಕಾಮಾಕ್ಷಿ, ಶಿವ, ಅಗಸ್ತ್ಯ ಮುಂತಾದ ದೇವತೆ, ಋಷಿ, ನದಿ, ತೀರ್ಥ ಕ್ಷೇತ್ರಗಳನ್ನು ಪಾಪ, ತಾಪ, ತ್ರಾಸ, ಆಯಾಸ, ಶ್ರಮ, ರೋಗ, ಕಾಮ ಇತ್ಯಾದಿ ಕಳೆಯಲು ಶ್ರೀ ವಾದಿರಾಜರು ಪ್ರಾರ್ಥಿಸುತ್ತಾರೆ ಅಂತ ಲೇಖಕರು ಬರೆದಿದ್ದಾರೆ. ದೇವತೆಗಳಿಗೆ ಪ್ರಾರ್ಥಿಸುವ, ಯಾಚಿಸುವ ಈ ವಾಕ್ಯಗಳಿಂದ ಶ್ರೀ ವಾದಿರಾಜರು ತಮ್ಮನ್ನು ತಾವು ಋಜುಗಳಲ್ಲವೆಂದು ಹೇಳಿಕೊಂಡಿದ್ದಾರೆ ಎಂದೂ ಬರೆದಿದ್ದಾರೆ. ಇದು ಸತ್ಯವೇ?**

ಉತ್ತರ: ಸತ್ಯವಲ್ಲ. ಆ ತೀರ್ಥಪ್ರಬಂಧವಾಕ್ಯಗಳಿಂದ ಶ್ರೀ ವಾದಿರಾಜರು ತಮ್ಮ ಕಾಮ, ರೋಗ, ಕ್ರೋಧ, ಮದ, ಪಾಪ ಇತ್ಯಾದಿ ಕಳೆಯಲು ಈ ರೀತಿ ಪ್ರಾರ್ಥಿಸಿದ್ದಾರೆಂದು ಲೇಖಕರು ಹೇಳುವುದಾದರೆ, ಅದು ಸರಿಯಲ್ಲ. ಅವರಿಗೇ ಸ್ವವಾಕ್ಯ ವಿರೋಧ.

**ಪ್ರಶ್ನೆ: ಸ್ವವಾಕ್ಯ ವಿರೋಧ ಹೇಗೆ?**

ಉತ್ತರ: ತಮ್ಮ ಪುಸ್ತಕದ 14ನೇ ಪುಟದಲ್ಲಿ ಲೇಖಕರು *''ಸ್ತೋತ್ರಗಳು ಪರರಿಗಾಗಿ ರಚಿತವಾಗಿರುತ್ತವೆ ಅವುಗಳಲ್ಲಿ ಹೇಳಿದ ದೋಷಗಳು ಸ್ತುತಿಕಾರನಿಗೆ ಸಂಬಂಧಿಸಿದ್ದಲ್ಲ''* ಅಂತ ತಾವೇ ಹೇಳಿದ್ದಾರೆ. ತೀರ್ಥ ಪ್ರಬಂಧ ನಿಜವಾಗಿ ತೀರ್ಥಕ್ಷೇತ್ರ ಅಭಿಮಾನಿ ದೇವತಾ ಸ್ತೋತ್ರ ರೂಪವೇ ಆದ್ದರಿಂದ, ನಾವು ಹೇಳಬೇಕಾದ ಸಮಾಧಾನವನ್ನು ಅವರೇ ಹೇಳಿದ್ದಾರೆ.



**ಪ್ರಶ್ನೆ: ಆದರೆ ಆ ಲೇಖಕರು ಅಲ್ಲೇ ಮುಂದೆ *'''ವಾದಿರಾಜರ ಸ್ತುತಿಯಲ್ಲಿಯ ದೋಷಗಳು ವಾದಿರಾಜರಿಗೆ ಸಂಬಂಧಿಸಿದ್ದು ಅಲ್ಲವೆಂದು ಒಪ್ಪಬಹುದಾದರೂ, ವಾದಿರಾಜರು ಗ್ರಂಥದಲ್ಲಿ ಹೇಳಿಕೊಂಡ ದೋಷಗಳು ಅವರದೇ ಅನ್ನಬೇಕಾಗುತ್ತದ''* ಅಂತ ಬರೆದಿದ್ದಾರಲ್ಲಾ?**

ಉತ್ತರ: ಅದು ಏನೇನೂ ಸರಿಯಲ್ಲ. ಸ್ತೋತ್ರಗಳು ಪರರಿಗಾಗಿ ರಚಿತವಾದಂತೆ, ಶ್ರೀ ವಾದಿರಾಜರ ಗ್ರಂಥಗಳೂ ಪರರಿಗೋಸ್ಕರ, ಭಕ್ತರಿಗೋಸ್ಕರ, ಆಶ್ರಿತರಿಗೋಸ್ಕರ, ರಚಿಸಿದ್ದೆಂದು ತಿಳಿಯಿರಿ. ಹರಿಭಕ್ತಿಲತಾಗ್ರಂಥದ ಆದಿಯಲ್ಲಿ 'ಹರಿಭಕ್ತಿಲತಾಮೇತಾಂ....ಕರೋತಿ ವಾದಿರಾಜೇಂದ್ರ: ಸತಾಂ **ಮುಕ್ತಿಫಲಾಪ್ತಯೇ'** ಅಂತ ಶ್ರೀ ವಾದಿರಾಜರು ಹೇಳಿಕೊಂಡಿದ್ದಾರೆ. ಸಾತ್ವಿಕರ ಮುಕ್ತಿಫಲಕ್ಕೆ ಈ ಗ್ರಂಥ ರಚಿಸುತ್ತಿದ್ದೇವೆಂದು ಅದರ ಅರ್ಥ. ಲೇಖಕರು ಪುಟ 21 ರಲ್ಲಿ 'ಸಾತ್ವಿಕರ ಉದ್ಧಾರ ಹಾಗೂ ತಮ: ಪರಿಹಾರವನ್ನೇ ಉದ್ದೇಶಿಸಿ ಹೊರಟ ಯುಕ್ತಿಮಲ್ಲಿಕಾ' ಅಂತಲೂ, ಪುಟ 18 ರಲ್ಲಿ 'ಸಾತ್ವಿಕ ಜೀವರಾಶಿಗಳ ತತ್ವಜ್ಞಾನಕ್ಕಾಗಿಯೇ ವಿರಚಿತವಾದ ಯುಕ್ತಿಮಲ್ಲಿಕಾ' ಅಂತಲೂ ಉಲ್ಲೇಖ ಮಾಡಿದ್ದಾರೆ. ಅದರಿಂದ ಗ್ರಂಥಗಳೂ, ಪರರಿಗೋಸ್ಕರ ರಚಿತವು ಅಂತ ಗೊತ್ತಾಗುವುದಿಲ್ಲವೇನು? ಲೇಖಕರಿಗೇ ಸ್ವವಾಕ್ಯ ವಿರೊಧ.

**ಪ್ರಶ್ನೆ : ಶ್ರೀ ವಾದಿರಾಜರು ರಚಿಸಿದ ಸ್ತುತಿಗಳಿಗೂ, ಗ್ರಂಥಗಳಿಗೂ, ವ್ಯತ್ಯಾಸವಿದೆಯೆ ಇಲ್ಲವೇ?**

ಉತ್ತರ: ವ್ಯತ್ಯಾಸವೇನೇನೂ ಇಲ್ಲ. ಸಿದ್ಧಾಂತವನ್ನು ನಿರೂಪಿಸುತ್ತೇವೆ. ಜ್ಞಾನಿಗಳಿಗೆ ಸಮ್ಮತವಾದ ರೀತಿಯಿಂದ ವಿಚಾರಿಸಿದರೆ, ವಾದಿರಾಜ ಸ್ವಾಮಿಗಳು ರಚಿಸಿದ ಸ್ತುತಿಗಳು ಅವರ ಮುಖಚಂದ್ರದಿಂದುದಿಸಿ, ಬೆಳದಿಂಗಳಂತೆ, ಎಷ್ಟು ಪ್ರಭಾವಿಕವೋ, ಎಷ್ಟು ತಾಪಹರಣ ಬೆಲೆಯುಳ್ಳವೋ, ಎಷ್ಟು ಮಂತ್ರವೀರ್ಯ ಉಳ್ಳವೋ, ಅಷ್ಟೇ, ಅವರ ಬೇರೆ ಗ್ರಂಥಗಳೂ, ಅವರ ಕನ್ನಡದ ಕೃತಿಗಳೂ, ತುಳು ಪದ್ಯಗಳು ಕೂಡಾ, ಅಂತ ತಿಳಿಯಿರಿ. ಅವರ ಕೃತಿಗಳ ಮಧ್ಯೆ ಭೇದ ಕಲ್ಪಿಸಬಾರದು. ಅದರಲ್ಲಿ ಸಂಶಯವಿಲ್ಲ. ಅವರ ಲಕ್ಷ್ಮೀ ಶೋಭನ ಪದ, ವೈಕುಂಠ ವರ್ಣನೆ ಮೊದಲಾದ ಕನ್ನಡ ಕೃತಿಗಳಿವೆ. ಅವುಗಳಿಗೆ ಮಹತ್ತ್ವ ಕಡಿಮೆ, ಸಂಸ್ಕೃತ ಕೃತಿಗಳಿಗೆ ಮಹತ್ತ್ವ ಜಾಸ್ತಿ ಎನ್ನುವುದು ವಾದಿರಾಜರ ವಾಕ್ಯ ಸಂಪತ್ತಿಗೆ ಮಾಡುವ ದೊಡ್ಡ ದ್ರೋಹ. ಶ್ರೀ ವಾದಿರಾಜರು ಕನ್ನಡದಲ್ಲಿ ಅಬದ್ಧ ರಚನಾ ಮಾಡಿ, ಪಂಡಿತರಿಗೋಸ್ಕರ, ಸಂಸ್ಕೃತದಲ್ಲಿ ಶಾಸ್ತ್ರ ಸಮ್ಮತ ದಿವ್ಯ ಗ್ರಂಥ ರಚನಾ ಮಾಡುತ್ತಾರೆಯೇ? ಎಂದಿಗೂ ಇಲ್ಲ. ಅವರ ಸಂಸ್ಕೃತ ಕೃತಿಗಳ ಮಧ್ಯೆ, ಸ್ತುತಿಗಳಿಗೆ ಮಹತ್ತ್ವ ಕಡಿಮೆ, ಅಥವಾ ಪ್ರಭಾವ ಕಡಿಮೆ; ಯುಕ್ತಿಮಲ್ಲಿಕಾದಿ ಗ್ರಂಥಗಳಿಗೆ ಮಹತ್ತ್ವ ಜಾಸ್ತಿ ಅನ್ನುವುದು ದೊಡ್ಡ ತಪ್ಪು. ಆ ರೀತಿಯ ವಾದದಲ್ಲಿ ಏನೇನೂ ಹುರುಳಿಲ್ಲ. ಅದನ್ನು ನಂಬಬಾರದು. ಶ್ರೀ ವಾದಿರಾಜರ ಸಮಸ್ತ ವಾಕ್ಯಗಳು ಪರಸ್ಪರ ಸಮವೇ, ಎಲ್ಲವೂ ಮಂತ್ರದಂತೆ ದಿವ್ಯ ಪ್ರಭಾವ ಉಳ್ಳವೇ. ತಮ್ಮ ಕನ್ನಡ ಪದಗಳೂ, ಮಂತ್ರದಂತೆ ಕೆಲಸ ಮಾಡುವವು, ಮಹಾಫಲ ಪ್ರಾಪಕವೆಂದು, ವಾದಿರಾಜರು ವೈಕುಂಠ ವರ್ಣನೆಯಲ್ಲಿ ಹೇಳಿಕೊಂಡಿದ್ದಾರೆ. ಅದೇ ತತ್ವ.

**ಪ್ರಶ್ನೆ: ಗ್ರಂಥಗಳಲ್ಲಿ ಯಾಕೆ ಶ್ರೀ ವಾದಿರಾಜರು ತಮ್ಮ ದೋಷ ಹೇಳಿಕೊಳ್ಳಬೇಕು? ದೋಷ ಅವರಿಗೆ ಇದೆಯೆಂದರ್ಥವೇ? ಇಲ್ಲವೆಂದರ್ಥವೇ?**

ಉತ್ತರ: ಗ್ರಂಥಗಳಲ್ಲಾಗಲೀ, ಸ್ತುತಿಗಳಲ್ಲಾಗಲೀ, ಕನ್ನಡ ಪದ್ಯಗಳಲ್ಲಾಗಲೀ, ಶ್ರೀ ವಾದಿರಾಜರು

ಹೇಳಿಕೊಂಡಂತೆ ತೋರುವುದು, ಅವರ ಸ್ವಂತ ದೋಷವಲ್ಲ, ಸಾಮಾನ್ಯ ಭಕ್ತರು ಹಾಗೆ ಪ್ರಾರ್ಥನೆ ಮಾಡಬೇಕೆನ್ನುವುದೇ ತತ್ವ. ಅದೇ ಶ್ರೀ ವಾದಿರಾಜರ ಭಾವ. ಲೇಖಕರು ಸ್ತೋತ್ರದ ವಿಷಯದಲ್ಲಿ ಈ ಪ್ರಮೇಯವನ್ನು ಒಪ್ಪಿಯೇ ಇದ್ದಾರೆ. ಗ್ರಂಥಗಳ ವಿಷಯದಲ್ಲೂ ಹಾಗೇ ಗ್ರಹಿಸಬೇಕು.

**ಪ್ರಶ್ನೆ : ಅವರು ಹೇಳಿಕೊಂಡಿದ್ದರಿಂದ, ಅವರದೇ ದೋಷಗಳೆಂದು ಯಾಕೆ ಹೇಳಬಾರದು? ಸಾಮಾನ್ಯ ಭಕ್ತರ ದೋಷದ ಅಭಿಪ್ರಾಯ ಉಳ್ಳದ್ದು ಅಂತ ಯಾಕೆ ಹೇಳಬೇಕು?**

ಉತ್ತರ: ಅದು ಭಕ್ತರ ವಿಷಯವೆನ್ನುವುದು ಜ್ಞಾನಿಗಳಿಗೆ ಸಮ್ಮತವಾದದ್ದು. ಪ್ರತ್ಯಕ್ಷ ಸಿದ್ಧವಾದದ್ದು. ಹಾಗೆ ಹೇಳದಿದ್ದರೆ, ಪ್ರತ್ಯಕ್ಷ ವಿರೋಧ ಬರುತ್ತದೆ. ದೃಷ್ಟಾಂತಗಳಿಂದ ತಿಳಿಯಬೇಕು. ಬ್ರಹ್ಮದೇವರು ಜಿತಂತೇ ಸ್ತೋತ್ರದಲ್ಲಿ ತಮ್ಮನ್ನು ''ಪಾಪಿಷ್ಠ' ಇತ್ಯಾದಿ ಹೇಳಿಕೊಂಡಿದ್ದು ಸಾಮಾನ್ಯ ಭಕ್ತರಿಗೇ ಅನ್ವಯಿಸಬೇಕು, ಅವರಿಗಲ್ಲ. ವಿನಯ ಪ್ರದರ್ಶನದ ಪ್ರವೃತ್ತಿಗೆಂದೂ ಹಿಂದೆಯೇ ಹೇಳಿದ್ದೇವೆ. ವಿಜಯೀಂದ್ರ ಸ್ವಾಮಿಗಳು ತಾವು ರಚಿಸಿದ ದುರಿತಾಪಹ ಸ್ತೋತ್ರದಲ್ಲಿ ತಮ್ಮ ಪಾಪಗಳು ಅನಂತ, ಶ್ರೀ ರಮಾದೇವಿಯಿಂದಲೂ ಎಣಿಸಲಾಗದಷ್ಟು ಸಂಖ್ಯೆಯವು ಎಂದಿರುತ್ತಾರೆ. ಅದನ್ನು ಮಹಾಮಹಿಮರಾದ ಅವರಿಗೇ ಅನ್ವಯಿಸಬಾರದು. ಶ್ರೀ ವಾದಿರಾಜರು ಕನ್ನಡ ಪದದಲ್ಲಿ 'ಕಾಮನ ಬಾಧೆಯ ತಡೆಯಲಾರದೇ ಕಂಡ ಕಾಮಿನಿಯರನ್ನೇ ಕೂಡಿ, ನೇಮ ನಿಷ್ಠೆಯ ಬಿಟ್ಟು ನಿನ್ನನ್ನು ಭಜಿಸದೇ ಪಾಮರ ನಾನಾದೆನೋ ಹಯವದನ'' ಎಂದಿರುವರು. ಅದನ್ನು ಅವರಿಗೇ ಅನ್ವಯಿಸಿದರೆ ದೊಡ್ಡ ದ್ರೋಹ. ''ಇಷ್ಟು ಪಾಪಗಳ ಮಾಡಿದ್ದೆ ಸಾಕೋ'', ''ಹೆಂಡತಿ ಪ್ರಾಣ ಹಿಂಡುತೀ, ಕೊಂಡ ಕೋತಿಯಂತೆ ಕುಣಿಕುಣಿದಾಡುತ್ತಿ'' ಅಂತ ಪುರಂದರ ದಾಸರು ತಮ್ಮ ಪದದಲ್ಲಿ ಹೇಳಿದರು. ಅದು, ಅವರ ವಿಷಯವೇ ಅನ್ನಬಾರದು. ಹೀಗೆ ಅಸಂಖ್ಯ ದೃಷ್ಟಾಂತಗಳನ್ನು ಕೊಡಬಹುದು. ಕನ್ನಡ ಕೃತಿಗಳಾಗಲೀ, ಸಂಸ್ಕೃತ ಸ್ತುತಿಗಳಾಗಲೀ, ಗ್ರಂಥ ರತ್ನಗಳಾಗಲೀ, ಪರಿಹಾರ ಒಂದೇ. ಸಮಾಧಾನ ಒಂದೇ. ಅವೆಲ್ಲಾ ಭಕ್ತರ ಉದ್ಧಾರಾರ್ಥವಾಗಿಯೇ. ಭಕ್ತರ ಪ್ರಾರ್ಥನಾ ರೀತಿ, ಶ್ರೀ ವಾದಿರಾಜರೇ ಮೊದಲಾದ ಜ್ಞಾನಿಗಳು ತೋರಿಸಿರುವುದು. ನಾನು ಮಂದಮತಿ ಅಂತ ಹೇಳಿಕೊಳ್ಳುವುದೂ ಹಾಗೇ. ಈ ರೀತಿ ಹೇಳಿದ್ದು ಅವರವರ ವೈಯಕ್ತಿಕ ದೋಷಗಳಲ್ಲವೆಂದು ಚೆನ್ನಾಗಿ ಸಿದ್ಧವಾಗುತ್ತದೆ.

**ಪ್ರಶ್ನೆ: ಶ್ರೀ ವಾದಿರಾಜರು ಗ್ರಂಥಗಳಲ್ಲಿ ಬರೀ ತಮ್ಮ ದೋಷ ಹೇಳಿಕೊಂಡದ್ದು ಮಾತ್ರವಲ್ಲ, ನಾನಾವಿಧ ದೇವತಾ ಪ್ರಾರ್ಥನೆಗಳನ್ನು ಮಾಡಿದ್ದಾರೆಂದು ಲೇಖಕರು ಬರೆದಿದ್ದಾರೆ. ಅದರಿಂದ ಅವರು ಋಜುಗಳಾಗಲು ಸಾಧ್ಯವಿಲ್ಲವೆಂದು ಬರೆದಿದ್ದಾರೆ (ಪುಟ ಸಂಖ್ಯೆ 19) ಅವೆರಡಕ್ಕೂ ಒಂದೇ ಪರಿಹಾರವೇ?**

ಉತ್ತರ: ನಿರ್ದೋಷವಾದ ಆಗಮದಿಂದ ಸ್ವರೂಪವನ್ನು ನಿರ್ಣಯಿಸಬೇಕೆಂಬುದು ಮಧ್ವ ಸಿದ್ಧಾಂತ. ಆಗಮದಿಂದ ಚೆನ್ನಾಗಿ ಸಿದ್ಧವಾದದ್ದನ್ನು, ಕ್ಷುದ್ರವಾದ ಅನುಮಾನಗಳಿಂದ ಬಾಧಿಸಬಾರದೆಂಬುದೂ ಮಧ್ವ ಸಿದ್ಧಾಂತ. ಆಗಮದಿಂದ ಶ್ರೀ ಕೃಷ್ಣನು ಸರ್ವೋತ್ತಮನೆಂದು ಸಿದ್ಧವಾಗುತ್ತದೆ. ಆದ್ದರಿಂದಲೇ, ಅವನು ಕೈಲಾಸ ಯಾತ್ರೆ ಮಾಡಿ ರುದ್ರದೇವರನ್ನು ಪುತ್ರ ಸಂತಾನ ಕೊಡೆಂದು ಪ್ರಾರ್ಥನೆ ಮಾಡಿದ್ದನ್ನು ಮೋಹಕವೆನ್ನುತ್ತೇವೆ. ಆದರಿಂದ ಶ್ರೀ ಕೃಷ್ಣನು ಸರ್ವೋತ್ತಮನಲ್ಲ, ರುದ್ರದೇವರಿಗಿಂತ ಕಡಿಮೆ ಆಗಲೀ, ಅನ್ನುವ ಯುಕ್ತಿಗೆ ಬೆಲೆ ಇಲ್ಲ. ಶ್ರೀ ರಾಮನು ಬ್ರಹ್ಮಹತ್ಯಾ ದೋಷ ಪರಿಹರಿಸೆಂದು ಮಾಡಿದ ರಾಮೇಶ್ವರನ ಪ್ರಾರ್ಥನೆಯೂ ಹೀಗೆಯೇ. ಶ್ರೀರಾಮನು ಕಣ್ಣಿಗೆ ಕಾಣುವಂತೆ, ಅಸ್ತ್ರ



ಮಂತ್ರಗಳಿಂದ ಅಗ್ನಿ ವರುಣಾದಿ ದೇವತೆಗಳನ್ನು ಆವಾಹಿಸಿ ಪ್ರಾರ್ಥಿಸುತ್ತಿರಲಿಲ್ಲವೇ? ಅದರಿಂದ ಅವರಿಗಿಂತ ಅವನು ಕಡಿಮೆಯೆಂಬ ಯುಕ್ತಿ ಚಾಲನೆ ಮಾಡಿದರೆ, ಆ ಅನುಮಾನವನ್ನು ನಾವು ತಿರಸ್ಕರಿಸುತ್ತೇವೆ. ಶ್ರೀ ಹನುಮಂತ ದೇವರು ಸೂರ್ಯನ ಅಧಿಷ್ಠಾನದಲ್ಲಿ ವಿದ್ಯೆಯನ್ನು ಪ್ರಾರ್ಥಿಸಲಿಲ್ಲವೇ? ಅವರು ಋಜುವೆಂದು ಆಗಮಸಿದ್ಧವಾಗಿದೆ. ಆ ಪ್ರಾರ್ಥನೆಯಿಂದ ಅವರು ಸೂರ್ಯನಿಗಿಂತ ಕಡಿಮೆಯಾಗಲೀ ಎನ್ನುವ ಅನುಮಾನ ಮಾಡಿದರೆ ಮಧ್ವ ಸಿದ್ಧಾಂತದಲ್ಲಿ ಅದಕ್ಕೆ ಕುರುಡು ಕಾಸಿನ ಬೆಲೆಯೂ ಇಲ್ಲ. ಸೇತುಮುಖದಲ್ಲಿ ಶ್ರೀರಾಮನು ಗಣಪತಿ, ನವಗ್ರಹರನ್ನು ನಿರ್ವಿಘ್ನತೆಗೆ ಪ್ರಾರ್ಥಿಸಿದ್ದಾನೆ. ಶ್ರೀರಾಮನು ಅವರಿಗಿಂತ ಸ್ವರೂಪತಃ ಕಡಿಮೆಯವನು, ಅನ್ನುವ ಯುಕ್ತಿಯು ಕುಯುಕ್ತಿಯು. ಹೀಗೆ ಅನಂತ ದೃಷ್ಟಾಂತಗಳಿವೆ. ಸ್ವರೂಪವನ್ನು ಆಗಮ ವಾಕ್ಯಗಳಿಂದ ಸಿದ್ಧಿಸಬೇಕು, ಕ್ಷುದ್ರ ಅನುಮಾನಗಳಿಂದ ಅಲ್ಲವೆನ್ನುವುದು ಶ್ರೀಮಧ್ವಾಚಾರ್ಯರ ಸಿದ್ಧಾಂತ. ಲೇಖಕರು ಅದನ್ನು ಉಲ್ಲಂಘಿಸಿ ಬರೆದಿದ್ದಾರೆ. ಅಂತಹ ಸಂದರ್ಭಗಳಲ್ಲಿ ಶ್ರೀ ವಾದಿರಾಜರ ವ್ಯಾಪ್ತೋಪಾಸನೆಯೇ ಪರಮಾರ್ಥವೆಂದು ತಿಳಿಯಬೇಕು.

**ಪ್ರಶ್ನೆ: ಲೇಖಕರು ಶ್ರೀ ವಾದಿರಾಜರಿಗೆ ಧರ್ಮತತ್ವಗಳಲ್ಲಿ ಸಂಶಯವಿದೆ ಅಂತ ಬರೆದಿದ್ದಾರೆ. (ಪುಟ 19) ಹಾಗೆ ಅವರಿಗೆ ಸಂಶಯವಿದೆಯೇ?**

ಉತ್ತರ: ಇಲ್ಲ. ಶ್ರೀ ವಾದಿರಾಜರು ತಾವು ಸಂಶಯ ರಹಿತರೆಂದೇ ತಮ್ಮನ್ನು ಹೇಳಿಕೊಂಡಿದ್ದಾರೆ. ಲೇಖಕರು ಶ್ರೀ ವಾದಿರಾಜರಿಗೆ ಸಂಶಯವಿದೆಯೆಂದು ಸಮರ್ಥಿಸಲು, ಶ್ರೀ ವಾದಿರಾಜರ ''ವೇದಾಹಂ ತು ಕಥಂಚನ'' ಇತ್ಯಾದಿ ಐದು ವಾಕ್ಯಗಳನ್ನು ಉದಾಹರಿಸಿದ್ದಾರೆ. ಆ ವಾಕ್ಯಗಳಿಂದ ಶ್ರೀ ವಾದಿರಾಜರಿಗೆ ತತ್ವದಲ್ಲಿ ಸಂಶಯವಿದೆಯೆಂದು ಸಿದ್ಧವಾಗುವುದೇ ಇಲ್ಲ. ಆ ವಾಕ್ಯಗಳ ತಾತ್ಪರ್ಯ ಹಿಂದೆಯೇ ನಿರೂಪಿಸಿದ್ದೇವೆ. ಪೆದ್ದನೊಬ್ಬನಿಗೆ ವಾದಿರಾಜರು ಮಂತ್ರಾಕ್ಷತೆ ಕೊಡಲು, ಅವನು ಸಭೆಯಲ್ಲಿ ಪ್ರತಿವಾದಿಗಳನ್ನು ಗೆದ್ದು, ಬೇರೆಯವರ ಸಂಶಯ ಪರಿಹರಿಸಿ, ವಿಜೃಂಭಿಸಿದನು. ಹಾಗೇ, ಅವರ ಮಹಿಮೆ ಶ್ರುತವಾಗಿದೆ. ಸಾಮಾನ್ಯ ಅಪರೋಕ್ಷಜ್ಞಾನಿಗಳಿಗೇ ಸಂಶಯಗಳಿರುವುದಿಲ್ಲ. ಹೊರಟು ಹೋಗಿರುತ್ತವೆ. ಅವರೆಲ್ಲಾ ಶ್ರೀ ವಾದಿರಾಜರು ತಮಗಿಂತ ದೊಡ್ಡವರೆಂದೆನ್ನುತ್ತಾರೆ. ಹೀಗಿರುವಾಗ, ಶ್ರೀ ವಾದಿರಾಜರಿಗೇ ಸಂಶಯವಿದೆ, ಅವರ ಜ್ಞಾನ ಸರಿಯಾಗಿಲ್ಲ ಅಂತ ಹೇಳಬಾರದು. ಅದು ಅವರಿಗೆ ಮಾಡುವ ದೊಡ್ಡ ದ್ರೋಹ. ಇನ್ನು ಹೀಗೆ ಹೇಳುವಾಗ, ಆ ಪುಸ್ತಕದ ಲೇಖಕರಿಗೇ ಎಷ್ಟು ಸಂಶಯವಿರಬಹುದು?

**ಪ್ರಶ್ನೆ: ಲೇಖಕರು ಎಲ್ಲೂ ಶ್ರೀ ವಾದಿರಾಜರನ್ನು ಅಪರೋಕ್ಷ ಜ್ಞಾನಿಗಳೆಂದು ಒಪ್ಪಿಲ್ಲ ಹಾಗೆ ಉಲ್ಲೇಖಿಸಿಲ್ಲ. ಅದರಿಂದ ವಾದಿರಾಜರು ಅಪರೋಕ್ಷ ಜ್ಞಾನಿಗಳಲ್ಲ; ಆದ್ದರಿಂದ ಸಂಶಯವಿದೆ ಅನ್ನಬಹುದೇ?**

ಉತ್ತರ: ನೂರು ರೂಪಾಯಿ ಇರುವ ಕಡೆ ನೂರು ಇದೆ, ಐದು ರೂಪಾಯಿ ಇಲ್ಲ ಅಂತ ತರ್ಕ ಮಾಡಿದರೆ ಏನು ಹೇಳಬೇಕು? ನಿತ್ಯ ಶ್ರೀ ಹಯಗ್ರೀವ ದೇವರ ಆಲಿಂಗನ, ಅವರಿಂದ ಉಪದೇಶ, ಶ್ರೀ ವೇದವ್ಯಾಸದೇವರ ಪ್ರತ್ಯಕ್ಷ ಇತ್ಯಾದಿ ಮಹಿಮೆ ವಾದಿರಾಜರಿಗಿದೆ. ಸತ್ಯಲೋಕದ ಸಾಮಾನ್ಯ ನೌಕರಚಾಕರರೇ ಅಪರೋಕ್ಷ ಜ್ಞಾನಿಗಳು. ಶ್ರೀ ವಾದಿರಾಜರ ವಿಷಯ ಹೇಳಬೇಕೇನು?

**ಪ್ರಶ್ನೆ : ''ಅಸ್ಮದೀಯ ಮನೋದೋಷಾತ್'' ಅಂತ ಶ್ರೀ ವಾದಿರಾಜರ ವಾಕ್ಯ ಇದೆಯಲ್ಲಾ ಅದರ ತಾತ್ಪರ್ಯದಿಂದ ಲೇಖಕರು ಹೇಳುವಂತೆ ಶ್ರೀ ವಾದಿರಾಜರಿಗೆ ಸಂಶಯಾದಿಗಳು ಇದೆಯೆಂದು ಸಿದ್ಧಿಸುತ್ತದೆಯೇ? ಅವರು ಮಂದಬುದ್ಧಿ ಎಂದು ಹೇಳಿಕೊಡದ್ದರಿಂದ ಅವರಿಗೆ ಬುದ್ಧಿ ಕಡಿಮೆಯೆ?**

ಉತ್ತರ : ಇಲ್ಲ. ಒಂದೆರಡು ವಾಕ್ಯಗಳಲ್ಲಿ ಹಾಗೆ ಹೇಳಿಕೊಂಡರೆ, ವಿನಯ ಪ್ರದರ್ಶನವೆಂದು ಒಪ್ಪಬಹುದೆಂದು ಲೇಖಕರೇ ಮುಂದೆ ಒಪ್ಪಿಕೊಂಡಿದ್ದಾರೆ (ಪುಟ 20). ''ಅಸ್ಮದೀಯ'' ಅನ್ನುವ ಪದದಿಂದಲೇ (ಮದೀಯ ಅಂತ ಹೇಳಲಿಲ್ಲ) ಅದು ಪರರ ವಿಷಯವು ಎಂದು ತಿಳಿಯಬೇಕು. ಮಂದಬುದ್ಧಿ ಅನ್ನುವಲ್ಲಿಯೇ ಹಿಂದೆ 'ರಿಧುಧಿದ್ಧಿಲ್ಲಥಿಧ'ಅನ್ನುವ ಪದವಿದೆ. ಆ ಪದಕ್ಕೆ 'ನಾನು' ಅನ್ನುವ ಅರ್ಥ ಸಿಗುವುದಿಲ್ಲ. ಅದರಿಂದ 'ನನಗೆ ಮಂದಬುದ್ಧಿ 'ಅಂತ ಅರ್ಥವನ್ನು ಆ ವಾಕ್ಯಕ್ಕೆ ಹೇಳಲಾಗದು.

**ಪ್ರಶ್ನೆ: ಎಲ್ಲಾ ಉದ್ದಾಮ ಗ್ರಂಥಗಳಲ್ಲೂ ಹೇಳಿಕೊಂಡಿದ್ದರಿಂದ, ಅದನ್ನು ವಿನಯ ಪ್ರದರ್ಶನವೆಂದು ಒಪ್ಪಲಾಗದೆಂದು ಲೇಖಕರೇ ಮುಂದೆ ಹೇಳಿದ್ದಾರಲ್ಲಾ?**

ಉತ್ತರ: ಎರಡು ಕಡೆ ಹೇಳಿದರೆ ಹೇಗೆ ಒಪ್ಪಬಹುದು, ಹತ್ತು ಕಡೆ ಹೇಳಿದರೆ ಯಾಕೆ ಒಪ್ಪಲಾಗದು, ಎನ್ನುವುದಕ್ಕೆ ಲೇಖಕರು ಕಾರಣವನ್ನು ಕೊಟ್ಟಿಲ್ಲ. ಎರಡು ಕಡೆ ಇರಲಿ, ಹನ್ನೆರಡು ಕಡೆ ಇರಲೀ, ವಿನಯ ಪ್ರದರ್ಶನವೇ ಎಂದು ಒಪ್ಪಲು ಅಡ್ಡಿ ಏನೇನೂ ಇಲ್ಲ. ಹಾಗೆ ನೋಡಿದರೆ, ಒಂದೆರಡು ಕಡೆ ಮಾತ್ರ ಹೇಳದೇ, ಎಲ್ಲಾ ಕಡೆ ಹೇಳಿಕೊಂಡಿದ್ದರಿಂದಲೇ, ಶ್ರೀ ವಾದಿರಾಜರು ನಿಜವಾಗಿ ವಿನಯ ಪ್ರದರ್ಶನವನ್ನು ಮಾಡಿದ್ದಾರೆ ಅಂತ ಹೇಳಬೇಕು. ಅಷ್ಟು ಮಾತ್ರವಲ್ಲ, ಶ್ರೀ ವಾದಿರಾಜರ ಭಾವವೇನೆಂದರೆ, ಸಾಮಾನ್ಯಭಕ್ತರು ಹಾಗೆ ಉತ್ತಮರಲ್ಲಿ ನಮ್ರಭಾವ ತೋರಿಸಬೇಕೆಂಬ ಲೋಕ ಶಿಕ್ಷಣವಿದೆ. ಇಷ್ಟರ ಮೇಲೆ, ಅಲ್ಲೆಲ್ಲಾ ಶ್ರೀ ವಾದಿರಾಜರು ತಮ್ಮ ಸ್ವರೂಪ ಮುಚ್ಚಿಕೊಳ್ಳುವ ಚಾತುರ್ಯವೂ ಇದೆ.

**ಪ್ರಶ್ನೆ: ಬೇರೆ ದೇವತೆಗಳಿಗೆ ಭೂಮಿಯಲ್ಲಿ ಸ್ವರೂಪ ಮುಚ್ಚಿಕೊಳ್ಳಬೇಕೆಂಬ ನಿಯಮವಿದ್ದರೂ, ಋಜುಗಳಿಗೆ ಅದಿಲ್ಲವೆಂದು ಲೇಖಕರು ಬರೆದಿದ್ದಾರಲ್ಲಾ?**

ಉತ್ತರ: ಲೇಖಕರು ಹಾಗೆ ಬರೆದದ್ದು ಶ್ರೀಮದಾಚಾರ್ಯರ ನಿರ್ಣಯ ವಾಕ್ಯಕ್ಕೇ ವಿರುದ್ಧ. ಶ್ರೀಮದಾಚಾರ್ಯರು, ಎಲ್ಲಾ ಋಜುಗಳು ತಮ್ಮ ಸ್ವರೂಪವನ್ನು ಹೇಳಿಕೊಳ್ಳಬೇಕು ಎಂದು ಪ್ರತಿಪಾದಿಸಲಿಲ್ಲ. ಮುಚ್ಚಿಕೊಳ್ಳಬೇಕಾದ್ದು ನಿಯಮ. ಶ್ರೀ ಹನುಮಂತ ದೇವರೂ, ಶ್ರೀ ಭೀಮಸೇನ ದೇವರೂ ಎಲ್ಲೂ ತಮ್ಮ ಸ್ವರೂಪವನ್ನುಹೇಳಿಕೊಳ್ಳಲಿಲ್ಲ. ಅದರಿಂದ ಅವರು ಋಜುಗಳಲ್ಲ ಅಂತ ಹೇಳಬಾರದು. ಶ್ರೀಮದಾಚಾರ್ಯರೂ ಹಾಗೇ ತೋರಿಸಿದ್ದಾರೆ. ಸ್ವರೂಪ ಹೇಳಿಕೊಳ್ಳಬಾರದೆನ್ನುವ ನಿಯಮ ಪರಿಪಾಲಿಸಿದ್ದಾರೆ. ಶ್ರೀವಾಯುದೇವರಂತೇ ಅವರ ನಂತರದ, 98 ಋಜುದೇವತೆಗಳು ಭಾರತಭೂಮಿಯಲ್ಲಿ ಅವತಾರ ಮಾಡುವರೆಂದು ಪ್ರಮಾಣವಿದೆ. ಅವತರಿಸಿದಾಗ, ಅವರಲ್ಲಿ ಯಾರೊಬ್ಬರಾದರೂ, ತಮ್ಮ ಸ್ವರೂಪ ಹೇಳಿಕೊಂಡು ತಿರುಗಾಡುತ್ತಿದ್ದರೇ? ಇಲ್ಲವೆಂದು ತಿಳಿಯಿರಿ.



**ಪ್ರಶ್ನೆ: ಶ್ರೀಮದಾಚಾರ್ಯರು ತಮ್ಮ ಸ್ವರೂಪ ಹೇಳಿ ಕೊಂಡಿದ್ದಾರಲ್ಲಾ ?**

ಉತ್ತರ: ಶ್ರೀಮದಾಚಾರ್ಯರು ಹೇಳಿಕೊಂಡಿದ್ದು ತಾವು ಮಾಡಿದ ನಿಯಮಕ್ಕೇ ಅಪವಾದ ರೂಪವು. ಅದೂ ಅವರು ಸುಮಾರು ತಮ್ಮ ಮಧ್ಯ ವಯಸ್ಸಿನಲ್ಲಿ ಹೇಳಿಕೊಂಡಿದ್ದು. ಅಲ್ಲೀವರೆಗೆ ಪ್ರಯತ್ನದಿಂದ ಸ್ವರೂಪ ಮುಚ್ಚಿಕೊಳ್ಳುತ್ತಿದ್ದರು. ''ಭುವನ ಭರ್ತುರಹೋ ಸ್ವನಿಗೂಹನಂ ಸುರಸಭಾಸು ಕುತೂಹಲಂ ಆತನೋತ್'' ಅಂತ ಶ್ರೀಮಧ್ವವಿಜಯದಲ್ಲಿದೆ. ಪ್ರಯತ್ನದಿಂದ ಸ್ವರೂಪಗೂಹನವನ್ನು ಶ್ರೀಮದಾಚಾರ್ಯರು ಮಾಡಿಕೊಳ್ಳುತ್ತಿದ್ದರೆಂದು ಆ ವಾಕ್ಯದ ಅರ್ಥ. ಅಲ್ಲೇ ತಮ್ಮ ಸ್ವರೂಪವನ್ನು ಶ್ರೀಮದಾಚಾರ್ಯರು ಹೇಳಿಕೊಂಡಿದ್ದರೂ, ಎಲ್ಲಾ ಗ್ರಂಥಗಳಲ್ಲಿ ಹೇಳಿಕೊಳ್ಳಲಿಲ್ಲ. ತಮ್ಮ ಮೊದಲ ಗ್ರಂಥ ಗೀತಾಭಾಷ್ಯದಲ್ಲಿ ಹೇಳಿಕೊಳ್ಳಲಿಲ್ಲ. ಹೇಳಿಕೊಂಡ ನಾಲ್ಕು ಪ್ರಧಾನ ಗ್ರಂಥಗಳನ್ನು ಲೋಕದ ಜನರೆಲ್ಲಾ ಅಭ್ಯಾಸ ಮಾಡುವುದಿಲ್ಲ. ಆದ್ದರಿಂದಲೇ ಸಮಗ್ರ ಭರತಖಂಡಕ್ಕೆ ಶ್ರೀಮಧ್ವಾಚಾರ್ಯರು, ಶ್ರೀ ವಾಯುದೇವರ ಅವತಾರವೆಂದು ತಕ್ಷಣ ಗೊತ್ತಾಗಲಿಲ್ಲ. ಸಮೀಪದವರು ಮೊದಲು ತಿಳಿದರು, ಆ ಮೇಲೆ ಬೇರೆಯವರು. ಶ್ರೀಮಧ್ವಾಚಾರ್ಯರು, ತಮ್ಮ ಸ್ವರೂಪ ಹೇಳಿಕೊಳ್ಳುವ ಭಾಗವನ್ನು, ಮೊದಲು ಗ್ರಂಥಸ್ಥ ಮಾಡಿರಲಿಲ್ಲ, ಆಮೇಲೆ ಮಾಡಿದ್ದೆಂದು ಉಡುಪಿ ಕಡೆ ಬಲವಾದ ನಂಬಿಕೆ ಇದೆ. ಹಾಗೇ ಶ್ರೀಮದಾಚಾರ್ಯರು, ಮೊದಲು ನಿಯಮ ಪರಿಪಾಲಿಸಿ ತೋರಿಸಿದರೂ ಆಮೇಲೆ ಮೀರಿದರು. ಅಲ್ಲಿ ಋಜುಗಳಿಗೆ ನಿಯಮವಿಲ್ಲ ಎಂದು ಹೇಳದೇ, ಭಗವದಾಜ್ಞೆಯೆಂದೇ ತಿಳಿಯಬೇಕು.

**ಪ್ರಶ್ನೆ : ಅವರು ತಾವು ತೋರಿದ ನಿಯಮವನ್ನು ಮೀರಿದ್ದು, ಭಗವದಾಜ್ಞೆಯೆಂದು ಯಾಕೆ ಹೇಳಬೇಕು?**

ಉತ್ತರ: ಋಜುಗಳಿಗೆ ಸಾಕ್ಷಾತ್ತಾಗಿ ಭಗವತ್‌ಪ್ರೇರಣೆ ಎಂಬ ಸೌಭಾಗ್ಯಾತಿಶಯವಿದೆ. ಶ್ರೀಮಧ್ವಾಚಾರ್ಯರು ನಿಯಮ ಮೀರಬೇಕಾದರೆ, ಭಗವದಾಜ್ಞೆಯಾಗಿದೆ ಎಂದೇ ಹೇಳಬೇಕು.

**ಪ್ರಶ್ನೆ : ಶ್ರೀ ವಾದಿರಾಜರಿಗೂ ಆ ನಿಯಮ ಮೀರುವ ಆಜ್ಞೆ ಮಾಡಬೇಕಿತ್ತು ಅಂದರೆ?**

ಉತ್ತರ: ಶ್ರೀಮದಾಚಾರ್ಯರದೇ ಅಪವಾದರೂಪವು. ಆ ರೀತಿ ಆಜ್ಞೆಗೆ ಆಗ ವಿಶೇಷ ಕಾರಣವಿತ್ತೆಂದು ತಿಳಿಯಿರಿ.

**ಪ್ರಶ್ನೆ: ಶ್ರೀ ಭೀಮಸೇನ ದೇವರು ಅನ್ಯದೇವತೆಗಳಿಗೆ ನಮಸ್ಕಾರ ಮಾಡುತ್ತಲೇ ಇರಲಿಲ್ಲಾ (ಪುಟ 15), ಬೇರೆ ದೇವತೆಗಳಿಗೆ ನಮಸ್ಕಾರ ಮಾಡದಿರುವುದು ಋಜು ನಿಯಮ. ಶ್ರೀ ವಾದಿರಾಜರು ಮಾಡಿದ್ದರಿಂದ ಋಜುಗಳಲ್ಲ ಅಂತ ಲೇಖಕರು ಬರೆದಿದ್ದಾರಲ್ಲಾ?**

ಉತ್ತರ: ಬೇರೆ ದೇವತೆಗಳಿಗೆ ಋಜುಗಳು ನಮಸ್ಕಾರ ಮಾಡಬಾರದು ಅನ್ನುವುದು ಋಜು ನಿಯಮ ಅಂತ ಶ್ರೀಮದಾಚಾರ್ಯರು ಎಲ್ಲೂ ಹೇಳಲಿಲ್ಲ. ಅದು ಲೇಖಕರ ಕಲ್ಪನೆ ಅಷ್ಟೆ. ಹಾಗೆ ಹೇಳಿದರೆ, ಶ್ರೀಮದಾಚಾರ್ಯರೇ ಋಜುಗಳಲ್ಲವೆಂದು ಹೇಳಬೇಕಾಗುತ್ತದೆ. ಯಾಕೆಂದರೆ, ಅವರು ಅನ್ಯ ದೇವತೆಗಳಿಗೆ ನಮಸ್ಕಾರ ಮಾಡುತ್ತಿದ್ದರೆಂದು ಲೇಖಕರೇ ಒಪ್ಪಿದ್ದಾರೆ (ಪುಟ 16). ಅದರಿಂದ ಲೇಖಕರಿಗೇ ಸ್ವ ವಾಕ್ಯ ವಿರೋಧ ಬರುತ್ತದೆ. ಶ್ರೀ ಹನುಮಂತ ದೇವರು ತಾತ್ವಿಕ ದೇವತೆಗಳಿಗೆ ನಮಸ್ಕಾರ ಮಾಡುತ್ತಿದ್ದರೆಂದು ಶ್ರುತವಾಗಿದೆ.

**ಪ್ರಶ್ನೆ: ದೇವತೆಗಳು ಪ್ರತ್ಯಕ್ಷ ಇಲ್ಲದಿರುವಾಗ ಮಾತ್ರ ಅವರಿಗೆ ನಮಸ್ಕಾರ ಮಾಡುವುದು ಋಜು ನಿಯಮಕ್ಕೆ ವಿರೋಧಿಯೆಂದು ಲೇಖಕರು ಬರೆದಿದ್ದಾರಲ್ಲಾ? ಶ್ರೀ ಮಧ್ವಾಚಾರ್ಯರಿಗೆ ದೇವತೆಗಳು ಪ್ರತ್ಯಕ್ಷವಿದ್ದರೂ, ಶ್ರೀ ವಾದಿರಾಜರಿಗಿಲ್ಲ ಅಂತ ಬರೆದಿದ್ದಾರಲ್ಲಾ ?**

ಉತ್ತರ: ಶ್ರೀ ವಾದಿರಾಜರು ದೇವತೆಗಳಿಗೆ ನಮಿಸಿದ್ದಾರೆ ಅನ್ನುವುದು ನಿಜ. ಆದರೆ ಆಗ ಅವರಿಗೆ ದೇವತೆಗಳು ಪ್ರತ್ಯಕ್ಷ ಇರಲಿಲ್ಲ ಅಂತ ಹೇಳುವುದಕ್ಕೆ ಲೇಖಕರು ಏನೂ ಆಧಾರಕೊಟ್ಟಿಲ್ಲ. ಪ್ರತ್ಯಕ್ಷವಿದ್ದರೆ ನಮನ ದೋಷವಿಲ್ಲ ಅಂತ ಲೇಖಕರೇ ಹೇಳಿದ್ದಾರೆ. ದೇವತೆಗಳು, ಅಕ್ಷರಾಭಿಮಾನಿಗಳು, ಪ್ರತ್ಯಯಾಭಿಮಾನಿ ದೇವತೆಗಳು ಸದಾ ನಮ್ಮನ್ನು ಮೂರ್ತಿಮತ್ತಾಗಿ ಆಶ್ರಯಿಸಿ ಸೇವೆ ಮಾಡಿಕೊಂಡಿರುತ್ತಾರೆ ಎಂದು ಶ್ರೀ ವಾದಿರಾಜರೇ ಹೇಳಿಕೊಂಡಿದ್ದಾರೆ. ಆದರೂ ದೇವತಾ ನಮನವು ಋಜುತ್ವ ವಿರೋಧಿ ಎಂದು ಹೇಳಿದ್ದು ಏನೇನೂ ಸರಿಯಲ್ಲ. ಅದು ಅಜ್ಞಾನ ಮೂಲಕ.

**ಪ್ರಶ್ನೆ : ಶ್ರೀ ವಾದಿರಾಜರಿಗೆ ದೇವತೆಗಳು ಪ್ರತ್ಯಕ್ಷ ಇರಲೀ, ಇಲ್ಲದಿರಲೀ, ಅದು ಮುಖ್ಯವಲ್ಲ. ದೇವತೆಗಳು ಜನರಿಗೆ ಪ್ರತ್ಯಕ್ಷ ಕಂಡಾಗ ಮಾತ್ರ, ಋಜುಗಳು ಆ ದೇವತೆಗಳಿಗೆ ನಮಸ್ಕರಿಸಬೇಕು. ಮಿಕ್ಕ ಕಾಲದಲ್ಲಿ ನಮಸ್ಕರಿಸಬಾರದು; ಅದೇ ಋಜುಗಳ ನಿಯಮ ಅಂತ ಲೇಖಕರು ಮುಂದೆ ಬರೆದಿದ್ದಾರಲ್ಲಾ?**

ಉತ್ತರ: ಈ ರೀತಿ ಋಜುಗಳ ನಿಯಮ ಅಂತ ಎಲ್ಲಿ ಹೇಳಿದೆ? ನಿರಾಧಾರ ಕಲ್ಪನೆ ಮಾಡಿದ್ದಾರೆ. ಋಜುಗಳು ಸ್ವರೂಪದಿಂದ ಉತ್ತಮರಾದವರು. ಅಧಮ ದೇವತೆಗಳು, ಅವರ ದಿವ್ಯ ದೃಷ್ಟಿಗೆ ಯಾವಾಗಲೂ ಗೋಚರರೇ ಎಂದು ಲೇಖಕರೇ ಒಪ್ಪಿದ್ದಾರೆ. ಜನಗಳಿಗೆ ದೇವತೆಗಳು ಪ್ರತ್ಯಕ್ಷರಾದಾಗ, ಋಜುಗಳು ಅವರಿಗೆ ನಮಸ್ಕರಿಸಿದರೆ, ಋಜುತ್ವಕ್ಕೆ ಏನೂ ಹಾನಿಯಾಗುವುದಿಲ್ಲ ಅಂತ ಲೇಖಕರೇ ಒಪ್ಪಿದ್ದಾರೆ. ಆದ್ದರಿಂದ ಅಧಮ ದೇವತೆಗಳಿಗೆ ಋಜುಗಳು ಮಾಡುವ ನಮಸ್ಕಾರದಿಂದ ಋಜುತ್ವಕ್ಕೆ ಹಾನಿಯಿಲ್ಲ ಎಂಬುದು ಸಿದ್ಧವಾಗಿ ಒಳ್ಳೆಯದೇ ಆಯಿತು. ಶ್ರೀ ವಾದಿರಾಜರು ಋಜು ಎಂದು ಆಗಮದಿಂದ ಚೆನ್ನಾಗಿ ಸಿದ್ಧವಾಗುತ್ತಾದ್ದರಿಂದ, ಅವರ ಅನ್ಯದೇವತಾ ನಮಸ್ಕಾರದಿಂದ ಅವರ ಋಜುತ್ವಕ್ಕೆ ಏನೂ ಹಾನಿ ಇಲ್ಲವೆಂದು ಲೇಖಕರೇ ಒಪ್ಪಿದಂತಾಯಿತು. ಅಂತಹ ಸಂದರ್ಭಗಳಲ್ಲಿ, ವಾದಿರಾಜರು ಮಾಡುವ ಅಂತರ್ಯಾಮಿ ಚಿಂತನೆಯೆಂಬ ವ್ಯಾಪ್ತ್ಯೋಪಾಸನೆಯೇ ಪರಮಾರ್ಥವೆಂದು ತಿಳಿಯಬೇಕು.

**ಪ್ರಶ್ನೆ: ಗ್ರಂಥಗಳಲ್ಲಿ ದೇವತೆಗಳಿಗೆ ನಮಸ್ಕಾರ ವಾದಿರಾಜರು ಮಾಡಿದ್ದಾರೆ. ಶ್ರೀ ಮಧ್ವಾಚಾರ್ಯರು ಮಾಡಿಲ್ಲ ಆದ್ದರಿಂದ ಋಜು ನಿಯಮ ವಿರುದ್ಧ ಅಂತ ಲೇಖಕರು ಹೇಳಿದ್ದಾರಲ್ಲಾ ?**

ಉತ್ತರ: ಅದು ತಪ್ಪು, ಶ್ರೀಮದಾಚಾರ್ಯರ ಗ್ರಂಥ ರಚನೆ ಎನ್ನುವ ನಡವಳಿಕೆ ಏನಿದೆಯೋ, ಅವರ ನುಡಿ ಏನಿದೆಯೋ, ಕರಚರಣಾದಿ ಅವಯವಗಳ ಚೇಷ್ಟೆಯಿಂದ ತೋರುವ ನಡವಳಿಕೆ ಏನಿದೆಯೋ ಅವೆಲ್ಲಾ ಒಂದೇ ಮಹತ್ತ್ವವುಳ್ಳವು. ಅವೆಲ್ಲಾ ಸಮವೆಂದು ತಿಳಿಯಿರಿ. ಶ್ರೀಮದಾಚಾರ್ಯರು, ನಡೆ ನುಡಿ ಚಿಂತನೆ ಎಂಬ ತ್ರಿಕರಣಗಳಲ್ಲಿ ಒಂದೇ ರೀತಿ ಇರುವವರು. ದೇಹದಿಂದ ದೇವತೆಗಳಿಗೆ ನಮಸ್ಕರಿಸಬಹುದು, ಗ್ರಂಥದಲ್ಲಿ ನಮನ ಮಾಡಬಾರದು ಅಂತ ಲೇಖಕರು ಹೇಳುವುದು ನಿರಾಧಾರ.



ಶ್ರೀಮಧ್ವಾಚಾರ್ಯರು ಅನ್ಯ ದೇವತೆಗಳಿಗೆ ನಮಸ್ಕಾರ ಮಾಡಿದ್ದಾರೆಂದು (ಪುಟ16ರಲ್ಲಿ) ಲೇಖಕರೇ ಒಪ್ಪಿದ್ದಾರೆ. ಶ್ರೀಮದಾಚಾರ್ಯರ ಬಾಹ್ಯಚರ್ಯೆ ಎಷ್ಟು ಜ್ಞಾನಿ ಸಮ್ಮತವೋ, ಎಷ್ಟು ಶಾಸ್ತ್ರ ಸಮ್ಮತವೋ, ಎಷ್ಟು ಭಗವತ್ ಪ್ರೀತಿಕಾರಕವೋ, ಅವರ ಗ್ರಂಥ ರಚನೆಯೂ ಅಷ್ಟೇ. ಅವರ ವಾಕ್ಯಗಳೂ ಅಷ್ಟೇ. ಅವುಗಳಲ್ಲಿ ಪರಸ್ಪರ ಭೇದ ಕಲ್ಪಿಸುವುದು ದೊಡ್ಡ ತಪ್ಪು. ಶ್ರೀವಾದಿರಾಜರ ವಿಷಯವೂ ಹಾಗೆಯೇ, ಶ್ರೀಮದಾಚಾರ್ಯರ ಬಾಹ್ಯ ಚರ್ಯೆಯಲ್ಲಿ ಕಾಣುವ ಅನ್ಯದೇವತಾ ನಮಸ್ಕಾರವೇ ಅವರ ಋಜುತ್ವಕ್ಕೆ ವಿರುದ್ಧವಲ್ಲ ಅಂತ ಒಪ್ಪಿದ ಮೇಲೆ, ಗ್ರಂಥದಲ್ಲಿ ಅವರು ದೇವತಾ ನಮನ ಮಾಡಿದ್ದರೆ, ಏನು ಹಾನಿ ಅವರಿಗೆ? ಶ್ರೀ ವಾದಿರಾಜರ ವಿಷಯದಲ್ಲೂ ಹಾಗೆಯೇ. ಆದ್ದರಿಂದ ಲೇಖಕರು ಹೇಳಿದ ದೇವತಾ ನಮನವು ಋಜುತ್ವ ವಿರೋಧಿ ಎನ್ನುವುದು ನಿರಾಧಾರ ಯುಕ್ತಿ, ಅದಕ್ಕೆ ಆಗಮ ವಾಕ್ಯ ಸಹಾಯವೂ ಇಲ್ಲ. ಆದ್ದರಿಂದ ಅದರಲ್ಲಿ ವಿಶ್ವಾಸ ಮಾಡಬಾರದು. ಶ್ರೀ ವೇದವ್ಯಾಸ ದೇವರೇ, ಮಹಾಭಾರತದಲ್ಲಿ "..ನರಂ ಚೈವ ನರೋತ್ತಮಂ।.... ದೇವೀಂ ಸರಸ್ವತೀಂ" ಇತ್ಯಾದಿ ನಿಯಮ ತೋರಿಸಿದ್ದಾರೆ.

**ಪ್ರಶ್ನೆ: ಗ್ರಂಥಗಳಲ್ಲಿ ಶ್ರೀ ವಾದಿರಾಜರು ಬರೀ ನಮಸ್ಕಾರ ಮಾಡಿರುವುದು ಮಾತ್ರವಲ್ಲ, ನೀಚ ವಾಕ್ಯವನ್ನಾಡಿ, ಪ್ರತ್ಯಕ್ಷವಾಗದಿರುವ ದೇವತೆಗಳನ್ನು ಯಾಚಿಸಿದ್ದಾರೆ ಆದರಿಂದ ಅವರು ಋಜುಗಳಲ್ಲಾ ಅಂತ ಲೇಖಕರು ಹೇಳಿದ್ದಾರಲ್ಲಾ (ಪುಟ21) ಅದು ಸರಿಯೇ?**

ಉತ್ತರ: ಏನೇನೂ ಸರಿಯಲ್ಲ. ದೇವತೆಗಳು ಪ್ರತ್ಯಕ್ಷವಿದ್ದಾಗಲೀ ಇಲ್ಲದಿದ್ದಾಗಲೀ, ಉತ್ತಮ ದೇವತೆಗಳು, ಕೀಳು ದೇವತೆಗಳನ್ನು ಯಾಚನೆ ಮಾಡಿ ನೀಚವಾಕ್ಯ ಆಡಿದಾಗ, ಅವರ ಉತ್ತಮತ್ವಕ್ಕೆ, ತೇಜಸ್ಸಿಗೆ ಏನೂ ಹಾನಿಯಿಲ್ಲವೆಂದೂ, ಆ ನಡವಳಿಕೆ ದೋಷವಲ್ಲವೆಂದೂ ಲೇಖಕರೇ ಒಪ್ಪಿಕೊಂಡಿದ್ದಾರೆ. ಆದರೆ ಶ್ರೀ ವಾದಿರಾಜರಿಗೆ ದೇವತೆಗಳು ಪ್ರತ್ಯಕ್ಷವಿರಲಿಲ್ಲ ಅಂತ ಹೇಳುವಾಗ ಏನೂ ಆಧಾರ ಕೊಡಲಿಲ್ಲ. ಸುಮ್ಮನೆ ಹೇಳಿಬಿಟ್ಟರು. ರುದ್ರಾದಿ ದೇವತೆಗಳು ಮತ್ತು ಅಕ್ಷರಾಭಿಮಾನಿ ದೇವತೆಗಳು, ತಮ್ಮನ್ನು ಆಶ್ರಯಿಸಿ ಓಲೈಸಿಕೊಂಡಿರುತ್ತಾರೆ ಅಂತ ಶ್ರೀ ವಾದಿರಾಜರು ಹೇಳಿಕೊಂಡಿದ್ದಾರೆ. ಅವರ ದೇವತಾ ಪ್ರಾರ್ಥನೆ ವಾಕ್ಯಗಳು ಏನಿವೆ, ಅವು ಸ್ಥೂಲಾರ್ಥದಲ್ಲಿ, ಕಣ್ಣಿಗೆ ಕಾಣುವ ಹಾಗೆ, ಅನ್ಯ ದೇವತಾ ಪ್ರಾರ್ಥನ ರೂಪಗಳು, ಅಷ್ಟೇ. ಅವುಗಳ ಸೂಕ್ಷ್ಮಾರ್ಥ ಪ್ರಕಾಶ, ನಾವೇ ಮಾಡಿದ್ದೇವೆ. ಅಲ್ಲಲ್ಲಿ ಆ ವಾಕ್ಯಗಳಿಗೆ, ರಹಸ್ಯವಾದ ದಿವ್ಯಾರ್ಥಗಳು ಇವೆ. ಅವರ ವ್ಯಾಪ್ತ್ಯೋಪಾಸನೆಯೂ ಇದೆಯೆಂದು ತಿಳಿಯಿರಿ. ಆದ್ದರಿಂದ ಅಧಮದೇವತಾ ಯಾಚನೆಯನ್ನು ವಾದಿರಾಜರು ಮಾಡಿದರು ಅನ್ನುವುದೇ ನಿರಾಧಾರ, ಅವಿಚಾರಿತವಾದ ಆಪಾದನೆ. ಅದನ್ನು ನಂಬಿ ಹಾನಿಗೊಳಗಾಗಬಾರದು. ದಿವ್ಯಗ್ರಂಥಕರ್ತರಾದ ಶ್ರೀವೇದವ್ಯಾಸದೇವರು, ತಾವು ರಚಿಸಿದ ಮಹಾಭಾರತ ಪುರಾಣಾದಿ ಗ್ರಂಥಗಳಲ್ಲಿ, ಸೂರ್ಯ, ಗಣಪತಿ, ಸುಬ್ರಹ್ಮಣ್ಯ, ನವಗ್ರಹ ಮೊದಲಾದ ದೇವತೆಗಳನ್ನು, ಸ್ತುತಿಸಿದ್ದಾರೆ. ಅವರವರ ಸಹಸ್ರನಾಮಾದಿ ಸ್ತೋತ್ರಗಳನ್ನೂ ರಚಿಸಿ, ಇಷ್ಟಾರ್ಥ ಯಾಚನೆ ಮಾಡುವ ವಾಕ್ಯಗಳನ್ನೂ ಹೇಳಿದ್ದಾರೆ. ಶ್ರೀವೇದವ್ಯಾಸದೇವರು, ಆಯಾ ದೇವತೆಗಳಿಂದ ತಮ್ಮ ಇಷ್ಟಗಳನ್ನೇ ಬೇಡಿಕೊಳ್ಳುತ್ತಾರೆಯೇ? ಆದರಿಂದ ಅವರ ಸರ್ವೋತ್ತಮತ್ವ ಹಾನಿ ಹೊಂದುತ್ತದೆಯೆ? ಹಾಗೆಲ್ಲಾ ಹೇಳಬಾರದು.

**ಪ್ರಶ್ನೆ: ಶ್ರೀ ವಾದಿರಾಜರು ಯಾಕೆ ದೇವತೆಗಳನ್ನು, ತಮ್ಮ ಇಷ್ಟಗಳಿಗಾಗಿ, ಬೇಡಿಕೊಂಡಿರಬಾರದು?**

ಉತ್ತರ: ನಿತ್ಯದಲ್ಲಿ ಪರದೇವತೆಯಾದ ಹಯಗ್ರೀವ ದೇವರು ಪ್ರತ್ಯಕ್ಷ ಇರಬೇಕಾದರೆ, ಆ ದೇವರನ್ನು ಉಪೇಕ್ಷಿಸಿ, ಶ್ರೀ ವಾದಿರಾಜರಿಗೆ ಬೇರೆ ದೇವತೆಗಳಿಂದ ಕೇಳಬೇಕಾದ ಇಷ್ಟಗಳು ಇರಲಿಕ್ಕೆ ಸಾಧ್ಯವೇ? ಎಂದಿಗೂ ಇಲ್ಲ. ಹಾಗೆಲ್ಲ ಹೇಳಬಾರದು. **ಚಿಂತಾಮಣಿ: ಹಯಗ್ರೀವೋ ವಶೀ ಯಸ್ಯ ನಿಷೇವಿಣಃ। ಸೋಪಿ ಸರ್ವಾರ್ಥದೋ ನೃಣಾಂ ಕಿಮುತಾಸೌ ಹಯಾನನಃ ।** ಅಂತ ಶ್ರೀ ಹಯಗ್ರೀವ ಸ್ತುತಿಯಲ್ಲಿ ಶ್ರೀ ವಾದಿರಾಜರೇ ಹೇಳಿಕೊಂಡಿದ್ದಾರೆ. ಚಿಂತಾಮಣಿಯಾದ ಶ್ರೀ ಹಯಗ್ರೀವದೇವರು ತಮ್ಮ ವಶದಲ್ಲಿದ್ದಾರೆಂದೂ, ಆದರಿಂದ ತಾವೇ ಸರ್ವೇಷ್ಟಗಳನ್ನು ಕೊಡಲಿಕ್ಕೆ ಸಮರ್ಥರಾಗಿದ್ದೇವೆಂದು ಆ ಶ್ಲೋಕದ ತಾತ್ಪರ್ಯ.

**ಪ್ರಶ್ನೆ: ಶ್ರೀ ವಾದಿರಾಜರು ತಾವು ಋಜುಗಳೆಂದು ಹೇಳಿಕೊಳ್ಳಲಿಲ್ಲ. ಅದಕ್ಕೆ ಕಾರಣ ಏನೆಂದರೆ ಸ್ವರೂಪ ತಿಳಿದರೆ ಭೂಮಿಯನ್ನು ತೊರೆಯಬೇಕಾಗುತ್ತದೆ ಅಂತ ಲೇಖಕರು ಒಂದು ಕಾರಣ ಮಾತ್ರ ಹೇಳಿ, ಅದನ್ನು ದೃಷ್ಟಾಂತಗಳಿಂದ ಖಂಡಿಸಿರುತ್ತಾರೆ. ಹಾಗಾಗಿ ಶ್ರೀ ವಾದಿರಾಜರು ತಮ್ಮ ಸ್ವರೂಪ ಹೇಳಿಕೊಳ್ಳದಿರುವುದಕ್ಕೆ ಯೋಗ್ಯ ಕಾರಣ ಇಲ್ಲ ಅಂತ ಆಪಾದಿಸಿ, ಶ್ರೀ ವಾದಿರಾಜರು ಹೇಳಿಕೊಳ್ಳದ್ದರಿಂದ, ಋಜುಗಳೇ ಅಲ್ಲ ಅಂತ ಬರೆದಿದ್ದಾರೆ. ಅದು ಸರಿಯೇ?**

ಉತ್ತರ: ಸರಿಯಲ್ಲ. ಕೆಲಸಕ್ಕೆ ಬಾರದ, ನಿರಾಧಾರ ಯುಕ್ತಿ ಚಾಲನೆ. ಸ್ವರೂಪ ಹೇಳಿಕೊಂಡರೆ ಭೂಮಿಯನ್ನು ತೊರೆಯಬೇಕೆನ್ನುವುದು ಸಾಮಾನ್ಯ ನಿಯಮ. ಅದು ಎಲ್ಲರಿಗೂ ಅನ್ವಯಿಸುವುದಿಲ್ಲ. ದೇವ ಕಾರ್ಯ ಸಾಧನೆ ಇದ್ದಾಗ ಅನ್ವಯಿಸುವುದೇ ಇಲ್ಲ. ಕೆಲವರು ಜ್ಞಾನಿಗಳು, ತಮ್ಮ ಸ್ವರೂಪ ಅನ್ಯರಿಗೆ ತಿಳಿದಾಗ, ಆ ದೇಶ ಬಿಟ್ಟು ಬೇರೆ ದೇಶದಲ್ಲಿ ವಾಸಿಸುತ್ತಾರೆ. ಕೆಲವು ಕಡೆ ಭಗವದಾಜ್ಞಾ ವಿಶೇಷವಿರುತ್ತದೆ. ಸ್ವರೂಪ ಗೊತ್ತಾದರೆ ಭೂಮಿ ತೊರೆಯಬೇಕು, ಅದಕ್ಕೇ ಶ್ರೀ ವಾದಿರಾಜರು ಹೇಳಿಕೊಳ್ಳಲಿಲ್ಲ ಅನ್ನುವ ಯುಕ್ತಿಯನ್ನು ಋಜುತ್ವವಾದಿಗಳು ಯಾರೂ ಆಗ್ರಹಿಸುವುದಿಲ್ಲ. ಅದು ಲೇಖಕರ ಕಲ್ಪನೆ ಅಷ್ಟೇ. ಹೇಳಿಕೊಳ್ಳದಿರುವುದಕ್ಕೆ ಭಗವದಾಜ್ಞೆ, ದೇವಕಾರ್ಯ ಸಾಧನೆ ಮೊದಲಾದ ಅನೇಕ ಕಾರಣಗಳಿರುತ್ತವೆ ಎಂದು ತಿಳಿಯಬೇಕು.

ಅಲ್ಲಿ ತಿಳಿಯಬೇಕಾದ್ದೇನೆಂದರೆ, ವಾದಿರಾಜರು ತಮ್ಮ ಅನೇಕ ಗ್ರಂಥಗಳಲ್ಲಿ ತಾವು ಋಜುಗಳೆಂದು ಸೂಚನೆ ಕೊಟ್ಟಿದ್ದಾರೆ. ಶ್ರೀ ವಾದಿರಾಜರು ನ್ಯಾಯರತ್ನಾವಳೀ (ದ್ವಿತೀಯ ಸರ-23) ಯಲ್ಲಿ ಸಾಕ್ಷಾತ್ತಾಗಿ ಹೇಳಿಕೊಂಡೂ ಇದ್ದಾರೆ. ಆದ್ದರಿಂದ ಲೇಖಕರದು ಬರೀ ಕಲ್ಪಿತ ಆಪಾದನೆ ಅಷ್ಟೇ. ಅದಕ್ಕೆ ಬೆಲೆಯಿಲ್ಲ.

**ಪ್ರಶ್ನೆ: ಶ್ರೀ ವಾದಿರಾಜರು ಪ್ರಯತ್ನ ದಿಂದ ಸ್ವರೂಪ ಮುಚ್ಚಿಕೊಳ್ಳುತ್ತಿದ್ದರೆಂದು ಹೇಳಿ, ಈಗ ಅವರೇ ಸಾಕ್ಷಾತ್ತಾಗಿ ಹೇಳಿಕೊಂಡಿದ್ದಾರೆ ಅಂದರೆ ವಿರೋಧ ಬರುವುದಿಲ್ಲವೇ?**

ಉತ್ತರ: ಇಲ್ಲ. ಶ್ರೀ ವಾದಿರಾಜರು ತುಂಬಾ ಚಾತುರ್ಯವಂತರೆಂದು ತಿಳಿಯಿರಿ. ಶ್ರೀ ವಾದಿರಾಜರು ಸರ್ವತ್ರ, ಸ್ವರೂಪ ಮುಚ್ಚಿಕೊಳ್ಳುವ ವಿಡಂಬನೆಯನ್ನು ತೋರಿರುವುದು, ಪರಮಾರ್ಥವು. ಹೇಳಿಕೊಂಡಿರುವ ಕಡೆ, ಸ್ವಲ್ಪ ಮಥಿಸಿದರೆ ಮಾತ್ರ, ಅವರ ಸ್ವರೂಪ ವಿಚಾರ ಗೊತ್ತಾಗುವ ಹಾಗೆ ಹೇಳಿಕೊಂಡಿದ್ದಾರೆ. ನ್ಯಾಯ ರತ್ನಾವಲೀ ಯಲ್ಲಿ ಮುಂದೆ ಬ್ರಹ್ಮ ದೇವರಾಗುವವರು, ಯುಕ್ತಿ



ತಿಲೋತ್ತಮೆಯನ್ನು ರಚಿಸಿದರು ಅಂತ ಹೇಳಿಕೊಂಡರು. ಯುಕ್ತಿ ತಿಲೋತ್ತಮೆಯೆಂದರೆ ಯುಕ್ತಿ ಮಲ್ಲಿಕಾ ಅಂತ ಮಥಿಸಿದರೆ ಗೊತ್ತಾಗುತ್ತದೆ. ಲಕ್ಷ್ಮೀ ಶೋಭನ ಪದದಲ್ಲಿ **ಲಕ್ಷ್ಮೀಕಾಂತನ ಕಂದನೆನಿಸುವ** ಅಂತ ಹೇಳಿಕೊಂಡಿದ್ದಾರೆ. ಪ್ರದ್ಯುಮ್ನಾದಿಗಳು ದೇವರಿಗೆ ಮಕ್ಕಳಾದರೂ, ಕಂದನೆನಿಸುವ ಅನ್ನುವ ಪದದಿಂದ ಶ್ರೀ ವಾದಿರಾಜರು, ತಮ್ಮ ಸ್ವರೂಪಕ್ಕೆ ಒಪ್ಪುವ ಭಗವಂತನ ನಿತ್ಯ ಪುತ್ರತ್ವವನ್ನು ಹೇಳುತ್ತಾರೆಂದು ವಿಚಾರ ಮಾಡಿದಾಗ ಗೊತ್ತಾಗುತ್ತದೆ. ಅವರು ದೃಶ್ಯವಾಗಿರುವ ತನಕ ಈ ನಿಯಮ ಪರಿಪಾಲನೆ ಎಂದು ತಿಳಿಯಿರಿ. ಅಲ್ಲೂ ಅವರ ಚಾತುರ್ಯ ತಿಳಿಯಬೇಕು.

**ಪ್ರಶ್ನೆ : ಲೇಖಕರು ಸ್ವಾಪ್ನವೃಂದಾವನಾಖ್ಯಾನವನ್ನು ವಾದಿರಾಜರು ಬರೆಸಿದ್ದಲ್ಲ ಅಂತ ಬರೆದಿದ್ದಾರೆ (ಪುಟ -25) ಶ್ರೀ ವಾದಿರಾಜರ ಗ್ರಂಥವೆಂದು ಹೇಳಿದರೆ, ವಾದಿರಾಜರಿಗೇ ಸ್ವವಾಕ್ಯ ವಿರೋಧ ಬರುತ್ತೆಂದಿದ್ದಾರೆ. ಅದು ಸರಿಯೇ?**

ಉತ್ತರ: ಸರಿಯಲ್ಲ. ಶ್ರೀ ವಾದಿರಾಜರು ಅನ್ಯಗ್ರಂಥಗಳಲ್ಲಿ ತಾವು ಋಜುಗಳಲ್ಲವೆಂದು ಸಾರಿಕೊಂಡಿದ್ದಾರೆಂದು ಲೇಖಕರು ಆಪಾದಿಸಿದ್ದಾರೆ. ಆ ವಾಕ್ಯಗಳಲ್ಲಿ ಶ್ರೀ ವಾದಿರಾಜರ ಸ್ವರೂಪವನ್ನು ನಿಷ್ಕರ್ಷೆ ಮಾಡಲು ಆಗುವುದೇ ಇಲ್ಲವೆಂದು ನಾವು ಹಿಂದೆ ನಿರೂಪಿಸಿದ್ದೇವೆ. ಅದೇ ವಾಕ್ಯಗಳಲ್ಲಿ ಲೇಖಕರು ಹೇಳುವ ಅರ್ಥ ಅಂಗೀಕರಿಸಿದರೆ ಪ್ರಬಲ ಆಗಮ ವಿರೋಧವೂ, ಪೂರ್ವಾಪರ ವಿರೋಧವೂ ಪ್ರಾಪ್ತವಾಗುತ್ತೆಂದು ನಾವು ತೋರಿಸಿದ್ದೇವೆ. ಅವುಗಳ ಸೂಕ್ಷ್ಮಾರ್ಥ ವಿಚಾರವನ್ನೂ ತೋರಿಸಿ, ಅದರಿಂದ ಶ್ರೀ ವಾದಿರಾಜರ ಋಜುತ್ವವೇ ಹೇಗೆ ಸೂಚಿತವಾಗುತ್ತದೆಂದು ನಾವು ಪ್ರದರ್ಶಿಸಿದ್ದೇವೆ. ಇನ್ನೇನು ಸ್ವವಾಕ್ಯ ವಿರೋಧವು? ಏನೂ ಇಲ್ಲ. ಅದು ಲೇಖಕರ ಅವಿಚಾರಿತವಾದ ಆಪಾದನೆ.

ಸ್ವಾಪ್ನವೃಂದಾವನಾಖ್ಯಾನವು ಅದ್ಭುತ ಗ್ರಂಥವು. ಅವಲೋಕನ ಮಾಡುವವರಿಗೆ ಪರಮ ಆಶ್ಚರ್ಯ ಹುಟ್ಟಿಸುತ್ತದೆ. ಅಭ್ಯಾಸಿಗಳಿಗೆ ಪ್ರತ್ಯಕ್ಷ ಫಲ ಸಂಪಾದಿಸಿಕೊಡುತ್ತದೆ. ಆ ಗ್ರಂಥ ನೋಡಿದವರಿಗೆ ಶ್ರೀ ವಾದಿರಾಜರ ದಿವ್ಯ ಮಹಾತ್ಮೆ ತಿಳಿದು ವಿಸ್ಮಯವಾಗುತ್ತದೆ. ತಮ್ಮ ಗ್ರಂಥದ ಪ್ರಾಮಾಣ್ಯ ವಿಷಯದಲ್ಲಿ, ಬರಬಹುದಾದ ಸಮಸ್ತ ಆಕ್ಷೇಪ, ಪೂರ್ವಪಕ್ಷಗಳನ್ನು ಶ್ರೀ ವಾದಿರಾಜರೇ ಮಾಡಿಕೊಂಡು, ಅವುಗಳಿಗೆ ಯೋಗ್ಯವಾದ ಮತ್ತು ಪಂಡಿತರೂ ತಲೆದೂಗುವಂಥ ಉತ್ತರ ಕೊಟ್ಟಿದ್ದಾರೆ. ಅದನ್ನು ನೋಡಿದ ಆಕ್ಷೇಪಕರು, ಬಾಯಿ ಮುಚ್ಚಿ ಕುಳಿತುಕೊಳ್ಳಬೇಕು. ಹಾಗಿದೆ ಶ್ರೀ ವಾದಿರಾಜರ ಯುಕ್ತಿ ವೈಖರಿ. ವಿಮರ್ಶಕರು, ರಚನಾ ಧಾಟಿಯನ್ನು ನೋಡಿ, ಶ್ರೀ ವಾದಿರಾಜರದೇ ಕೃತಿಯೆಂದು ನಿಶ್ಚಯಿಸುತ್ತಾರೆ. ತಮ್ಮ ಭಕ್ತರ ಪ್ರಾರ್ಥನಾನುಸಾರ, ಶ್ರೀ ವಾದಿರಾಜರು, ಎಲ್ಲಾ ಭಕ್ತರ ಉದ್ಧಾರಾರ್ಥ ರಚಿಸಿದ್ದೆಂದು ಪ್ರಮಾಣಾಂತರಗಳಿಂದ ಗೊತ್ತಾಗುತ್ತದೆ. ಲೇಖಕರು ಮಾಡಿದ ಆಪಾದನೆಯಿಂದ, ಅವರು ವೃಂದಾವನಾಖ್ಯಾನವನ್ನು ಅವಲೋಕನವೇ ಮಾಡಿಲ್ಲವೆಂದು ನಿಶ್ಚಯವಾಗುತ್ತದೆ. ಗ್ರಂಥ ನೋಡದೇ, ಆ ಗ್ರಂಥದ ಖಂಡನೆ ಬರೆಯುವುದು ಯೋಗ್ಯವಲ್ಲ. ಪಂಡಿತರಿಗಂತೂ ಭೂಷಣವೇ ಅಲ್ಲ.

**ಪ್ರಶ್ನೆ: ಶ್ರೀಮದಾಚಾರ್ಯರು ಶ್ರೀ ವಾದಿರಾಜರ ಋಜುತ್ವವನ್ನು ಹೇಳದಿದ್ದುದರಿಂದ, ಶ್ರೀ ವಾದಿರಾಜರು ಋಜುಗಳಲ್ಲ ಅಂತ ಲೇಖಕರು ಬರೆದಿದ್ದಾರೆ (ಪುಟ26) ಅದು ಸರಿಯೇ?**

ಉತ್ತರ: ಸರಿಯಲ್ಲ. ಶ್ರೀಮದಾಚಾರ್ಯರು ಏಕಾದಶಿ ನಿರ್ಣಯದಲ್ಲಿ, ಫಳಿಗೆಗಳ ವಿಷಯವನ್ನು ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಮುಖತಃ ಹೇಳಿದರೇ ಹೊರತು, ಗ್ರಂಥದಲ್ಲಿ ಬರೆಯಲಿಲ್ಲ. ನಾವೆಲ್ಲಾ ಅದನ್ನು ತಿಳಿದು ಅನುಷ್ಠಿಸುತ್ತಿಲ್ಲವೇ. ಆ ಫಳಿಗೆಗಳ ನಿರ್ಣಯವನ್ನು ಶ್ರೀಮದಾಚಾರ್ಯರು ಹೇಳದಿದ್ದುದರಿಂದ, ಅವರಿಗೆ ನ್ಯೂನತೆಯಿಲ್ಲ. ಏಕಾದಶಿಯ ಮಹತ್ತ್ವಕ್ಕೂ ಕಡಿಮೆಯಿಲ್ಲ. ಪರಮ ರಹಸ್ಯವಾದ್ದರಿಂದ ಹೇಳಲಿಲ್ಲ ಅನ್ನುವುದೇ ಸಮಾಧಾನವು. ಶ್ರೀಮದಾಚಾರ್ಯರು, ಶ್ರೀ ಶ್ರೀನಿವಾಸ ದೇವರ ವಿಷಯ ಉಲ್ಲೇಖಿಸಲೇ ಇಲ್ಲ. ಅವನು ಸಾಕ್ಷಾತ್ ನಾರಾಯಣನು, ವೈಕುಂಠಲೋಕದಿಂದ ಬಂದು ಇಲ್ಲಿ ವಾಸ ಮಾಡುತ್ತಿರುವಾಗ, ಅವಶ್ಯವಾಗಿ ಶ್ರೀ ಮದಾಚಾರ್ಯರು ತಿರುಮಲೆಯಲ್ಲೇ ವಾಸ ಮಾಡಿ ಮಠ ಕಟ್ಟಿಸಬೇಕಿತ್ತಲ್ಲವೇ? ಶ್ರೀನಿವಾಸನಿದ್ದಾಗ ಶ್ರೀ ಕೃಷ್ಣ ಪ್ರತಿಷ್ಠೆ ಏಕೆ? ಇತ್ಯಾದಿ ಕೇಳಿದರೆ, ನಾವು ಏನು ಉತ್ತರಿಸುತ್ತೇವೆ? ಅಲ್ಲಿ ಶ್ರೀನಿವಾಸನು ಪ್ರತ್ಯಕ್ಷ ಸಿದ್ಧನಾದ್ದರಿಂದ ಅವನ ವಿಷಯ ರಹಸ್ಯವೆನ್ನಲಾಗದು. ಶ್ರೀಮದಾಚಾರ್ಯರಿಗೆ ಹೇಳುವ ಪ್ರಸಂಗವಿಲ್ಲದಿದ್ದರೂ, ಪ್ರಸಂಗ ಕಲ್ಪಿಸಬೇಕಿತ್ತು ಅನ್ನಬಹುದು. ಶ್ರೀ ಮಧ್ವಾಚಾರ್ಯರು ನಿರ್ಣಯ ಮಾಡದಿದ್ದುದರಿಂದ, ಶ್ರೀನಿವಾಸನ ಸಾಕ್ಷಾತ್ ನಾರಾಯಣ ಸ್ವರೂಪಕ್ಕೆ ಹಾನಿಯಾಗುತ್ತದೆಯೇ? ಅವನ ಮಹಿಮೆ ಹೇಳುವ ಪುರಾಣ ವಾಕ್ಯಗಳು ಪ್ರಕ್ಷಿಪ್ತಗಳೆನಿಸಿ, ಸುಳ್ಳಾಗುತ್ತವೆಯೇ? ಎಂದಿಗೂ ಇಲ್ಲ. ಆ ವಿಷಯವು ಪುರಾಣ ಪ್ರಸಿದ್ಧವಾದ್ದರಿಂದ, ಸರ್ವಜನರಿಗೆ ಶ್ರೀನಿವಾಸನು ಮಾನ್ಯನೇ ಆಗುತ್ತಾನಾದ್ದರಿಂದ ಶ್ರೀಮದಾಚಾರ್ಯರು ಹೇಳಲಿಲ್ಲ; ಹೇಳಬೇಕಿಲ್ಲ ಅನ್ನುವುದೇ ಸಮಾಧಾನ. ಶ್ರೀಮದಾಚಾರ್ಯರು ಹೇಳದಿದ್ದುದರಿಂದ, ಶ್ರೀ ಶ್ರೀನಿವಾಸನು ನಾರಾಯಣ ಅಲ್ಲ ಅನ್ನಬಾರದು. ಅವನ ವಿಷಯ ಕ್ಷುದ್ರ ತತ್ವ ಅಂತಲೂ ಹೇಳಬಾರದು. ಶ್ರೀ ಶ್ರೀನಿವಾಸನಂತೆ, ಪಂಡರಾಪುರದ ಶ್ರೀ ವಿಟ್ಠಲನು, ಅನೇಕರಿಗೆ ಪ್ರತ್ಯಕ್ಷ ಫಲಗಳನ್ನು ಕೊಡುತ್ತಿರುವನು. ಅವನನ್ನು ಮಧ್ವಮತದ ಸಮಸ್ತ ಅಪರೋಕ್ಷ ಜ್ಞಾನಿಗಳು, ವಿಶೇಷತಯಾ ಸೇವಿಸುತ್ತಿರುವರು. ಆ ದೇವನ ಮಹಾತ್ಮೆ, ಶ್ರೀಮದಾಚಾರ್ಯರು ಹೇಳದಿದ್ದುದರಿಂದ ಹಾನಿ ಹೊಂದುವುದೇ? ಶ್ರೀಮಧ್ವಾಚಾರ್ಯರು ಅವನನ್ನು ಸೇವಿಸು ಎಂದು ಹೇಳದಿದ್ದುದರಿಂದ, ಸೇವಿಸುವ ವೈಷ್ಣವರಿಗೆ ಋಜುದ್ರೋಹ ಪ್ರಾಪ್ತವಾಗುವುದೇ? ಇದಕ್ಕೆ ಏನು ಉತ್ತರಿಸುತ್ತೇವೆ? ಮನಸ್ಸಿನ ಕಲ್ಮಶ ತೊಳೆದವರೂ, ಸಾತ್ವಿಕರ ಉದ್ಧಾರಕ್ಕೆ ಕಂಕಣಬದ್ಧರೂ, ಭಗವಂತನ ಮತ್ತು ಗುರುಗಳ ಪರಮಾನುಗ್ರಹಕ್ಕೆ ಪಾತ್ರರೂ ಆದ ಅನೇಕಾನೇಕ ಜ್ಞಾನಿಗಳಿಂದ ಶ್ರೀ ವಿಟ್ಠಲನು ಸೇವಿತನಾಗಿರುವಾಗ, ನಾವೂ ಸೇವಿಸಬೇಕೆನ್ನುವುದು ಗ್ರಾಹ್ಯವೇ ಅನ್ನುವುದು ಸಮಾಧಾನವು. ಶ್ರೀಮದಾಚಾರ್ಯರು ತಮ್ಮ ಅವತಾರ ಕಾಲದವರೆಗಿನ ಭಗವದ್ ವಿಷಯ ಮೊದಲಾದವುಗಳಿಗೆ ನಿರ್ಣಯ ಕೊಟ್ಟಿರುತ್ತಾರೆಯೇ ಹೊರತು ಯಾವ ಭವಿಷ್ಯ ವಿಷಯದಲ್ಲೂ ನಿರ್ಣಯ ಕೊಟ್ಟಿಲ್ಲವೆಂಬುದು ಬಹು ಮುಖ್ಯ ಪ್ರಮೇಯವು. ಶ್ರೀ ದುರ್ಗಾದೇವಿಯ ಅವತಾರ, ಶ್ರೀ ವಿಷ್ಣುತೀರ್ಥರು ಮುಂದೆ ಮಾಡುವ ದೇವಕಾರ್ಯ, ಶ್ರೀಜಯತೀರ್ಥರ ಟೀಕಾಕರಣಕಾರ್ಯ ಇವೆಲ್ಲಾ ಗೊತ್ತಿದ್ದರೂ, ನಿರ್ಣಯಿಸಲಿಲ್ಲ. ಈ ನಾಲ್ಕು ನಿದರ್ಶನಗಳಲ್ಲಿನ ನಾಲ್ಕೂ ವಿಧ ಸಮಾಧಾನವು ವಾದಿರಾಜರ ವಿಷಯಕ್ಕೆ ಅನ್ವಯಿಸುತ್ತದೆ. ತಮ್ಮ ವಿಷಯದಲ್ಲಿ ದೇವತಾ ರಹಸ್ಯಗಳಿವೆಯೆಂದು ವಾದಿರಾಜರು ಹೇಳಿಕೊಂಡಿದ್ದಾರೆ. ಪುರಾಣಗಳಲ್ಲಿ, ಸಂಹಿತೆಗಳಲ್ಲಿ ಅವರ



ಸ್ವರೂಪ ಪ್ರೋಕ್ತವಾಗಿ ಮಾನ್ಯವಾಗಿದೆ. ಜ್ಞಾನಿಗಳು ಅದನ್ನು ತಿಳಿದು ಬೇರೆಯವರಿಗೆ ಉಪದೇಶಿಸಿ, ಶ್ರೀ ವಾದಿರಾಜರ ಋಜುತ್ವ ಉಪಾಸನೆಯ ಪರಂಪರೆಯನ್ನೇ ಬೆಳೆಸಿದ್ದಾರೆ. ದೊಡ್ಡವರು ಮಾನ್ಯ ಮಾಡಿರುವುದರಿಂದ, ಗ್ರಾಹ್ಯವೇ ಸರಿ; ಅನ್ನುವ ಸಮಾಧಾನವಿದೆ.

**ಪ್ರಶ್ನೆ : ದೊಡ್ಡವರು ಋಜುತ್ವವನ್ನು ಅಂಗೀಕರಿಸಿಲ್ಲ ಅಂತ ಲೇಖಕರು ಹೇಳಿದ್ದಾರಲ್ಲಾ? ಆ ದೊಡ್ಡವರ ಪಟ್ಟಿಯನ್ನು ಕೊಟ್ಟಿದ್ದಾರಲ್ಲಾ?**

ಉತ್ತರ: ಆ ದೊಡ್ಡವರ ಪಟ್ಟಿಯಲ್ಲಿ ಮೊದಲು ವ್ಯಾಸರಾಜರೇ ಇದ್ದಾರೆ. ಅವರು ಶ್ರೀ ವಾದಿರಾಜರ ಮೇಲೆ ಅವರ ದಿವ್ಯ ಮಹಿಮೆ ಪ್ರತಿಪಾದಕ ಪದಗಳನ್ನು ರಚಿಸಿದ್ದಾರೆ. ಶ್ರೀ ವಿಜಯೀಂದ್ರರು, ಶ್ರೀ ಸುಧೀಂದ್ರರೂ ಸಮಕಾಲೀನರು. ಶ್ರೀ ವಾದಿರಾಜರು ತಾವು ದೃಗ್ಗೋಚರರಾಗಿರುವಾಗ್ಗೆ, ತಮ್ಮ ಋಜುತ್ವದ ಬಗ್ಗೆ ಸೂಚನೆಗಳನ್ನು ಕೊಟ್ಟು ಒಂದೆರಡು ಕಡೆ ಮಾತ್ರ ಸ್ವರೂಪ ಹೇಳಿಕೊಂಡಿದ್ದರೂ, ಪ್ರಾಯಶಃ ಯತ್ನದಿಂದ ಸ್ವರೂಪ ಮುಚ್ಚಿಕೊಳ್ಳುವ ವ್ಯವಹಾರ ಮಾಡಿದ್ದಾರೆಂದು ವಿವೇಕಿಗಳಿಗೆ ಗೊತ್ತಾಗುತ್ತದೆ. ಶ್ರೀ ವಾದಿರಾಜರು ತಮ್ಮ ಸ್ವರೂಪಗೂಹನವನ್ನು ತಾವು ದೃಶ್ಯರಾಗಿರುವ ತನಕ ಅಪೇಕ್ಷಿಸಿದ್ದಾಗ, ಬೇರೆಯವರು ಅದನ್ನು ಮೀರುವ ಧೈರ್ಯ ಮಾಡುವುದಿಲ್ಲವೆಂದು ತಿಳಿಯಬೇಕು. ತಿಳಿದಿಲ್ಲದವರಾದರೆ ಪ್ರಸಂಗವೇ ಇಲ್ಲ. ವೃಂದಾವನ ಪ್ರವೇಶಾನಂತರ, ತಮ್ಮ ಋಜುತ್ವವನ್ನು ವಾದಿರಾಜರು, ತಾವೇ ಪ್ರಕಾಶ ಪಡಿಸಿದಾಗ, ಅದನ್ನು ಇಲ್ಲವೆಂದು ಜ್ಞಾನಿಗಳ್ಯಾರೂ, ನಿಷೇಧಿಸಲಿಲ್ಲವಾದ್ದರಿಂದ ಅದು ಅವರೆಲ್ಲರ ಸಮ್ಮತಿ ಸೂಚಕವೆಂದು ತಿಳಿಯಬೇಕು.

**ಪ್ರಶ್ನೆ: ಅವರೆಲ್ಲಾ ಋಜುತ್ವವನ್ನು ನಿಷೇಧಿಸಲಿಲ್ಲವೆಂದು ಹೇಗೆ ಹೇಳುತ್ತೀರಿ?**

ಉತ್ತರ: ಆಗ ಅವರಲ್ಲಿ ಯಾರೊಬ್ಬರು ನಿಷೇಧಿಸಿದ್ದರೂ, ಲೇಖಕರು ಬಿಡದೇ, ಆ ವಾಕ್ಯವನ್ನು ಉದಾಹರಿಸುತ್ತಿದ್ದರು. ಆ ಯುಕ್ತಿಯಿಂದಲೇ ಸಿದ್ಧವಾಗಿದೆ.

**ಪ್ರಶ್ನೆ: ಯಾರೂ ನಿರಾಕರಿಸದಿದ್ದರೆ, ವಿವಾದ ಹೇಗೆ ಹುಟ್ಟುತ್ತದೆ?**

ಉತ್ತರ: ಶ್ರೀ ವಾದಿರಾಜರು ವೃಂದಾವನ ಪ್ರವೇಶಿಸಿದ್ದು ಶಾರ್ವರೀ ಸಂವತ್ಸರ (1601 ಇಸವಿ). ವೃಂದಾವನಾಖ್ಯಾನವನ್ನು ಆಮೇಲೆ ಪ್ರಕಾಶಪಡಿಸಿದರು. ಶ್ರೀ ವಾದಿರಾಜರು ಋಜುಗಳಲ್ಲ ಎಂದು, ಮೊತ್ತಮೊದಲು ವಿವಾದವನ್ನು ಕಾರಣಾಂತರದಿಂದ ಮಾಡಿದವರು, ಉತ್ತರಾದಿಮಠದ ಶ್ರೀ ಸತ್ಯವೀರತೀರ್ಥರು. ಅದು ಸುಮಾರು 1885-1895 ಇಸವಿಯಲ್ಲಿ. ಈ ಮಧ್ಯೆ 280 ವರ್ಷಗಳು ಕಳೆದಿವೆ. ಅಲ್ಲೀವರೆಗೆ ವಿವಾದ ಬರಲೇ ಇಲ್ಲ. ಯಾರೂ ನಿರಾಕರಿಸಲಿಲ್ಲ. ಆಗ ಬಂದ, 'ವಾದಿರಾಜರು ಋಜುಗಳಲ್ಲ' ಅನ್ನುವ ಹೇಳಿಕೆಯನ್ನು, ಸೋದೆ ಮಠದ ಶ್ರೀವಿಶ್ವಾಧೀಶತೀರ್ಥರು, ಋಜುತ್ವಚಂದ್ರೋದಯವೆಂಬ ಗ್ರಂಥ ರಚಿಸಿ, ಖಂಡಿಸಿರುತ್ತಾರೆ. ಶ್ರೀ ಜಂಬುಖಂಡೀ ವಾದಿರಾಜಾಚಾರ್ಯರೂ ಖಂಡಿಸಿರುತ್ತಾರೆ.

**ಪ್ರಶ್ನೆ : ಅಲ್ಲಿವರೆಗೆ(280 ವರ್ಷ)ಯಾರಿಗೂ ವಾದಿರಾಜರ ಋಜುತ್ವ ಗೊತ್ತಾಗದಿದ್ದುದರಿಂದ, ಅಲ್ಲಿವರೆಗೆ ವಿವಾದ ಬರಲಿಲ್ಲ ಅನ್ನಬಹುದಲ್ಲವೇ? ಲೇಖಕರು ಹಾಗೆಯೇ ಹೇಳುತ್ತಾರಲ್ಲ?**

ಉತ್ತರ : ಹಾಗಿಲ್ಲ. ಶ್ರೀವೇದವೇದ್ಯರು ವಾದಿರಾಜರ ವೃಂದಾವನ ಪ್ರವೇಶದ ತಕ್ಷಣ, ಅವರ ಋಜುತ್ವವನ್ನು ಉದ್ಘೋಷಿಸಿ ಸಮಪೂಜೆಯ ಸಂಪ್ರದಾಯ ಪ್ರವರ್ತಿಸಿದರು. ಅವರು ತಮ್ಮ ಆಮೇಲಿನ ಉಡುಪಿಯ ಪರ್ಯಾಯ ಪೂಜೆಯಲ್ಲೂ (1614 ಇಸವಿ), ತಮ್ಮ ಸಂಚಾರಗಳಲ್ಲೂ ಋಜುತ್ವ ಪ್ರಸಿದ್ಧಿ ಮಾಡಿದ್ದಾರೆ. ವೇದ ನಿಧಿಗಳ ಕಾಲದಲ್ಲಿ ವೃಂದಾವನಾಖ್ಯಾನವನ್ನು ಶ್ರೀವಾದಿರಾಜರು ಉಪದೇಶಿಸಿದ್ದು. ಅವರು ಆಖ್ಯಾನವನ್ನು ಅನೇಕ ಪ್ರತಿ ಮಾಡಿಸಿ, ಅನೇಕ ಮಠಗಳಿಗೆ ಕಳಿಸಿ ಕೊಟ್ಟಿದ್ದಾರೆ. ಆಮೇಲೆ, ಶ್ರೀ ವಿಜಯದಾಸರು, ಅವರ ಶಿಷ್ಯ ಪರಂಪರೆಯ ಶ್ರೀ ವೇಣುಗೋಪಾಲದಾಸರು, ಶ್ರೀ ಗೋಪಾಲದಾಸರು, ಮೊದಲಾದವರು, ಪದಸುಳಾದಿಗಳ ರಾಶಿಯಿಂದ, ಋಜುತ್ವವನ್ನು ದಿಕ್ಕುದಿಕ್ಕಿನಲ್ಲಿ ಪ್ರಸಿದ್ಧಿಪಡಿಸಿದ್ದಾರೆ. ಅದು ಸುಮಾರು 1720 -1760 ಇಸವಿಯ ಕಾಲದಲ್ಲಿ. ಅಲ್ಲಿಂದ, 100 ವರ್ಷ ಕಾಲ, ಶ್ರೀ ವಾದಿರಾಜರ ಋಜುತ್ವ ಚೆನ್ನಾಗಿ ಪ್ರಸಿದ್ಧವಾಗಿ, ಬಹುಸಂಖ್ಯೆಯ ಭಕ್ತರು, ಶ್ರೀ ವಾದಿರಾಜರ ಮೃತ್ತಿ ಕಾಧಾರಣಾದಿಗಳನ್ನು ಮಾಡಿ, ಸೇವಿಸುತ್ತಿದ್ದರೆಂದು ತಿಳಿದುಬರುತ್ತದೆ. ಶ್ರೀ ಸತ್ಯಧರ್ಮ ಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿ ಶ್ರೀ ವಾದಿರಾಜರ ಮೃತ್ತಿಕಾಧಾರಣ ಮಾಡುತ್ತಿದ್ದರೆಂದು ಅವರ ಚರಿತ್ರೆಯಿಂದ ಶ್ರುತವಾಗುತ್ತದೆ (1785-1795 ಇಸವಿ). ಅಲ್ಲಿಂದ 100 ವರ್ಷವಾದ ಮೇಲೆ, ಸುಮಾರು 1880 ಇಸವಿಯಲ್ಲಿ, ಕೆಲವರು ಮೊದಲು ವಾದಿರಾಜರ ಮೃತ್ತಿಕಾಧಾರಣೆಯನ್ನು ಆಕ್ಷೇಪಿಸಿದರು. ವಿವಾದವಾಯಿತು. ಆಗ ವಿವಾದ ನಿರ್ಣಯ ಮಾಡಲು, ಉತ್ತರಾದಿಮಠದ ಸತ್ಯಪರಾಕ್ರಮತೀರ್ಥರನ್ನು ಕೇಳಿಕೊಂಡರು. ಅವರು ಮೃತ್ತಿಕಾಧಾರಣ ವಿವಾದ ನಿರ್ಣಯ ಮಾಡುವಾಗ, ಶ್ರೀ ವಾದಿರಾಜರು ಋಜುಗಳೆಂದು ಮಠದ ಆಜ್ಞಾಪತ್ರವೊಂದನ್ನು ಹೊರಡಿಸಿದರು (1883 ಇಸವಿಯಲ್ಲಿ). ಹೀಗೆ ಸುಮಾರು 280 ವರ್ಷಗಳಷ್ಟು ಕಾಲ, ಯಾವ ಜ್ಞಾನಿಗಳೂ, ಜನಸಾಮಾನ್ಯರೂ ಶ್ರೀ ವಾದಿರಾಜ ಋಜುತ್ವವನ್ನು ನಿರಾಕರಿಸಲಿಲ್ಲವೆಂದು ತಿಳಿಯಿರಿ.

**ಪ್ರಶ್ನೆ: ಜ್ಞಾನಿಗಳು ಋಜುತ್ವವನ್ನು ನಿರಾಕರಿಸಿಲ್ಲವಾದರೂ, ಲೇಖಕರು ಆಪಾದಿಸುವಂತೆ ಸ್ವೀಕರಿಸಿಯೂ ಇಲ್ಲವೆಂದು ಹೇಳಬಹುದಲ್ಲಾ?**

ಉತ್ತರ: ಶ್ರೀ ವಾದಿರಾಜರ ಋಜುತ್ವವೆನ್ನುವುದು ಉಪಾಸನೆಗೆ ಸಂಬಂಧಿಸಿದ್ದು. ಲೇಖಕರು ಬರೆಯುವಾಗ ಟೀಕಾ ಟಿಪ್ಪಣಿಗೆ ಆರಂಭದಲ್ಲಿ ವಾದಿರಾಜರ ಹೆಸರು ಹೇಳದ ಗ್ರಂಥಕರ್ತರನ್ನು ಮಾತ್ರ, ಪಟ್ಟಿ ಮಾಡಿ ಉಲ್ಲೇಖಿಸಿದ್ದಾರೆ. ಆ ಗ್ರಂಥಕರ್ತರಿಗೆ ಆ ಮೂಲ ಕರ್ತೃಗಳ ನಮಸ್ಕಾರ ವಿಹಿತವೇ ಹೊರತು, ಎಲ್ಲರ ನಮಸ್ಕಾರವಲ್ಲ. ಶ್ರೀ ವಾದಿರಾಜರು ಋಜುಗಳು, ಅವರಿಗೆ ನಮಸ್ಕರಿಸಬೇಕಲ್ಲವೇ ಅಂದರೆ, ಅವರಿಗೆ ಯಾರು ನಮಿಸುವುದಿಲ್ಲ? ಶ್ರೀ ವಾದಿರಾಜರು ನಿತ್ಯವಂದ್ಯರು ಅಂತ ಲೇಖಕರೇ ಒಪ್ಪಿದ್ದಾರೆ. ಯುಕ್ತಿಮಲ್ಲಿಕಾ, ಮಹಾಭಾರತಲಕ್ಷಾಲಂಕಾರ ಮುಂತಾದ ಅತಿ ದಿವ್ಯ ಗ್ರಂಥರಚನಾ ಮಾಡಿ, ದಿಕ್ಕುದಿಕ್ಕಿನಲ್ಲಿ ಮಧ್ವಮತ ಪ್ರತಿಷ್ಠಿಸಿದ ಶ್ರೀ ವಾದಿರಾಜರಿಗೆ ನಮಿಸುವುದಿಲ್ಲ ಅನ್ನುವುದಾದರೆ, ಅಂತಹ ಬೇರೆ ಗ್ರಂಥಕರ್ತರ ಗ್ರಂಥಕ್ಕೆ ಬೆಲೆ ಏನಿದೆ? ಆದ್ದರಿಂದ ಅವರಲ್ಲಿ ತಿಳಿದವರೆಲ್ಲಾ ಉಪಾಸನಾ, ಮನಸಾ ಧ್ಯಾನಾದಿ ಉಪಚಾರ ಮಾಡಿರುವರೆಂದೇ ತಿಳಿಯಬೇಕು. ಸ್ವರೂಪ ತಿಳಿಯದವರ ಪ್ರಸಕ್ತಿ ಬರುವುದೇ ಇಲ್ಲ.



**ಪ್ರಶ್ನೆ: ಆ ಗ್ರಂಥಕರ್ತರು ಮತ್ತು ಅಂತಹ ಮಹನೀಯರು ಶ್ರೀ ವಾದಿರಾಜರ ಸ್ವರೂಪ ತಿಳಿದಿರಬೇಕಲ್ಲವೇ? ತಿಳಿಯದಿರುವುದು ಹೇಗೆ?**

ಉತ್ತರ: ಶ್ರೀ ವಾದಿರಾಜರ ಸಮಕಾಲದ ಜ್ಞಾನಿಗಳೆಲ್ಲರೂ, ಅವರ ಋಜುತ್ವ ತಿಳಿಯಬೇಕೆಂಬ ನಿಯಮವಿಲ್ಲ. ತಮ್ಮ ಋಜುತ್ವ ತಿಳಿಯಲು, ವಾದಿರಾಜರು ಅನುಗ್ರಹಿಸಬೇಕು. ಶ್ರೀ ಹನುಮಂತ ದೇವರು, ಋಜುವೆಂದು ಇಂದ್ರಾಂಶನಾದ ವಾಲಿಯೇ ತಿಳಿಯಲಿಲ್ಲ. ಶ್ರೀ ಭೀಮಸೇನ ದೇವರು ಋಜುವೆಂದು ಯುಧಿಷ್ಠಿರನೂ ಚೆನ್ನಾಗಿ ತಿಳಿಯಲಿಲ್ಲ. ಆದ್ದರಿಂದ ಎಲ್ಲರೂ ತಿಳಿಯಬೇಕೆಂಬ ನಿಯಮವಿಲ್ಲವೆಂದು ತಿಳಿಯಿರಿ. ಆಮೇಲೆ, ವಾದಿರಾಜರ ಋಜುತ್ವ ಪ್ರಸಿದ್ಧಿಯಾದಮೇಲೆ, ಜ್ಞಾನಿಗಳು, 280 ವರ್ಷದ ವರೆಗೆ ಏನೂ ವಿವಾದ ಮಾಡಲಿಲ್ಲವೆಂದು ನಿರೂಪಿಸಿದ್ದೇವೆ.

**ಪ್ರಶ್ನೆ: ಲೇಖಕರು ಪಟ್ಟಿಮಾಡಿರುವ ಗ್ರಂಥಕರ್ತರು, ತಮ್ಮ ಗ್ರಂಥದ ಆದಿಯಲ್ಲಿ, ಶ್ರೀ ವಾದಿರಾಜರಿಗೆ ನಮಸ್ಕರಿಸಲಿಲ್ಲವಾದ್ದರಿಂದ, ಋಜುತ್ವ ಗ್ರಾಹ್ಯವಲ್ಲವೆಂದು ಲೇಖಕರು ಬರೆದಿದ್ದಾರಲ್ಲಾ?**

ಉತ್ತರ: ಗ್ರಂಥದ ಆದಿಯಲ್ಲಿ ನಮಸ್ಕರಿಸಲೇಬೇಕು ಅಂತ ನಿಯಮ ಎಲ್ಲಿದೆ? ಯಾರು ಟೀಕೆಗೆ ಟಿಪ್ಪಣಿ ಬರೆಯಲು ಪ್ರವೃತ್ತರಾಗಿರುತ್ತಾರೋ, ಅವರೇ ಕೆಲವು ಕಡೆ ಆ ಮೂಲಕರ್ತರಿಗೇ ಸಾಕ್ಷಾತ್ ನಮಸ್ಕಾರ ಮಾಡಿರುವುದಿಲ್ಲ.

ಶ್ರೀ ರಾಘವೇಂದ್ರ ಸ್ವಾಮಿಗಳು ತತ್ತ್ವ ಪ್ರಕಾಶಿಕಾ ಭಾವದೀಪ ರಚಿಸುವಾಗ "ಲಕ್ಷ್ಮೀನಾರಾಯಣಂ ನತ್ವಾ ಪೂರ್ಣಬೋಧಾನ್ ಗುರೂನಪಿ। ತತ್ತ್ವ ಪ್ರಕಾಶಿಕಾ ಭಾವದೀಪಂ ಕುರ್ಯಾಂ ಯಥಾಮತಿ" ಅಂತ ಮಂಗಳ ಶ್ಲೋಕದಲ್ಲಿ ಹೇಳಿದ್ದಾರೆ. ಅಲ್ಲಿ ಗುರೂನಪಿ ಅನ್ನುವಾಗ ತಮ್ಮ ಗುರುಗಳಾದ ಶ್ರೀವಿಜಯೀಂದ್ರರು, ಶ್ರೀಸುಧೀಂದ್ರರು ಮಾತ್ರ ಗ್ರಾಹ್ಯರು; ಶ್ರೀಜಯತೀರ್ಥರಲ್ಲ, ಶ್ರೀವಾದಿರಾಜರು ಗ್ರಾಹ್ಯರಲ್ಲವೆಂದು ಯಾರಾದರೂ ಹೇಳುತ್ತಾರೆಯೇ? ಅಲ್ಲಿ ರಾಯರು ಸಾಕ್ಷಾತ್ತಾಗಿ ತತ್ತ್ವಪ್ರಕಾಶಿಕಾಕಾರರಾದ ಶ್ರೀ ಜಯತೀರ್ಥರಿಗೇ ನಮಸ್ಕಾರ ಹೇಳಲಿಲ್ಲ. ತಂತ್ರದೀಪಿಕೆಯಲ್ಲೂ, ನ್ಯಾಯ ಮುಕ್ತಾವಲಿಯಲ್ಲೂ ಹಾಗೇ ಇದೆ. ಪರಿಮಳದಲ್ಲಿ ಸಾಕ್ಷಾತ್ತಾಗಿ ಸ್ತುತಿಸಿದ್ದಾರೆ. ಶ್ರೀ ಯಾದವಾರ್ಯರು ತಮ್ಮ ನ್ಯಾಯಸುಧಾ ಟಿಪ್ಪಣಿಯಲ್ಲಿ "ಪೂರ್ಣಪ್ರಜ್ಞ ಜಯಾರ್ಯ ಪೂರ್ವಕ ಗುರೂನಾನಮ್ಯ ವಿದ್ಯಾಪ್ರದಾನ್" ಅಂತ ಹೇಳಿರುವಾಗ, ಅಲ್ಲಿ ವಾದಿರಾಜರು ಗ್ರಾಹ್ಯರಲ್ಲವೆಂದು ಯಾರು ಆಕ್ಷೇಪಿಸುವರು? ಶ್ರೀ ಶ್ರೀನಿವಾಸ ತೀರ್ಥರ ತತ್ತ್ವಪ್ರಕಾಶಿಕಾ ಟಿಪ್ಪಣಿಯಲ್ಲಿ ಒಂದೇ ಶ್ಲೋಕವಿದೆ. ಯಾದವಾರ್ಯ ಗುರೂನ್ನತ್ವಾ ತದ್ದಯಾದಿಷ್ಟಮಾರ್ಗತಃ। .....। ಅಂತಿದೆ. ಅಲ್ಲಿ ಶ್ರೀ ವೇದವ್ಯಾಸ ದೇವರ ಶ್ರೀಮದಾಚಾರ್ಯರ ಉಲ್ಲೇಖವೇ ಇಲ್ಲದಿದ್ದ ಮೇಲೆ, ವಾದಿರಾಜರ ಉಲ್ಲೇಖ ಹೇಗೆ ಅಪೇಕ್ಷಿಸುವುದು?

ಈ ದೃಷ್ಟಾಂತಗಳಿಂದ ಏನು ತಿಳಿಯಬೇಕೆಂದರೆ, ಗ್ರಂಥಾದಿಯಲ್ಲಿ ಸಮಸ್ತ ಗ್ರಂಥ ಕರ್ತರು ಶ್ರೀ ವಾದಿರಾಜರಿಗೆ ನಮಿಸಲೇ ಬೇಕು ಇಲ್ಲದಿದ್ದರೆ ಅವರು ಋಜುವಲ್ಲ ಅನ್ನುವ ಯುಕ್ತಿ ನಿರಾಧಾರ, ನಿರ್ಮೂಲ, ಕುಯುಕ್ತಿ ಅದು.

**ಪ್ರಶ್ನೆ: ಗ್ರಂಥದಲ್ಲಿ ಉಲ್ಲೇಖ ಮಾಡದಿದ್ದರೂ, ವಾದಿರಾಜರನ್ನು ಅವರು ಸೇವಿಸಬೇಕಲ್ಲ?**

ಉತ್ತರ: ಅವಶ್ಯ ಸೇವಿಸಿದ್ದಾರೆ. ವಾಕ್ಯಾರ್ಥಚಂದ್ರಿಕಾಕಾರರಾದ ಶ್ರೀ ವಿದ್ಯಾಧೀಶರು ಪಾಂಡುರಂಗಿ ಮನೆತನದವರು. ಶ್ರೀ ವಾದಿರಾಜರ ಅನುಗ್ರಹದಿಂದ ಹುಟ್ಟಿದವರು. ವಾದಿರಾಜರ ಬಹುವಿಧ ಸೇವೆ ಮಾಡಿದವರೆಂದು ಶ್ರುತವಾಗುತ್ತದೆ. ಶ್ರೀ ಸತ್ಯಧರ್ಮರು ಬೇರೆ ದಿವ್ಯ ಸ್ತೋತ್ರಗಳನ್ನು ಶ್ರೀ ವಾದಿರಾಜರ ಮೇಲೆ ರಚಿಸಿರುವರು. ಶ್ರೀ ವಾದಿರಾಜರ ದಿವ್ಯ ಮಾಹಾತ್ಮ್ಯ ತಿಳಿದವರು ಯಾರಾದರೂ ಅವರನ್ನು ಸೇವಿಸದಿರುವರೇ? ತಿಳಿಯದಿದ್ದವರು ಕೆಲವು ಗ್ರಂಥಕರ್ತರು ಇದ್ದಾರು; ಅವರ ಪ್ರಸಕ್ತಿ ಬರುವುದೇ ಇಲ್ಲ. ಲೇಖಕರು ಶ್ರೀ ಸತ್ಯ ಪ್ರಮೋದ ತೀರ್ಥರನ್ನು ತಪಸ್ವಿಗಳು, ಕೋಟ್ಯಂತರ ಭಕ್ತರ ಉದ್ಧಾರಕರು ಅಂತ ಹೇಳಿದ್ದಾರೆ. ಅವರೇ ಶ್ರೀ ಸೋದಾ ಕ್ಷೇತ್ರದಲ್ಲಿ ಚಾತುರ್ಮಾಸ್ಯ ಆಚರಿಸಿ, ಶ್ರೀ ವಾದಿರಾಜರನ್ನು ಸೇವಿಸಿದ್ದಾರೆ.

**ಪ್ರಶ್ನೆ : ಲೇಖಕರು ಪಟ್ಟಿಮಾಡಿದ ಮಹನೀಯರು ಯಾರೂ ವಾದಿರಾಜರನ್ನು ಗೌರವಿಸಿಲ್ಲ, ಉದಾಸೀನ ಮಾಡಿದ್ದಾರೆ ಅಂತ ಲೇಖಕರು ಬರೆದಿದ್ದಾರೆ. ನೀವು ಜ್ಞಾನಿಗಳು ಶ್ರೀ ವಾದಿರಾಜರನ್ನು ಅವಶ್ಯ ಸೇವಿಸಿದ್ದಾರೆ ಅಂತ ಹೇಳಿದಿರಿ; ಎರಡರಲ್ಲಿ ಯಾವುದು ಸರಿ?**

ಉತ್ತರ: ಆ ಪಟ್ಟಿಯಲ್ಲಿ ಹೆಸರಿಸಲ್ಪಟ್ಟವರು 30-32 ಜನ. ಅವರು ಗ್ರಂಥರಚನಾ ಸೇವೆ ಮಾಡಿದವರು. ಶ್ರೀ ಮಧ್ವಾಚಾರ್ಯರ ಮತಾನುಗ ಸಮಾಜದಲ್ಲಿ ದೊಡ್ಡವರು ಮಹನೀಯರು ಅಂದರೆ ಅಷ್ಟೇ ಜನರೇ ? ಶ್ರೀ ವಾದಿರಾಜರ ಋಜುತ್ವವನ್ನು ಅನೇಕಬಾರಿ ಸ್ತುತಿಸಿದ ಶ್ರೀ ವಿಜಯದಾಸರು, ಶ್ರೀ ವೇಣುಗೋಪಾಲದಾಸರು, ಶ್ರೀ ಗೋಪಾಲದಾಸರು ಅವರು ಅಪರೋಕ್ಷ ಜ್ಞಾನಿಗಳೆಂದು ಪ್ರಸಿದ್ಧರಾಗಿದ್ದಾರೆ. ಲೇಖಕರ ಪಟ್ಟಿಯಲ್ಲಿರುವ ಲಿಂಘೇರಿ ಆಚಾರ್ಯರು, ಕೇಶವ ಭಟ್ಟಾರಕರು ಇತ್ಯಾದಿಯವರ ಹೆಸರು ಎಷ್ಟು ಜನ ಮಾಧ್ವರಿಗೆ ಗೊತ್ತಿದೆ. ವಿಚಾರಿಸಲಿ. ಅಪರೋಕ್ಷ ಜ್ಞಾನಿಗಳು ಮಹಾಮಹಿಮೆ ಉಳ್ಳವರು. ಅಂತಹವರು ಶ್ರೀ ವಾದಿರಾಜ ಋಜುತ್ವ ಅಂಗೀಕರಿಸಿ ಉಪಾಸನೆ ಮಾಡಿದ್ದಾರೆ.

ಶ್ರೀ ವಿಜಯದಾಸರಾದಿಗಳನ್ನು ಬಿಟ್ಟ ಪಟ್ಟಿಗೆ ಏನು ಮಾನ್ಯತೆ ಸಿಗುತ್ತೆ? ಗ್ರಂಥಾದಿಯಲ್ಲಿ ಉಲ್ಲೇಖಿಸದಿದ್ದ ಮಾತ್ರಕ್ಕೆ ಮಾಧ್ವ ಸಮಾಜದ ಪಂಡಿತರೆಲ್ಲಾ ಶ್ರೀ ವಾದಿರಾಜರನ್ನು ಉದಾಸೀನ ಮಾಡಿದ್ದಾರೆ ಅಂತ ಅರ್ಥವೇ? ಉತ್ತರಾದಿ ಮಠದ ಶ್ರೀಸತ್ಯ ಧರ್ಮ ಸ್ವಾಮಿಗಳು, ಶ್ರೀ ಸತ್ಯಪರಾಕ್ರಮ ಸ್ವಾಮಿಗಳು ನಿತ್ಯದಲ್ಲಿ ಶ್ರೀ ವಾದಿರಾಜರನ್ನು ಅರ್ಚಿಸುತ್ತಿದ್ದರೆಂದು ತಿಳಿದುಬರುತ್ತದೆ. ಶ್ರೀಸತ್ಯಪರಾಕ್ರಮರಂತೂ ಶ್ರೀ ವಾದಿರಾಜರನ್ನು ಋಜುಗಳೆಂದು ತಿಳಿಯಬೇಕೆಂದು ನಿರೂಪವನ್ನೇ (ಅಜ್ಞಾಪತ್ರ ) ಹೊರಡಿಸಿದರು. ಪಂಡಿತರು ಉದಾಸೀನ ಮಾಡಿದ್ದರಿಂದ, ಶ್ರೀ ವಾದಿರಾಜರು ಋಜುಗಳಲ್ಲ ಅನ್ನುವ ಯುಕ್ತಿಯೂ ನಿರ್ಮೂಲ ಯುಕ್ತಿ.

**ಪ್ರಶ್ನೆ: ಶ್ರೀ ವಿಜಯದಾಸರಾದಿ ಅಪರೋಕ್ಷ ಜ್ಞಾನಿಗಳನ್ನು ಯಾಕೆ ಪಟ್ಟಿಯಲ್ಲಿ ಲೇಖಕರು ಸೇರಿಸಲಿಲ್ಲ?**

ಉತ್ತರ: ಲೇಖಕರು ಬರೀ ಸಂಸ್ಕೃತ ಭಾಷೆಯಲ್ಲಿ ಟೀಕಾ ಟಿಪ್ಪಣಿ ಬರೆದವರನ್ನು ಮಾತ್ರ ಅಲ್ಲಿ ಪಟ್ಟಿ ಮಾಡಿದ್ದಾರೆ. ಅದರಲ್ಲೂ ನಿಖರವಾಗಿ ಶ್ರೀ ವಾದಿರಾಜರ ಹೆಸರನ್ನು ಉಲ್ಲೇಖಿಸದವರನ್ನು ಮಾತ್ರ ಪಟ್ಟಿ ಮಾಡಿದ್ದಾರೆ. ವಾದಿರಾಜರ ಹೆಸರನ್ನೇ ಉಲ್ಲೇಖಿಸಿ ಸ್ತುತಿಸಿ ಗ್ರಂಥ ರಚನೆ ಮಾಡಿದವರ ಹೆಸರನ್ನು



ಅಲ್ಲಿ ಸೇರಿಸಲಿಲ್ಲ.

**ಪ್ರಶ್ನೆ: ಆದರೂ ಅಷ್ಟೊಂದು ಜನ ಪಂಡಿತರು ಶ್ರೀ ವಾದಿರಾಜರ ಹೆಸರನ್ನು ತಮ್ಮ ಗ್ರಂಥದಲ್ಲಿ ಹೇಳದಿದ್ದುದರಿಂದ, ಶ್ರೀ ವಾದಿರಾಜರಿಗೆ ಮಾನ್ಯತೆ ಕೊಡಲಿಲ್ಲ ಅಂತ ಸಿದ್ಧವಾಗಿ, ಶ್ರೀ ವಾದಿರಾಜರ ಮಹಾತ್ಮೆಯಲ್ಲಿ ಸಂಶಯ ಬರುವುದಿಲ್ಲವೆ?**

ಉತ್ತರ: ಅಷ್ಟೊಂದು ಅಂದರೆ ಎಷ್ಟು? ಅವರಲ್ಲಿ ಶ್ರೀ ವ್ಯಾಸರಾಜರ ವಿಷಯ ಹಿಂದೆಯೇ ಹೇಳಿದ್ದೇವೆ. ಜಗನ್ಮಾನ್ಯರಾದ ಶ್ರೀ ರಾಘವೇಂದ್ರ ಸ್ವಾಮಿಗಳ ಸಾಕ್ಷಾತ್ ಶಿಷ್ಯರು ಶ್ರೀ ಕೃಷ್ಣಾಚಾರ್ಯರೆಂಬವರು ಸ್ಮೃತಿ ಮುಕ್ತಾವಲೀ ಎನ್ನುವ ಗ್ರಂಥ ರಚಿಸಿದ್ದಾರೆ. ಅದರಲ್ಲಿ ಅವರು ಶ್ರೀ ವಾದಿರಾಜರ ಏಕಾದಶೀ ನಿರ್ಣಯವೆಂಬ ಗ್ರಂಥರತ್ನದ ಶ್ಲೋಕಗಳನ್ನು ನೇರವಾಗಿ ಉದಾಹರಿಸಿ, ರಾಯರು ಆ ರೀತಿಯ ವಾದಿರಾಜರು ನಿರ್ಣಯಿಸಿದ ಸಂಪ್ರದಾಯಾನುಸಾರಿಯಾಗಿಯೇ ಆಚರಿಸುತ್ತಿದ್ದರೆಂದು ಸಾರಿದ್ದಾರೆ. ಈಗ ಕೆಲವರು ಏಕಾದಶೀ ವ್ರತವು ಮಠ ಸಂಪ್ರದಾಯ ಅಂತ ಹೇಳುತ್ತಿರುವಾಗ, ಅಂತಹ ಅತೀ ಮಹತ್ತ್ವದ ಏಕಾದಶೀಯ ವಿಷಯದಲ್ಲೇ ರಾಯರು ಶ್ರೀ ವಾದಿರಾಜರು ತೋರಿಸಿದ ಸಂಪ್ರದಾಯವನ್ನು ಅನುಸರಿಸುತ್ತಿದ್ದರೆಂದು ಸಿದ್ಧವಾಗುತ್ತದೆ. ಶ್ರೀ ವಾದಿರಾಜರಿಗೆ ಮಾನ್ಯತೆ ಇಂತಹ ಮಹನೀಯರಿಂದ ಚೆನ್ನಾಗಿಯೇ ಇದೆ. ಶ್ರೀ ಸತ್ಯಧರ್ಮರು ರುದ್ರಾಂಶರೆಂದು ನಂಬಿಕೆ ಇದೆ. ಅವರ ವೃಂದಾವನದಲ್ಲಿ ಸತ್ಯ ಧರ್ಮರ ಸೂಚನೆಯಂತೆ ಶ್ರೀ ವಾದಿರಾಜರಿಗೂ ಹಸ್ತೋದಕ ಇವತ್ತಿಗೂ ನಡೆಯುತ್ತಿದೆ. ಶ್ರೀ ವಾದಿರಾಜರಿಗೆ ಮಾನ್ಯತೆ ಇಂತಹ ಮಹನೀಯರಿಂದ ಚೆನ್ನಾಗಿಯೇ ಇದೆ. ಇನ್ನು ಯಾರಾದರೂ ಪಂಡಿತರು, ನಾವು ಶ್ರೀ ವಾದಿರಾಜರಿಗೆ ಮಾನ್ಯತೆ ಕೊಡುವುದಿಲ್ಲ, ಅವರನ್ನು ಸೇವಿಸುವುದಿಲ್ಲ, ಮನಸ್ಸಿನಿಂದಲೂ ನಮಿಸುವುದಿಲ್ಲ ಅನ್ನುವುದಾದರೆ, ಅಂತಹವರು ನಿರ್ಮತ್ಸರ ಪಂಡಿತರಾಗುತ್ತಾರೆಯೇ? ಆಗುವುದಿಲ್ಲವೆಂದು ತಿಳಿಯಿರಿ.

**ಪ್ರಶ್ನೆ : ರಾಯರು ಶ್ರೀ ವಾದಿರಾಜರ ನಿರ್ಣಯಕ್ಕೆ ಮಾನ್ಯತೆ ಕೊಟ್ಟು, ಏಕಾದಶೀ ಆಚರಿಸುತ್ತಿದ್ದರು ಎಂದು ಒಪ್ಪಿದರೂ, ಗ್ರಂಥದಲ್ಲಿ ಯಾಕೆ ಉಲ್ಲೇಖಿಸಲಿಲ್ಲ?**

ಉತ್ತರ: ಅಲ್ಲಿ ತಿಳಿಯಬೇಕಾದ್ದೇನೆಂದರೆ, ಕಂಠತಃ ಉಲ್ಲೇಖ ಮಾಡದಿರುವುದನ್ನು ಅನುಕ್ತಿ ಅಂತ ಶಾಸ್ತ್ರ ಹೇಳುತ್ತದೆ. ಆ ರೀತಿ ಅನುಕ್ತಿಯಿಂದ, ಆ ಪದಾರ್ಥವೇ ಇಲ್ಲವೆಂದಾಗುವುದಿಲ್ಲ. ಶ್ರೀ ಶ್ರೀನಿವಾಸನ ವಿಷಯಕ್ಕೆ ಶ್ರೀಮದಾಚಾರ್ಯರ ಅನುಕ್ತಿಯಿದೆ. ಅದರಿಂದ ಶ್ರೀ ಶ್ರೀನಿವಾಸನ ಪ್ರತ್ಯಕ್ಷಸಿದ್ಧ ಮಹಿಮೆ ಇಲ್ಲವೆಂದಾಗುತ್ತದೆಯೇ? ಹಾಗೇ ಶ್ರೀ ವಾದಿರಾಜರ ಮಹಿಮೆಯೂ ಎಂದು ತಿಳಿಯಬೇಕು. ರಾಯರು ವೇದತ್ರಯ ವ್ಯಾಖ್ಯಾನ ಮಾಡಿದವರು. ಆ ಗ್ರಂಥ ಈಗ ಸಿಕ್ಕಿಲ್ಲ. ಅದರಲ್ಲಿ ಶ್ರೀ ವಾದಿರಾಜರ ಮಹಿಮಾ ಬೋಧಕ ವೇದವಾಕ್ಯಗಳಿಗೆ ರಾಯರು ಅರ್ಥ ಬರೆದಿರಬಹುದು. ಇಲ್ಲಿ ತಿಳಿಯಬೇಕಾದ್ದೇನೆಂದರೆ, ಶ್ರೀಕೃಷ್ಣ ಜಯಂತೀ ವ್ರತದ ವಿಷಯವನ್ನು ಶ್ರೀಮಧ್ವಾಚಾರ್ಯರು ಜಯಂತೀ ಕಲ್ಪದಲ್ಲಿ ಮಾತ್ರ ಹೇಳಿರುವರು. ಇನ್ನು ಬೇರೆ ಯಾವ ಅವರ ಗ್ರಂಥದಲ್ಲೂ, ಜಯಂತೀ ವ್ರತದ ವಿಷಯ ಬರುವುದಿಲ್ಲ. ಜಯಂತೀ ಕಲ್ಪ ಗ್ರಂಥ ಒಂದನ್ನು ಬದಿಗಿಟ್ಟು, ಬೇರೆ ಗ್ರಂಥಗಳನ್ನು ಮಾತ್ರ ನೋಡಿದರೆ ಶ್ರೀಮದಾಚಾರ್ಯರು ಜಯಂತೀ ವ್ರತವನ್ನು ಉಲ್ಲೇಖಿಸಲಿಲ್ಲವೆಂದೇ ಹೇಳಿಬಿಡಬಹುದು. ಹಾಗೆ ಹೇಳಬಾರದು . ಹಾಗೆಯೇ ರಾಯರ ಎಲ್ಲಾ ಗ್ರಂಥ ಉಪಲಬ್ಧ

ಇಲ್ಲದಿರುವಾಗ, ಉಲ್ಲೇಖವಿಲ್ಲ ಅಂತ ಹೇಳಬಾರದು. ರಾಯರ 'ಇಂದು ಎನಗೆ ಗೋವಿಂದ' ಅನ್ನುವ ಒಂದೇ ಕನ್ನಡ ಪದ, ಒಂದೆರಡು ಸುಳಾದಿ ಸಿಕ್ಕಿವೆ. ಅದರಿಂದ ಅವರು ಬೇರೆ ಕನ್ನಡ ಕೃತಿ ರಚಿಸಲಿಲ್ಲವೆಂದಾಗುತ್ತದೆಯೇ?

**ಪ್ರಶ್ನೆ: ಶ್ರೀ ವಾದಿರಾಜರ ತಮ್ಮಂದಿರಾದ ಸುರೋತ್ತಮರು ಮತ್ತು ಶಿಷ್ಯರಾದ ನಾರಾಯಣಾಚಾರ್ಯರು ವಾದಿರಾಜರನ್ನು ಋಜುಗಳೆಂದು ಹೇಳಲಿಲ್ಲ. ಮನುಷ್ಯರೇ ಅನ್ನುವ ರೀತಿಯಲ್ಲಿ ವ್ಯವಹಾರ ಮಾಡಿದ್ದಾರೆ. ಆದ್ದರಿಂದ ವಾದಿರಾಜರು ಋಜುಗಳಲ್ಲ ಅಂತ ಲೇಖಕರು ಬರೆದಿದ್ದಾರೆ (ಪುಟ 30) ಅದು ಸರಿಯೇ?**

ಉತ್ತರ: ಸರಿಯಲ್ಲ, ಅತ್ಯಂತ ಅಬದ್ಧ. ಇಬ್ಬರನ್ನೂ ಶಿಷ್ಯರೆಂದು ಹೇಳಿ, ಒಪ್ಪಿ, ಆ ಶಿಷ್ಯರು ಗುರುಗಳಾದ ಶ್ರೀ ವಾದಿರಾಜರ ಆಜ್ಞೆ ಮೀರಬೇಕೆಂದು ಹೇಳಿದರೆ ಅಬದ್ಧವಲ್ಲವೇ: ದೃಶ್ಯರಾಗಿದ್ದಾಗ, ಶ್ರೀವಾದಿರಾಜರು, ಯತ್ನದಿಂದ ಸ್ವರೂಪ ಮುಚ್ಚಿಕೊಳ್ಳುತ್ತಿದ್ದರು. ಅವರ ಶಿಷ್ಯರು ಯಾಕೆ ಗುರುಗಳ ಇಚ್ಛೆಗೆ ವಿರುದ್ಧ ನಡೆದು, ದ್ರೋಹ ಮಾಡುತ್ತಾರೆ? ಭೂತರಾಜರ ನಿದರ್ಶನ ತಿಳಿದು ಭಯಪಡುವುದಿಲ್ಲವೇ ? ಶ್ರೀ ವಾದಿರಾಜರು ಸ್ವರೂಪ ಮುಚ್ಚಿಕೊಂಡು, ವಿನಯ ಪ್ರದರ್ಶನ ಮಾಡುತ್ತಿರುವಾಗ, ಅವರ ಆಜ್ಞೆಯಂತೇ ವ್ಯಾಖ್ಯಾನ ಬರೆದಿದ್ದಾರೆ. ಇದೇ ಅವರ ಭಾವ. ಇನ್ನು ಲೇಖಕರಂತೆ ತರ್ಕಪ್ರಯೋಗ ನಾವೂ ಮಾಡಬಹುದು. ಶ್ರೀಕೃಷ್ಣನ ಜೊತೆಯೇ ಬೆಳೆದು ವಾಸ ಮಾಡಿದ ಬಲರಾಮನು ಶೇಷಾವತಾರಿಯಾದರೂ, ಶ್ರೀಕೃಷ್ಣನನ್ನು ಸ್ಯಮಂತಕಮಣಿಯ ಕಳ್ಳನೆಂದು ಭಾವಿಸಿದನು. ಹಾಗಿದ್ದರೆ ಶ್ರೀಕೃಷ್ಣ ಕಳ್ಳನೇ? ಶ್ರೀ ಹನುಮಂತ ದೇವರ ಜೊತೆ ದೀರ್ಘಕಾಲ ಬಾಳಿದ ಸುಗ್ರೀವನು, ಅವರ ಋಜುತ್ವ ತಿಳಿಯಲಿಲ್ಲ. ಹೇಳಲೂ ಇಲ್ಲ. ಶ್ರೀ ಭೀಮಸೇನ ದೇವರಿಂದಲೇ ಉತ್ಕರ್ಷ ಹೊಂದಿದ ಯುಧಿಷ್ಠಿರನು, ಅವರನ್ನು ಹೊಟ್ಟೆಬಾಕನೆಂದು ಹೇಳಿಬಿಟ್ಟನು. ಅವರ ಋಜುತ್ವ ತಿಳಿಯಲಿಲ್ಲ. ಹೇಳಲೂ ಇಲ್ಲ. ಆದ್ದರಿಂದ ಶ್ರೀ ಹನುಮಂತ ಭೀಮಸೇನ ದೇವರು ಋಜುಗಳಲ್ಲ ಎಂದು ಹೇಳಿಬಿಡಬಾರದು. ಹೀಗೆ ಕೇವಲ ತರ್ಕ ಮಾಡಬಾರದು. ಶ್ರೀ ಹನುಮಂತ ದೇವರ, ಶ್ರೀ ಭೀಮಸೇನ ದೇವರ ಋಜುತ್ವವು ಸುಗ್ರೀವ ಯುಧಿಷ್ಠಿರರ ಅಭಿಪ್ರಾಯದಿಂದ ಕೆಡುವುದಿಲ್ಲ. ಆ ತತ್ವವು ಆಗಮಸಿದ್ಧವೆಂದು ಶ್ರೀಮದಾಚಾರ್ಯರು ಸಿದ್ಧಾಂತ ಮಾಡಿ ತೋರಿಸಿದ್ದಾರೆ. ಜ್ಞಾನಿಗಳಾದ ಶಿಷ್ಯರು, ಗುರುಗಳಿಚ್ಛಾನುಸಾರಿ ಪ್ರವೃತ್ತಿ ಮಾಡುವರು. ಇಲ್ಲಿ ತಿಳಿಯಬೇಕಾದ್ದೇನೆಂದರೆ, ಸುರೋತ್ತಮರೇ ಯುಕ್ತಿಮಲ್ಲಿಕಾ ವ್ಯಾಖ್ಯಾನಮಾಡುವಾಗ, ಇಂತಹ ಕೃತಿರಚನೆಯು ಮನುಷ್ಯಮಾತ್ರರಿಂದ ಸಾಧ್ಯವೇ ಇಲ್ಲವೆಂದು ಸಾರಿದ್ದಾರೆ. ಆದ್ದರಿಂದ ಲೇಖಕರು ಹೇಳಿದ್ದು ಸುಳ್ಳೆಂದೂ, ನಿರಾಧಾರ ಯುಕ್ತಿಯೆಂದೂ ತಿಳಿಯಬೇಕು.

**ಪ್ರಶ್ನೆ : ಶ್ರೀ ವಾದಿರಾಜರ ಸ್ವಂತ ವಾಕ್ಯ ವಿರೋಧ ಬರುವುದರಿಂದ ವಾದಿರಾಜರ ಮಹಿಮಾ ಬೋಧಕ ಪುರಾಣ ವಾಕ್ಯ ಮೊದಲಾದವುಗಳೆಲ್ಲಾ ಪ್ರಕ್ಷಿಪ್ತ ಅಂತ ಲೇಖಕರು ಸಾರಿದ್ದಾರೆ. ಅದು ಸರಿಯೇ?**

ಉತ್ತರ: ಸರಿಯಲ್ಲ. ನಮ್ಮ ಮನೆಯಲ್ಲಿ ಕಿಟಕಿಯಿಲ್ಲ, ಬೆಳಕು ಬರುವುದಿಲ್ಲ, ಅದರಿಂದ ಸೂರ್ಯನೇ ಇಲ್ಲ ಅಂತ ಹೇಳಿದಂತಾಯಿತು. ಶ್ರೀ ವಾದಿರಾಜರ ಸ್ವಂತ ವಾಕ್ಯಗಳು ಅವರ ಋಜುತ್ವ ವಿರೋಧಿಯೆಂದು ಲೇಖಕರು ಕೇವಲ ತರ್ಕ ಪ್ರಯೋಗ ಮಾಡಿದ್ದಾರಷ್ಟೇ. ಅದೊಂದೇ ಕಾರಣ ಅವರು ಕೊಟ್ಟಿರುವುದು. ಆ ವಾಕ್ಯಗಳೆಲ್ಲಾ ಋಜುತ್ವವನ್ನು ಬಾಧಿಸುವುದಿರಲಿ, ಅರ್ಥಾಂತರದಿಂದ ಅವರ



ಋಜುತ್ವವನ್ನೇ ಬೋಧಿಸುತ್ತವೆ ಎಂತ ನಾವು ನಿರೂಪಿಸಿದ್ದೇವೆ. ಶ್ರೀ ವಿಜಯದಾಸರು ತಮ್ಮ ಸುಳಾದಿಯಲ್ಲಿ, '**ನಿಜವಾಗಿ ಬೊಮ್ಮಾಂಡ ಪುರಾಣ ಸಾಧಕದಿಂದ ಅಜನ ಪದ ಸಲುವುದು ಲೇಶ ಸಂಶಯ ಬ್ಯಾಡಿ**' ಅಂತ ಹೇಳಿದ್ದಾರೆ. ಅಲ್ಲಿ ಆ ಪುರಾಣ ವಾಕ್ಯ ನಿಜವೆಂದೂ, ಸಾರಿದ್ದಾರೆ. ಮಧ್ವಮತದ ಅಪರೋಕ್ಷಜ್ಞಾನಿಗಳೆಲ್ಲಾ, ಋಜುತ್ವವನ್ನು ಅಂಗೀಕರಿಸಿರುವುದರಿಂದ, ಋಜುತ್ವ ಬೋಧಕ ಪುರಾಣ ವಾಕ್ಯಗಳೆಲ್ಲಾ ನಿಜವಾಗಿ ಇರುತ್ತವೆಯೆಂದು ತಿಳಿಯಿರಿ. ಶ್ರೀ ವಾದಿರಾಜರು *'ಇಂತಹ ದೇವತೆ, ಇಂತಹ ಋಷಿ ಅವತಾರ'* ಅಂತ ಹೇಳುವ ಒಂದೇ ಒಂದು ಶುಭ ಆಗಮ ವಾಕ್ಯ ಅಥವಾ ಪುರಾಣವಾಕ್ಯವನ್ನು ಲೇಖಕರು ತೋರಿಸಲಿಲ್ಲ. ತೋರಿಸಲು ಸಾಧ್ಯವೂ ಇಲ್ಲ. ಆದ್ದರಿಂದ ಆಗಮವಾಕ್ಯಗಳಲ್ಲಿ ವಿರೋಧ ಬರಬಹುದು ಅನ್ನುವ ಪ್ರಸಂಗವೇ ಇಲ್ಲ. ಶ್ರೀ ವಾದಿರಾಜರ ಸ್ವಂತ ವಾಕ್ಯಗಳಿಂದ ಯುಕ್ತಿ ಚಾಲನೆ ಮಾಡಿ. ಆ ಅನುಮಾನಗಳಿಂದ, ನಿರ್ದೋಷ ಆಗಮವನ್ನು ಹೊಡೆದುಹಾಕಲು ಯತ್ನಿಸಿದ್ದಾರೆ. ಲೇಖಕರು ತಮ್ಮ ಅನುಮಾನಗಳಿಗೆ ಆಗಮ ಸಹಾಯ ತೋರಿಸಿಲ್ಲ. ಆ ಯುಕ್ತಿಗಳೆಲ್ಲಾ ನಿರ್ಮೂಲ ಯುಕ್ತಿಗಳು. ಅವೆಲ್ಲಾ ಬಲವಿಲ್ಲದ ನರಿಯ ಮರಿಗಳಿದ್ದಂತೆ. ನಿರ್ದೋಷ ಆಗಮ ವಾಕ್ಯಗಳಿಂದ, ನೂರಾರು ಬೇರೆ ವಾಕ್ಯಗಳಿಂದ ನಿರಾತಂಕವಾಗಿ ಸಿದ್ಧವಾಗುವ ಋಜುತ್ವವು, ಯೌವನಾರೂಢ ಸಿಂಹವಿದ್ದಂತೆ ಎಂದು ತಿಳಿಯಿರಿ. ಕ್ಷುದ್ರಾನುಮಾನ ಪ್ರಯೋಗ ಮಾಡಿ, ಆಗಮವನ್ನೇ ಕೆಡಿಸಲು ನೋಡುವುದು ಶ್ರೀಮದಾಚಾರ್ಯರ ಮತಕ್ಕೆ ಅತ್ಯಂತ ವಿರುದ್ಧ. ಲೇಖಕರು ಪುರಾಣವಾಕ್ಯ ನಿರಾಕರಿಸಲು ಕೊಟ್ಟ ಒಂದೇ ಒಂದು ಕಾರಣವನ್ನು ಸರಿ ಇಲ್ಲವೆಂದು ನಾವು ನಿರೂಪಿಸಿದ್ದೇವೆ. ಭಗವದನುಗ್ರಹದಿಂದ, ಅಂತಹ ಕೆಲವು ಪುರಾಣ ವಾಕ್ಯಗಳನ್ನು ಆಗಮ ವಾಕ್ಯಗಳನ್ನು ಮೂಲಕೋಶಗಳಿಂದ ತೆಗೆದು ತೋರಿಸುತ್ತೇವೆ.

**ಪ್ರಶ್ನೆ: ಲೇಖಕರು ಶ್ರೀ ವಾದಿರಾಜರ ವೃಂದಾವನದಲ್ಲಿ ಹನುಮ ಭೀಮ ಮಧ್ವರು ಇರುವುದಕ್ಕೂ ಋಜುತ್ವಕ್ಕೂ ಸಂಬಂಧವಿಲ್ಲ, ದೇವರ ಸನ್ನಿಧಾನಕ್ಕೋಸ್ಕರ ಆ ಕೆತ್ತನೆ ಅಂತ ಬರೆದಿದ್ದಾರೆ. ಅದು ಸರಿಯೇ?**

ಉತ್ತರ: ಸರಿಯಲ್ಲ, ಶ್ರೀ ವಾದಿರಾಜರು ತಮ್ಮ ಆವಾಸವಾಗುವ ಪಂಚವೃಂದಾವನಗಳ ಸನ್ನಿಧಿಯನ್ನು, ಮುಂದೆ ಶ್ರೀ ವೇದವ್ಯಾಸರ ಪ್ರತಿಮೆಯನ್ನು ತಾವೇ ನಿರ್ಮಾಣ ಮಾಡಿಸಿ, ಪ್ರತಿಷ್ಠಿಸಿ, ಅನೇಕ ವರ್ಷಗಳ ಕಾಲ ಆ ಸನ್ನಿಧಿಯನ್ನು ಪೂಜಿಸಿದರೆಂದೂ ಐತಿಹ್ಯವಿದೆ. ಎದುರು ದ್ವಾರವಿದ್ದಂತೆ ಕಟ್ಟಿಸಿದ ವೃಂದಾವನದಲ್ಲಿ ದಿವಸಾ ಕುಳಿತು ತಪಸ್ಸು ಮಾಡುತ್ತಿದ್ದರೆಂದೂ ಐತಿಹ್ಯವಿದೆ. ಅವರು ದೃಶ್ಯರಾಗಿದ್ದಂತೇ ವೃಂದಾವನ ಪ್ರವೇಶ ಮಾಡಿರುವರು. ತಮಗೆ ಮರಣವಿಲ್ಲವೆಂದು ವಾದಿರಾಜರು ಹೇಳಿಕೊಂಡಿದ್ದಾರೆ.

ಬೇರೆ ಯತಿಗಳ ವೃಂದಾವನದ ಮೇಲೆ ರಾಮ ಕೃಷ್ಣಾದಿ ಕೆತ್ತನೆಯನ್ನು ಆಮೇಲೆ ಕೆತ್ತಿಸುವುದಕ್ಕೂ, ಶ್ರೀ ವಾದಿರಾಜರು ತಾವೇ ನಿರ್ಮಾಣ ಮಾಡಿಸಿದ ವೃಂದಾವನದಲ್ಲಿ ಶ್ರೀ ಹನುಮಭೀಮಮಧ್ವರನ್ನು ಪ್ರತಿಷ್ಠಿಸಿ ಜೊತೆಗೆ, ಸಮಾನ ಎತ್ತರದಲ್ಲಿ ತಮ್ಮ ಪ್ರತೀಕ ಮಾಡಿಸಿಕೊಂಡಿದ್ದಕ್ಕೂ, ಅಜಗಜಾಂತರವಿದೆ. ಶ್ರೀ ವಾದಿರಾಜರು ತಮ್ಮ ಋಜುತ್ವವನ್ನು ಅದರಿಂದಲೇ ನಿರೂಪಿಸಿರುತ್ತಾರೆಂದು ತಿಳಿಯಿರಿ.

**ಪ್ರಶ್ನೆ: ರುಕ್ಮಿಣೀ ಪತ್ರವಾಹಕರು ಶ್ರೀ ವಾದಿರಾಜರು ಅನ್ನುವುದಕ್ಕೆ ಪ್ರಮಾಣವಿಲ್ಲ ಅಂದಿದ್ದಾರಲ್ಲ?**

ಉತ್ತರ: ಶ್ರೀ ರುಕ್ಮಿಣೀದೇವಿಯು ಶ್ರೀಕೃಷ್ಣದೇವರಿಗಾಗಿ ಕೊಟ್ಟ ಪತ್ರವನ್ನು ನಾವೇ ತಲುಪಿಸಿದ್ದು (ಪೂರ್ವ ಅವತಾರದಲ್ಲಿ) ಅಂತ ಶ್ರೀ ವಾದಿರಾಜರೇ ಹೇಳಿಕೊಂಡಿದ್ದಾರೆ. ಅಪರೋಕ್ಷಿ ದಾಸರ ಅನೇಕ ವಚನಗಳಿವೆ. ಋಕ್ಸಂಹಿತಾದಲ್ಲೂ ಇದೆ.

**ಪ್ರಶ್ನೆ: ಸೋದೆಯ ವೃಂದಾವನದಲ್ಲಿ ಸಮಪೂಜೆ ಮಾಡುವುದು ತಪ್ಪು ಅಂತ ಲೇಖಕರು ಬರೆದಿದ್ದಾರಲ್ಲಾ (ಪುಟ33)?**

ಉತ್ತರ: ಯಾವುದು ತಪ್ಪು? ತಪ್ಪು ಗ್ರಹಿಕೆ ಯಾರಿಗೆ? ವಿಚಾರಿಸಲಿ. ಶ್ರೀ ವಾದಿರಾಜರ ಸಾಕ್ಷಾತ್ ಶಿಷ್ಯರು, ಶ್ರೀ ವೇದವೇದ್ಯರು ದಿವ್ಯ ಜ್ಞಾನಿಗಳು. ಅವರು ಸಮಪೂಜೆಯ ಸಂಪ್ರದಾಯ ಪ್ರವರ್ತಿಸಿದವರು. ಅದು 400 ವರ್ಷದಿಂದ ನಿರಾತಂಕವಾಗಿ ನಡೆದು ಬಂದಿದೆ. ಉತ್ತರಾದಿ ಮಠದ ಸ್ವಾಮಿಗಳಾದ ಶ್ರೀ ಸತ್ಯಧರ್ಮರು, ಶ್ರೀ ಸತ್ಯಪರಾಕ್ರಮರು ಇನ್ನೂ ಅನೇಕ ಜ್ಞಾನಿಗಳು ಅದೇ ಸೋದೆಯ ವೃಂದಾವನ ಸನ್ನಿಧಾನದಲ್ಲಿ ಶ್ರೀ ವಾದಿರಾಜರನ್ನು ಸೇವಿಸಿ ಇಷ್ಟಾರ್ಥ ಪಡೆದಿದ್ದಾರೆ. ಶ್ರೀ ವಾದಿರಾಜರ ಋಜುತ್ವಕ್ಕೆ ಅವರೇ ನಿರ್ಮಿಸಿದ ವೃಂದಾವನವೂ ಜ್ಞಾಪಕವೆಂದು ಸಾಧಕವೆಂದು ಹೇಳುತ್ತೇವೇ ಹೊರತು ಅದೊಂದೇ ಋಜುತ್ವ ಸಾಧಕವೆಂದಲ್ಲ. ಅವರ ಋಜುತ್ವಸಾಧನೆಗೆ ಪ್ರಮಾಣರಾಶಿಯಿರುತ್ತದೆ.

**ಪ್ರಶ್ನೆ : ಶ್ರೀ ವಾದಿರಾಜರ ಸೇವೆಯಿಂದ ಆಗುವ ಇಷ್ಟಪ್ರಾಪ್ತಿಯು, ಅವರು ಋಜುಗಳೆಂದು ಸಾಧಿಸುವುದಿಲ್ಲವೆಂದು ಲೇಖಕರು ಬರೆದಿದ್ದಾರೆ. ಅದು ಸರಿಯೇ?**

ಉತ್ತರ: ಲೇಖಕರು ಭೂಮಿಯಲ್ಲಿ ಇಸ್ಲಾಂ, ಈಸಾಯಿ ಮುಂತಾದ ಅನ್ಯಥೋಪಾಸಕರಿಗೆ ಮಹಾ ಫಲಪ್ರಾಪ್ತಿಯೆಂದು ಹೇಳಿದ್ದಾರೆ. ಫಲಪ್ರಾಪ್ತಿಯಿದ್ದಾಗಲೀ, ಫಲಸಿಗದೇ ಇದ್ದಾಗಲೀ ಆ ಉಪಾಸನೆ ಸರಿಯೆಂದು ಹೇಳಲಿಕ್ಕೆ ಆಗುವುದಿಲ್ಲ ಅಂತಲೂ ಹೇಳಿದ್ದಾರೆ. ಇವೆರಡೂ ಪರಸ್ಪರ ವಿರುದ್ಧವಾಕ್ಯಗಳು. ಹೀಗೆ ಅವರಿಗೆ ಸ್ವವಾಕ್ಯವಿರೋಧ. ಇಲ್ಲಿ ತಿಳಿಯಬೇಕಾದ್ದೇನೆಂದರೆ, ಸದುಪಾಸನೆಯಿಂದ ಸತ್ಫಲಪ್ರಾಪ್ತಿ ಅಂತ ನಿಯಮವಿದ್ದರೂ ಪ್ರತ್ಯಕ್ಷ ಫಲಪ್ರಾಪ್ತಿ ಅಂತ ನಿಯಮವಿಲ್ಲ. ಇನ್ನು ಸಿಗುವ ಫಲದಲ್ಲಿ ಲೌಕಿಕ ಫಲಗಳೋ, ಪಾರಮಾರ್ಥಿಕ ಫಲಗಳೋ ವಿಚಾರಿಸಬೇಕು. ಸದುಪಾಸನೆಯಿಂದ ಪಾರಮಾರ್ಥಿಕ ಮಹಾಫಲಗಳು ಸಿಗುತ್ತವೆ ಎಂದು ಶ್ರೀ ಮಧ್ವಸಿದ್ಧಾಂತವಿದೆ. ಅನ್ಯಥಾ ಉಪಾಸನೆ ಬಿಡಿಸಿ ಸದುಪಾಸನೆಯನ್ನು ವಿಧಿಸುವುದೇ ಶ್ರೀಮದಾಚಾರ್ಯರ ಅವತಾರದ ಮುಖ್ಯ ಪ್ರಯೋಜನವೆಂದು ತಿಳಿಯಿರಿ. ಅನ್ಯಥಾ ಉಪಾಸನೆ ಮಾಡುವುದರಿಂದ ಫಲಪ್ರಾಪ್ತಿಯಿದೆ ಅನ್ನುವುದು ಶ್ರೀಮದಾಚಾರ್ಯರ ಮತಕ್ಕೆ ಅತ್ಯಂತ ವಿರುದ್ಧ. ಆ ರೀತಿ ದುರುಪಾಸನೆಯಿಂದ ಇಹಪರದಲ್ಲಿ ಹಾನಿ ಎನ್ನುವುದೇ ಸಿದ್ಧಾಂತ. ಸದುಪಾಸನೆಯಿಂದ ಲೌಕಿಕ ಪಾರಮಾರ್ಥಿಕ ಫಲಪ್ರಾಪ್ತಿ ಅನ್ನುವುದು ಶ್ರೀಮದಾಚಾರ್ಯರ ಸಿದ್ಧಾಂತ.

ಈ ರೀತಿಯ ತರ್ಕದಿಂದ ಲೇಖಕರಿಗೆ ಏನೂ ಪ್ರಯೋಜನವಿಲ್ಲ. ಅನ್ಯಥೋಪಾಸನೆಯಿಂದಲೂ ಫಲಪ್ರಾಪ್ತಿ, ದೇವರ ಭಕ್ತರಿಗೂ ಕಷ್ಟಾದಿಗಳ ದರ್ಶನ ಅಂತ ಅವರು ಹೇಳುವುದು ಒಳ್ಳೆಯದೇ. ಯಾಕೆಂದರೆ, ಅದರಿಂದ ಲೇಖಕರ ಈ ಯುಕ್ತಿಯಿಂದಲೇ, ಶ್ರೀ ವಾದಿರಾಜರು ಋಜುಗಳಲ್ಲ



ಅನ್ನುವುದೂ ಸಿದ್ಧವಾಗುವುದಿಲ್ಲ ಎಂದು ನಾವು ಹೇಳಬಹುದು. ಎರಡು ಅಲಗಿನ ಕತ್ತಿಯಂತೆ ಲೇಖಕರ ತರ್ಕವಿದೆ. ಯಾಕೆಂದರೆ, ಇಸ್ಲಾಂ ಮತದವರಿಗೂ ಮಹಾ ಫಲಪ್ರಾಪ್ತಿ ಅಂತ ಒಂದು ಕಡೆ ಹೇಳಿ, ಅಲ್ಲೇ ಶ್ರೀ ವಾದಿರಾಜರು ಋಜುಗಳಲ್ಲ ಅಂತ ಉಪಾಸನೆ ಮಾಡುವರಿಗೂ ಮಹಾಫಲ ಪ್ರಾಪ್ತಿಯಾಗಿದೆ ಅಂತ ಹೇಳಿದ್ದಾರೆ ಲೇಖಕರು. ಇದರಿಂದ ಋಜುಗಳಲ್ಲ ಅನ್ನುವುದು ಅನ್ಯಥೋಪಾಸನೆಯೇ ಅಂತ ಅದರಿಂದಲೇ ಸಿದ್ಧವಾಗುವುದಿಲ್ಲವೇ ? ಇದರಿಂದ ಲೇಖಕರಿಗೇ ಸ್ವವಾಕ್ಯ ವಿರೋಧ; ತಾವು ಹಿಡಿದ ಕತ್ತಿ, ಪರರನ್ನು ಕತ್ತರಿಸುವ ಮೊದಲು, ತಮ್ಮ ಕೈಯನ್ನೇ ಕತ್ತರಿಸಿದಂತೆ. ಇಲ್ಲಿ ತಿಳಿಯಬೇಕಾದ್ದೇನೆಂದರೆ, ತರ್ಕದಿಂದ ವಾದಿರಾಜರ ಋಜುತ್ವ ಸಿದ್ಧಿಯಾಗುವುದಿಲ್ಲ, ನಿರ್ದೋಷ ಆಗಮ ವಾಕ್ಯದಿಂದ ಆಗುತ್ತದೆ.

**ಪ್ರಶ್ನೆ: ಶ್ರೀ ವಾದಿರಾಜರು ತಾವು ಋಜುಗಳಲ್ಲದಿದ್ದರೂ, ತಮ್ಮ ಭಕ್ತರು ಮಾಡುವ ಋಜುತ್ವ ಉಪಾಸನೆಯನ್ನು, ಅವರಿಗೆ ನರಕಾದಿ ಅನರ್ಥ ಆಗುತ್ತದೆ ಎಂದು ಗೊತ್ತಿದ್ದರೂ, ಅನ್ಯದೇವತೆಗಳು ಸಹಿಸುವಂತೆ, ಸಹಿಸಿದ್ದಾರೆ ಅಂತ ಲೇಖಕರು ಬರೆದಿದ್ದಾರೆ. ಅದು ಸರಿಯೇ ?**

ಉತ್ತರ: ಸರಿಯಲ್ಲ. ಅತ್ಯಂತ ಅಬದ್ಧ. ಪ್ರಥಮ ಪುಟದಲ್ಲಿ ಶ್ರೀ ವಾದಿರಾಜರು ಗುರುಶ್ರೇಷ್ಠರು. ಲಕ್ಷಾವಧಿ ಭಕ್ತರ ಉದ್ಧಾರಕರು ಅಂತ ಒಂದು ವಾಕ್ಯವನ್ನು ಹೇಳಿ, ಇಲ್ಲಿ ಅದೇ ಶ್ರೀ ವಾದಿರಾಜರು ಭಕ್ತರಿಂದ ಅನ್ಯಥೋಪಾಸನೆ ಮಾಡಿಸಿ ಹಾನಿ ಹೊಂದಿಸುತ್ತಾರೆ ಅಂತ ಹೇಳಿದ್ದಾರೆ. ಶ್ರೀ ವಾದಿರಾಜರು ಮಹಾಗುರುಗಳೆಂದೂ ಒಪ್ಪಿ ಅವರು ನರಕಾದಿ ಅನರ್ಥ ಫಲ ಕೊಡಿಸುತ್ತಾರೆ ಅನ್ನುವುದು ಲೇಖಕರಿಗೆ ಸ್ವವಾಕ್ಯ ವಿರೋಧ. ಮಹಾಗುರುಗಳು ಜ್ಞಾನವನ್ನು ಅದರಿಂದ ಭಗವಂತನ ಪರಮಾನುಗ್ರಹವನ್ನೂ, ಮೋಕ್ಷವನ್ನೂ ಕೊಡಿಸುವವರು. ಅಜ್ಞಾನ ನಿರಾಕರಣೆ ಮಾಡಿ ಜ್ಞಾನ ಕೊಟ್ಟು ಉದ್ಧರಿಸುವರೆಂದು ಹೇಳಿ, ಈಗ ಅದೇ ಶ್ರೀ ವಾದಿರಾಜರು ಅಧಃಪತನ ಹೊಂದಿಸುತ್ತಾರೆ ಅಂದರೆ ಅದು ಶ್ರೀ ವಾದಿರಾಜರಿಗೆ ಲೇಖಕರು ಮಾಡಿದ ದೊಡ್ಡ ದ್ರೋಹ. ಸಾಮಾನ್ಯ ಗುರುಗಳೂ ಹಾಗೆ ಶಿಷ್ಯರಿಗೆ ಹಾನಿ ಮಾಡುವುದಿಲ್ಲ. ಹಾಗೆ ಶಿಷ್ಯರಿಗೆ ಹಾನಿ ಮಾಡುವವರು, ಎಲ್ಲಾದರೂ ಗುರುಗಳೆನಿಸಿಕೊಳ್ಳುತ್ತಾರೆಯೇ? ಎಂದಿಗೂ ಇಲ್ಲ. ಇನ್ನು ಲೋಕಗುರುಗಳಾದ ಶ್ರೀ ವಾದಿರಾಜರು ಹಾಗೆ ಮಾಡುತ್ತಾರೆಯೇ? ಇಂತಹ ತರ್ಕ ಮಾಡಲೇಬಾರದು.

**ಪ್ರಶ್ನೆ: ಶ್ರೀ ವೇದನಿಧಿಗಳು ಸ್ಥಾಪಿಸಿದ ಅಣುವೃಂದಾವನಾಖ್ಯಾನ ಶಿಲಾ ಲೇಖವನ್ನು ಅವರೇ ಸ್ಥಾಪಿಸಿದ್ದು ಅಂತ ಹೇಳಲಿಕ್ಕೆ ಏನೂ ಆಧಾರವಿಲ್ಲ ಅಂತ ಲೇಖಕರು ಹೇಳಿದ್ದಾರೆ. ಅದು ಸರಿಯೇ?**

ಉತ್ತರ: ಸರಿಯಲ್ಲ. ಸುಳ್ಳು. ಶ್ರೀವೇದನಿಧಿತೀರ್ಥರ ಸಾಕ್ಷಾತ್ ಶಿಷ್ಯರಾದ ಶ್ರೀ ರಾಮಚಂದ್ರಾಚಾರ್ಯರು ಶ್ರೀವಾದಿರಾಜ ಗುರುವರ ಚರಿತಾಮೃತವನ್ನು ರಚಿಸಿದವರು. ಅದರಲ್ಲಿ ವೃಂದಾವನಾಖ್ಯಾನದ ಉತ್ಪತ್ತಿಯ ವಿಷಯವನ್ನು ಚೆನ್ನಾಗಿ ನಿರೂಪಿಸಿದ್ದಾರೆ. ಲೇಖಕರು ಆ ಗ್ರಂಥವನ್ನು ನೋಡಿಲ್ಲವೆಂದು ಕಾಣುತ್ತದೆ. ಪ್ರಬಲ ಐತಿಹ್ಯವನ್ನು ಗಣಿಸದೇ ಲೇಖಕರು ಹೀಗೆ ಹೇಳಿದ್ದಾರೆ.

**ಪ್ರಶ್ನೆ: ಸೋದೆ ಮಠದಲ್ಲಿ ಮಾಡುವ ಶ್ರೀ ವಾಯುದೇವರ ಜೊತೆ ಶ್ರೀ ವಾದಿರಾಜರ ಸಮಪೂಜೆಯನ್ನು ದುಸ್ಸಂಪ್ರದಾಯವೆಂದು ಲೇಖಕರು ಬರೆದಿರುವುದು ಸರಿಯೇ?**

ಉತ್ತರ : ಸರಿಯಲ್ಲ. ಶ್ರೀ ವಾದಿರಾಜರು ತಮ್ಮ ಅನಾದಿ ಯೋಗ್ಯತೆಯಿಂದಲೂ, ಪ್ರಕೃತದಲ್ಲಿ ಶ್ರೀ ಹಯಗ್ರೀವ ದೇವರ ಅನುಗ್ರಹದಿಂದ ಬಂದ ಬ್ರಹ್ಮ ವಾಯು ವೈಭವ ರೂಪ ಪದವೀ ಆರೋಹಣದಿಂದಲೂ, ಸದೃಶಕಾರ್ಯವೈಭವ ದಿಂದಲೂ ಶ್ರೀ ವಾಯುದೇವರಿಗೆ ಸಮರೆನಿಸಿದ್ದಾರೆ. ಅದರಿಂದಲೇ ಅವರ ಸಮ ಪೂಜೆಯು ವಿಹಿತವಾಗಿದೆ. ಶ್ರೀ ವಾದಿರಾಜರೇ ಸಮಪೂಜೆಯು ತಮಗೆ ಸಮ್ಮತವೆಂದು ಉಪದೇಶಿಸಿರುತ್ತಾರೆ. ಹಾಗೆ ಉಪಾಸನೆ ಮಾಡಿ ಅನೇಕ ಮಹನೀಯರು ಸಿದ್ಧಿಗಳನ್ನು ಪಡೆದಿರುತ್ತಾರೆ. ಶ್ರೀ ವೇದವೇದ್ಯರು ದಿವ್ಯಗ್ರಂಥ ರಚನಾ ಮಾಡಿದವರು, ಮಹಾಜ್ಞಾನಿಗಳು, ಪರಮಾಪ್ತರು. ಅವರೂ ಮತ್ತು ಅವರ ಶಿಷ್ಯರಾದ ಶ್ರೀವೇದನಿಧಿಗಳು ದುಸ್ಸಂಪ್ರದಾಯ ಪ್ರವರ್ತನೆ ಮಾಡುವ ಭ್ರಾಂತರಲ್ಲವೆಂದು ತಿಳಿಯಬೇಕು. *'ಕಿಂ ಮೂಢಾಃ ಪೂರ್ವಸೂರಯಃ'* ಅನ್ನುವ ಶ್ರೀ ವಾದಿರಾಜರ ವಾಕ್ಯವೇ ಇನ್ನೊಂದು ಸಮಾಧಾನ ಸೂಚಿಸುತ್ತದೆ: ಪೂರ್ವಕಾಲದವರೆಲ್ಲಾ ಮೂಢರೇ? ನಾವು ಮಾತ್ರ ಬುದ್ಧಿವಂತರೇ?

**ಪ್ರಶ್ನೆ : ಶ್ರೀವಿಜಯದಾಸರ ಸುಳಾದಿಯ ಒಂದು ಭಾಗ ಮಾತ್ರ ಉದಾಹರಿಸಿ, ಶ್ರೀ ವಾದಿರಾಜರು ಋಜುಗಳಲ್ಲವೆನ್ನುವುದೇ ಶ್ರೀ ವಿಜಯದಾಸರಿಗೆ ಸಮ್ಮತ ಎಂದಿದ್ದಾರಲ್ಲ?**

ಉತ್ತರ : ಶ್ರೀ ವಿಜಯದಾಸರು, ವಾದಿರಾಜರ ಋಜುತ್ವವನ್ನು ಉದ್ಘೋಷಿಸಿ, ಅನೇಕ ಪದ ಸುಳಾದಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ನಿರವಕಾಶವಾಗಿ ಋಜುತ್ವವನ್ನು ಸಾರಿರುತ್ತಾರೆ. ಶ್ರೀ ವಿಜಯದಾಸರ ಶಿಷ್ಯರೂ, ಗುರುಗಳಂತೇ, ಋಜುತ್ವ ಬೋಧಕ ಅನೇಕ ಪದಸುಳಾದಿಗಳನ್ನು ರಚಿಸಿದ್ದಾರೆ. ಆದ್ದರಿಂದ ಶ್ರೀ ವಿಜಯದಾಸರಿಗೆ ವಾದಿರಾಜರು ಋಜುಗಳಲ್ಲ ಅನ್ನುವುದೇ ಸಮ್ಮತ ಅಂತ ಹೇಳುವುದು ತಪ್ಪು, ಅದು ಶ್ರೀ ವಿಜಯ ದಾಸರಿಗೆ ಮಾಡುವ ದ್ರೋಹವೆನಿಸುತ್ತದೆ. ಲೇಖಕರು ಉದಾಹರಿಸಿದ ಸುಳಾದಿಯ ಖಂಡದಲ್ಲಿ ಸ್ವರೂಪದ ಪ್ರಸಕ್ತಿಯೇ ಇಲ್ಲ. ಗುರುಶಿಷ್ಯ ಪರಂಪರೆ ವಿಚಾರ ಅದರಲ್ಲಿದೆ.

**ಪ್ರಶ್ನೆ: ಶ್ರೀ ವಾದಿರಾಜರಿಗೆ ಜಯತೀರ್ಥರಲ್ಲಿ ಅಪಾರ ಭಕ್ತಿ, ಅನನ್ಯ ಸಾಧಾರಣ ಗೌರವ, ಮಧ್ವಶಿಷ್ಯರಲ್ಲಿ ಅತಿವಿನಮ್ರತೆ, ತ್ರಿವಿಕ್ರಮ ಪಂಡಿತರಲ್ಲಿ ತುಂಬು ಆದರ, ವಾಯು ಸ್ತುತಿಯಲ್ಲಿ ಆಳವಾದ ಶ್ರದ್ಧೆಯೂ ಇರುವುದರಿಂದ, ಅವರು ಋಜುಗಳಲ್ಲ ಅಂತ ಲೇಖಕರು ಬರೆದಿದ್ದಾರೆ. ಅದು ಸರಿಯೇ?**

ಉತ್ತರ : ಸರಿಯಲ್ಲ. ಇಂತಹ ಪದಗಳ ವಾಗಾಡಂಬರದಿಂದ ಏನೂ ಪ್ರಯೋಜನವಿಲ್ಲ. ಶ್ರೀ ವಾದಿರಾಜರು ಯಾವ ಗ್ರಂಥದಲ್ಲೂ ಶ್ರೀಜಯತೀರ್ಥರಿಗೆ ಕಂಠತಃ ನಮಸ್ಕಾರ ಹೇಳಿಲ್ಲ. ಗುರ್ವರ್ಥದೀಪಿಕೆಯಲ್ಲಿ, ಟೀಕೆಯನ್ನು ವಿಮರ್ಶಿಸಿಯೂ ಇದ್ದಾರೆ. ಜಯತೀರ್ಥರಿಗೆ ಗೌರವ ಕೊಡುವವರೆಲ್ಲರೂ, ಅವರಿಗಿಂತ ಸ್ವರೂಪದಲ್ಲಿ ಕಮ್ಮಿ ಎನ್ನುವುದು ಶುಷ್ಕ ತರ್ಕ. ಅದರಿಂದ ಋಜುತ್ವ ಸಿದ್ಧಿಯಾಗಲೀ ನಿರಾಕರಣೆಯಾಗಲೀ ಆಗುವುದಿಲ್ಲ. ಶ್ರೀ ಸತ್ಯಧರ್ಮರು ರುದ್ರಾಂಶರೆಂದು ನಂಬಿಕೆ



ಇದೆ. ಅವರು ಶ್ರೀಜಯತೀರ್ಥರಿಗೆ ಗೌರವ ಕೊಟ್ಟಿಲ್ಲವೇನು?

**ಪ್ರಶ್ನೆ : 'ನಿರವಕಾಶ ಪ್ರಬಲ ಪ್ರಮಾಣಗಳಿಂದ ಋಜುತ್ವವು ಸಿದ್ಧಿಯಾಗುವುದೇ ಇಲ್ಲವೆ ಎಂದು ಪ್ರಾಮಾಣಿಕ ವಿಜಿಜ್ಞಾಸೆಯಿಂದ ನಿರ್ಣಯಿಸಬೇಕೆಂಬುದೇ ನಮ್ಮ ಅಭಿಪ್ರಾಯ' ಅಂತ ಲೇಖಕರು ಹೇಳಿದ್ದಾರಲ್ಲ?**

ಉತ್ತರ : ಆ ಪ್ರಮೇಯವು ಸರಿ; ಆದರೆ ಲೇಖಕರೇ ಹಾಗೆ ನಡೆದುಕೊಂಡಿಲ್ಲ. ಲೇಖಕರು ಅನೇಕ ಪ್ರಬಲ ಪ್ರಮಾಣಗಳನ್ನು ಉಪೇಕ್ಷಿಸಿದ್ದಾರೆಂದು ನಿರೂಪಿಸಿದ್ದೇವೆ. ಶ್ರೀ ವಾದಿರಾಜ ಸ್ವಾಮಿಗಳ ಋಜುತ್ವ ಪ್ರಮೇಯ ಸಾಧಿಸಿಕೊಡುವ, ಪ್ರತ್ಯಕ್ಷ, ಆಗಮ, ಅನುಮಾನ ಪ್ರಮಾಣ ರಾಶಿಯಿದೆಯೆಂದು ತಿಳಿಯಿರಿ. ಲೇಖಕರು ಹೇಳಿದ ಅನುಮಾನಗಳು ಬಲಹೀನ ಯುಕ್ತಿಗಳು. ಋಜುತ್ವ ಸಾಧಕವಾದ ನೂರಾರು ಯುಕ್ತಿಗಳಿವೆ.

**ಪ್ರಶ್ನೆ :ಋಜುತ್ವ ಸಾಧಕವಾದ ಒಂದೆರಡು ಯುಕ್ತಿಗಳನ್ನು ವಿವರಿಸಬೇಕು.**

ಉತ್ತರ : ಶ್ರೀ ವಾದಿರಾಜರಿಗೆ ಹಯಗ್ರೀವ ದೇವರು ನಿತ್ಯದಲ್ಲಿ ಪ್ರತ್ಯಕ್ಷರಾಗಿ ವೇದಾರ್ಥಗಳನ್ನು ಉಪದೇಶಿಸಿದ್ದಾರೆ. ಬ್ರಹ್ಮದೇವರಿಗೆ ನಿತ್ಯದಲ್ಲಿ ಉಪದೇಶಿಸಿದಂತೆ. ಅದು ಋಜುತ್ವ ಸಾಧಕವಾದ ಯುಕ್ತಿ. ವಾದಿರಾಜರ ಚರಿತೆ, ಆಶ್ಚರ್ಯಕರ ರೀತಿಯಲ್ಲಿ ಶ್ರೀಮಧ್ವಾಚಾರ್ಯರ ಚರಿತೆಯನ್ನು ಹೋಲುತ್ತದೆ. ಅದೂ ಋಜುತ್ವ ಸಾಧಕವಾದ ಯುಕ್ತಿ. ಶ್ರೀ ಮಧ್ವಾಚಾರ್ಯರು ರುದ್ರಾದಿದೇವತಾಸೇವ್ಯರು. ಶ್ರೀ ವಾದಿರಾಜರು ಭಾವಿ ರುದ್ರಾದಿದೇವತಾಸೇವ್ಯರು. ಅದೂ ಋಜುತ್ವ ಸಾಧಕವಾದ ಯುಕ್ತಿ. ಈ ಯುಕ್ತಿಗಳಿಗೆ ವಾಕ್ಯಸಹಾಯವಿದೆಯೆಂದು ತಿಳಿಯಿರಿ.

**ಪ್ರಶ್ನೆ :ಪ್ರತ್ಯಕ್ಷ ಪ್ರಮಾಣ ವಿವರಿಸಬೇಕು.**

ಉತ್ತರ:ಶ್ರೀ ವಾದಿರಾಜರು ತಮ್ಮ ತಾಯಿಗೆ ಮಾಡಿಸಿಕೊಟ್ಟ ಅವರ ಪ್ರತಿಮೆ ಸಂಸ್ಥಾನದಲ್ಲಿದೆ. ಆ ಪ್ರತಿಮೆ ಸಮಸ್ತ ಶುಭಲಕ್ಷಣ ಲಕ್ಷಿತವಾಗಿದೆ. ಅದು ಶ್ರೀ ವಾದಿರಾಜರ ಋಜುತ್ವ ಸಾಧಕ ಪ್ರತ್ಯಕ್ಷ ಪ್ರತಿನಿಧಿಯೆಂದು ತಿಳಿಯಿರಿ. ಯೋಗಿ ಪ್ರತ್ಯಕ್ಷವೂ ಇದೆ.

## ಉಪಸಂಹಾರ:

ಲೇಖಕರು ಶ್ರೀ ವಾದಿರಾಜರು ಋಜುಗಳಲ್ಲವೆಂದು ಶುಷ್ಕ ತರ್ಕ ಪ್ರಯೋಗ ಮಾಡಿದರೂ, ಅವರ ನಿಜ ಸ್ವರೂಪ ಏನೆಂದು ಹೇಳಲಿಲ್ಲ. ಅದರಿಂದ ಆ ಪುಸ್ತಕದಿಂದ ವಾಚಕರಿಗೆ ಏನೂ ಪ್ರಯೋಜನವಿಲ್ಲ. ಗುಡ್ಡ ಅಗೆದಾಗ ಇಲಿ ಸಿಕ್ಕಿತು ಎನ್ನುವಂತಾಗುತ್ತದೆ. ಶ್ರೀ ವಾದಿರಾಜರನ್ನು ಪೂಜಿಸಲು, ಅವರು ಯಾರೆಂದು ತಿಳಿಯಬೇಡವೇ?

ಇಲ್ಲಿ ತಿಳಿಯಬೇಕಾದ್ದೇನೆಂದರೆ, ಆಗಮ ಪ್ರಮಾಣದಿಂದ ಸ್ವರೂಪ ನಿರ್ಣಯ ಮಾಡಬೇಕೆಂಬುದು ಮಧ್ವಸಿದ್ಧಾಂತವು. ಆಗಮವೆಂದರೆ, ಶ್ರೀಮದಾಚಾರ್ಯರು ಪ್ರಮಾಣವೆಂದು ಒಪ್ಪಿರುವ ಶಾಸ್ತ್ರ. ಆ

ಚೌಕಟ್ಟಿನಲ್ಲಿ ವಾದಿರಾಜರ ಋಜುತ್ವ ಸಾಧಕ ನೂರಾರು ಪ್ರಮಾಣಗಳಿವೆ. ಸಮಸ್ತ ವಾಕ್ಯಗಳಲ್ಲಿ ಸಮನ್ವಯ ಮಾಡಿದಾಗ, ಋಜುತ್ವ ಪ್ರಮೇಯವು ನಿರ್ಬಾಧಿತವಾಗಿ ಸಿದ್ಧಿಸುತ್ತದೆ. ಋಜುತ್ವ ಪ್ರಮೇಯ ಸಾಧಿಸಿಕೊಡುವ, ಪ್ರತ್ಯಕ್ಷ, ಆಗಮ, ಅನುಮಾನ ಪ್ರಮಾಣ ರಾಶಿಯಿದೆಯೆಂದು ತಿಳಿಯಿರಿ.

ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ಶ್ರೀ ಸತ್ಯಧರ್ಮ ಸ್ವಾಮಿಗಳು, ಶ್ರೀ ಸತ್ಯಪರಾಕ್ರಮ ತೀರ್ಥರು ಮೊದಲಾದವರು ಸಾಮಾನ್ಯರೇ? ಮಹಾಮಹಿಮರು. ಅಂತಹ ಅನೇಕ ಅಪರೋಕ್ಷ ಜ್ಞಾನಿಗಳು ಮತ್ತು ಯತಿಗಳಿಂದ ಮಾನ್ಯವಾಗಿ ಮತ್ತು ಉಪಾಸನೆ ಮಾಡಲ್ಪಟ್ಟದ್ದಾಗಿ, ಶ್ರೀ ವಾದಿರಾಜರ ಋಜುತ್ವವು ಶಿಷ್ಟ ಪರಂಪರಾ ಗೃಹೀತತ್ವ ಎಂಬ ಬಲವನ್ನೂ ಹೊಂದಿದೆ ಎಂದು ತಿಳಿಯಿರಿ.

ಉತ್ತಮರಿಗೆ ಮಾಡುವ ಅಲ್ಪ ದ್ರೋಹವೇ ದೊಡ್ಡದಾಗಿ ಬಿಡುತ್ತದೆ ಅಂತ ಶ್ರೀಮಧ್ವಾಚಾರ್ಯರು ಹೇಳಿದ್ದಾರೆ. ಕುತೂಹಲಕ್ಕೆ ಶ್ರೀ ವಾದಿರಾಜರ ಆಜ್ಞೆ ಮೀರಿದಾಗ, ಶ್ರೀ ಭೂತರಾಜರಿಗೆ ಆದ ಪರಿಣಾಮ ತಿಳಿದು ಬರುವಾಗ, ಉದ್ದೇಶ ಪೂರ್ವಕವಾಗಿ ಶ್ರೀ ವಾದಿರಾಜರಿಗೆ ದ್ರೋಹ ಮಾಡುವ ವಿಷಯ ಏನು ಹೇಳಬೇಕು. ಆದ್ದರಿಂದ ವಾದಿರಾಜರಿಗೆ ದ್ರೋಹ ಮಾಡುವುದು ಮಹಾ ಅನರ್ಥ ಎಂದು ತಿಳಿಯಬೇಕು. ವಿವೇಕಿಗಳು ಹಾಗೆ ಮಾಡಬಾರದು.

**ಶ್ರೀ ವಾದಿರಾಜರು ತಮ್ಮ ಋಜು ಸ್ವರೂಪವನ್ನು ತಿಳಿದು, ಅದಕ್ಕನುಸಾರವಾದ ತಮ್ಮ ಉಪಾಸನೆ ಮಾಡುವವರಿಗೆ, ಪರಮಾನುಗ್ರಹ ಮಾಡುತ್ತೇವೆಂದು ಹೇಳಿಕೊಂಡಿರುವುದನ್ನು ಮರೆಯಬಾರದು.**

**★★ ಶ್ರೀ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀಹಯಗ್ರೀವ: ಪ್ರೀಯತಾಂ ಶ್ರೀ: ★★**

6522469 - Jayashree.

॥ ಶ್ರೀಪತಿರ್ಮಾನದೋ ನಃ ॥

ಶ್ರೀಮಧ್ವವಾದಿರಾಜೌ ವಿಜಯೇತೇ । । ಶ್ರೀಭೂತರಾಜಾಯ ನಮಃ ।



# ಶ್ರೀವಾದಿರಾಜರ ಮಾತಿನಲ್ಲಿ ಅವರ ಮಹಿಮೆ

ಸಂಪಾದನ

ಡಾ॥ ಗುರುರಾಜ. ಕೃ. ನಿಪ್ಪಾಣಿ., ಬಳ್ಳಾರಿ.

**SHREE VADIRAJARA MATHINALLI AVARA MAHIME**

Edited by:
**Dr. Gururaj.K.Nippani**
Head, Department of Sanskrit.
Veerashaiva College, Bellary-583104.

Mudrana Seva : Sri.H.Ramesh Rao.
Bangalore.

Copyright – Reserved

First Edition – 2009

Price – **Rs. 10/-**

Copies – 250

Pages – 41+4

Published by : Shri Bhavisameera
Tattvaprasarana Pratisthana,
Shri Sode Vadiraja Matha
Udupi

Printed at : SunPrints
Bangalore
Tel : 94480 67224



॥ ಶ್ರೀಪತಿರ್ಮಾನದೋ ನಃ ॥

।ಶ್ರೀಮದ್ವವಾದಿರಾಜೌ ವಿಜಯೇತೇ । । ಶ್ರೀಭೂತರಾಜಾಯ ನಮಃ ।

# ಶ್ರೀವಾದಿರಾಜರ ಮಾತಿನಲ್ಲಿ ಅವರ ಮಹಿಮೆ

**ಹಯಗ್ರೀವಂ ದೇವಂ ವಯಮಿಮಮುಪಾಸ್ಯೈವ ಕೃತಿನಃ ।**

ಶ್ರೀಹಯವದನದೇವನನ್ನು ಉಪಾಸನೆ ಮಾಡಿಯೇ
ನಾವು ಧನ್ಯರು, ಇತರ ದೇವತಾ ಆರಾಧನೆಯಿಂದಲ್ಲ.

.....ಯುಕ್ತಿಮಲ್ಲಿಕಾ

**ಯಸ್ತಂಭಸಂಭವೋ ಡಿಂಭಂ**
**ಹಿರಣ್ಯಕಶಿಪೋಃ ಅಪಾತ್ ।**
**ಸೋಽಂತರ್ಯಾಮೀ ಮಮ ಸ್ವಾಮೀ**
**ಕಸ್ಯ ನ ಸ್ಯಾದ್ವಿಚಾರಯ ॥**

ಕಂಬದಿಂದ ಉದ್ಭವಿಸಿ ಹಿರಣ್ಯಕಶಿಪುವಿನ ಆಕ್ರಮಣದಿಂದ ಭಕ್ತಪ್ರಹ್ಲಾದನನ್ನು ಸಲಹಿದ ಶ್ರೀ ನರಸಿಂಹಾತ್ಮಕ ಹಯವದನನು ನನಗೆ ಒಡೆಯ

.....ಯುಕ್ತಿಮಲ್ಲಿಕಾ



**ಯದ್ವಾಯೋಃ ಪವಮಾನಸ್ಯ ಪೂಯಮಾನಾಭಿಧಸ್ಯ ಚ ।**
**ಸೂಕ್ತಸ್ಥರ್ಚಾಮಿಯಂ ಚರ್ಚಾ ತದ್ವಾಯುಸ್ತುತಿರೇವ ನಃ ॥**

ವಾಯುದೇವಸಂಬಂಧಿ ಪವಮಾನ--ಪೂಯ-ಮಾನಸೂಕ್ತಗತ ಋಕ್‌ಗಳ ಚರ್ಚೆಯೇ ನಮಗೆ ವಾಯುಸ್ತುತಿ

-- ಯುಕ್ತಿಮಲ್ಲಿಕಾ

**ಮೂಕಾನಕೃತ ಮೇ ಶತ್ರೂನ್ ಏತಾಂತಿಕಜನಪ್ರಿಯಾ ॥**

ನನ್ನ ಶತ್ರುಗಳನ್ನು ಶಿಕ್ಷಿಸಿದ ಮೂಕಾಂಬಿಕಾದೇವಿಗೆ
ಪ್ರಿಯನಾದ ನಾನು ಏಕಾಂತಭಕ್ತನು

– ತೀರ್ಥಪ್ರಬಂಧ



**ಯಾಚೇ ವರದರಾಜ ತ್ವಾಂ ಕಾಂಚೀಶೇಹ ನ ಕಿಂಚನ ।**
**ಚೇತನಾಚೇತನಜಗದ್ವರಂ ತ್ವಾಮೇವ ದೇಹಿ ಮೇ ॥**

ಹೇ ವರದರಾಜ ! ಏಕಾಂತಭಕ್ತೋತ್ತಮನಾದ ನನಗೆ
ನಿನ್ನನ್ನೇ ಕರುಣಿಸು

.....ತೀರ್ಥಪ್ರಬಂಧ

**ದಾಸೇ ದಯಾಂ ಕುರು ಮಯೀಶ ಗತೇತರಾಶೇ ।**

ಹೇ ಅನಂತಶಯನ ! ಆಶಾದಿದೋಷದೂರನಾದ
ದಾಸನಾದ ನನ್ನಲ್ಲಿ ಕರುಣೆ ಇರಲಿ

.....ತೀರ್ಥಪ್ರಬಂಧ



**ಕರ್ತ್ರೇ ಧರ್ತ್ರೇ ಚ ಸಂಹರ್ತ್ರೇ ಪಾತ್ರೇ ಚ ಹಯವಕ್ತ್ರ ಮೇ ।**
**ಪಿತ್ರೇ ಮಾತ್ರೇ ಧಿಯಾಂ ದಾತ್ರೇ ಸತ್ರೇ ಜಾತಾಯ ತೇ ನಮಃ ॥**

ಬ್ರಹ್ಮದೇವರ ಸತ್ರಯಾಗದಲ್ಲಿ ಪ್ರಾದುರ್ಭವಿಸಿದ
ಹೇ ಹಯವದನ ! ನೀನೇ ಸೃಷ್ಟಿಕರ್ತಾ, ಸ್ಥಿತಿಕರ್ತಾ,
ಸಂಹಾರಕರ್ತಾ, ನನಗೆ
ಪೂಜಾರ್ಹ, ತಂದೆ, ತಾಯಿ, ಬುದ್ಧಿಪ್ರದ ಎಲ್ಲವೂ ನೀನೆ.
ಪ್ರತ್ಯಕ್ಷನಾದ ನಿನಗೆ ಇದೋ ನಮಸ್ಕಾರ

.....ಸರಸಭಾರತೀವಿಲಾಸ

ಇತಿ ಸ್ವಪಿತರಿ ಶ್ರೀಶೇ ಭಕ್ತ್ಯಾ ಯಸ್ತು ಪಿತಾಮಹಃ ।
ಯದ್ದರ್ಶಯತ್ ಸ್ವದೋಷಾನ್ನಃ ಕುಲವೃದ್ಧೋ ಗುರುಃಸದಾ ॥

ನಮ್ಮ ಋಜುದೇವತಾಕುಲಕ್ಕೆ ಗುರುಗಳಾದ
ಚತುರ್ಮುಖ ಬ್ರಹ್ಮದೇವರೇ ಜ್ಯೇಷ್ಠರು,
(ಗುರುಗಳಾದಚತುರ್ಮುಖ ಬ್ರಹ್ಮದೇವರೇ ಜ್ಯೇಷ್ಠರಾದ
ಋಜುದೇವತಾಕುಲಕ್ಕೆ ಸೇರಿದವ ನಾನು)

.....ಸರಸಭಾರತೀವಿಲಾಸ



ತಮೇವ ಚಾರ್ಚಯೇ ನಿತ್ಯಂ ತಮೇವ ಪ್ರಾರ್ಥಯೇ ಅನಿಶಮ್ ।
ತಮೇವ ಕೀರ್ತಯೇ ಚಿತ್ತೇ ಧ್ಯಾಯೇ ಮಹಿತಮೇವ ಹಿ ॥
ಮಹಾಕಾವ್ಯಮಿದಂ ಚಕ್ರೇ ವಾದಿರಾಜೋ ಮಹಾಮತಿಃ ॥

ಶ್ರೀ ಹರಿಯನ್ನೇ ಅರ್ಚಿಸುವೆ, ಯಾವಾಗಲೂ ಪ್ರಾರ್ಥಿಸುವೆ,
ಕೀರ್ತಿಸುವೆ, ಆ ಮಹಾಮಹಿಮದೇವನನ್ನೇ ಮನದಲ್ಲಿ
ಧ್ಯಾನಿಸುವೆ.

. . . . . . .

ಮಹಾಮತಿ (ಸರ್ವಜ್ಞ) ವಾದಿರಾಜರು ಈ ಮಹಾಕಾವ್ಯವನ್ನು
ರಚಿಸಿದ್ದಾರೆ.

.....ಸರಸಭಾರತೀವಿಲಾಸ

ಸುಂದೋಪಸುಂದೌ ಹಂತುಂ ಪ್ರಾಗ್ ಬ್ರಹ್ಮಾ ಚಕ್ರೇ
ತಿಲೋತ್ತಮಾಮ್ ।
ಭಾವಿಬ್ರಹ್ಮಾ ತ್ವಿಮೌ ಹಂತುಂ ಚಕ್ರೇ
ಯುಕ್ತಿತಿಲೋತ್ತಮಾಮ್ ॥

ಅದ್ವೈತದ ಐಕ್ಯವಾದ-ನಿರ್ಗುಣವಾದಗಳನ್ನು ನಿರಾಕರಿಸಲು ಭಾವಿಬ್ರಹ್ಮಮಧ್ವರು ಅನುವ್ಯಾಖ್ಯಾನವನ್ನು ರಚಿಸಿದಂತೆ, ಭಾವಿಬ್ರಹ್ಮವಾದಿರಾಜರೂ ಯುಕ್ತಿಮಲ್ಲಿಕಾವನ್ನು ರಚಿಸಿದರು.

-- ನ್ಯಾಯರತ್ನಾವಲೀ



ವಾದಿರಾಜೇನ ರಚಿತಾಂ ನ್ಯಾಯರತ್ನಾವಲೀಮಿಮಾಮ್ ।
ಸಂಗೃಹ್ಣತಃ ಸಭಾಮಧ್ಯೇ ವಾಗ್ದಾರಿದ್ರ್ಯಂ ನ ವಿದ್ಯತೇ ॥

ಶ್ರೀವಾದಿರಾಜರಚಿತ ನ್ಯಾಯರತ್ನಾವಲಿಯ ವಿಚಾರಾಂಶಗಳನ್ನು
ಚನ್ನಾಗಿ ಬಲ್ಲವನಿಗೆ ವಿದ್ವತ್ಸಭೆಯಲ್ಲಿ
ವಾಗ್(ವಿದ್ಯಾ)ದಾರಿದ್ರ್ಯವು ಇರುವುದಿಲ್ಲ.

.....ನ್ಯಾಯರತ್ನಾವಲೀ

ವ್ಯಧತ್ತ ವಿಲಸತ್ಪದಾಂ ವಿಮಲವಾದಿರಾಜಾಭಿಧಃ ।

ನಿರ್ದೋಷವಾದಿರಾಜರು ಈ ಉತ್ಕೃಷ್ಟವರಾಹ - ಹಯವದನ ಸ್ತೋತ್ರವನ್ನು ರಚಿಸಿದ್ದಾರೆ.

.....ಶ್ರೀವರಾಹ–ಹಯವದನ ಸ್ತೋತ್ರ



ವಿದ್ವನ್ಮಧ್ಯೇ ಪ್ರಸಿದ್ಧಿಂ ಬುಧನುತಕವಿತಾಂ ವಾದಿರಾಜರ್ಷಿರಾಜಃ
ಸದ್ಯೋ ಯದ್ಯೋಗಿವರ್ಯೋ . . . . . ಕುರ್ಯಾತ್ ॥

ಯೋಗಿವರ್ಯರೂ, ಮಂತ್ರದೃಷ್ಟ್ರಶ್ರೇಷ್ಠರೂ, ಪೂರ್ಣಪ್ರಮತಿಗಳೂ ಆದ ಶ್ರೀವಾದಿರಾಜರು ಶ್ರೇಷ್ಠವಾದ ಈ ವಾಯುಸ್ತುತಿಯನ್ನು ರಚಿಸಿದ್ದಾರೆ.

.....ವಾಯುಸ್ತುತಿಃ

**ಚಿಂತಾಮಣಿರ್ಹಯಗ್ರೀವೋ ವಶೇ ಯಸ್ಯ ನಿಷೇವಿಣಃ ।**
**ಸೋऽಪಿ ಸರ್ವಾರ್ಥದೋ ನೃಣಾಂ**
**ಕಿಮುತಾಸೌ ಹಯಾನನಃ ॥**

ಚಿಂತಾಮಣಿಯಾದ ಹಯಗ್ರೀವದೇವರು ಯಾವ ವಾದಿರಾಜರಂತಹ ಆರಾಧಕರ ಭಕ್ತಿಪಾಶವಶರಾಗಿದ್ದಾರೋ, ಅವರೂ ಸರ್ವಾಭೀಷ್ಟಪ್ರದರಾಗಿದ್ದಾರೆ.

.....ಹಯಗ್ರೀವಸ್ತುತಿಃ



**ವಾದಿರಾಜಯತೀರಿತಾ ಹಯವಕ್ತ್ರಭೂಧರವಕ್ತ್ರಭೂಃ**
**ವೇದವಾಗಿವ ಪಾವನೀ ಪರಮಸ್ತುತಿರ್ಗುಣವಿಸ್ತೃತಿಃ ॥**

ಶ್ರೀವಾದಿರಾಜರಿಂದ ರಚಿತವಾದ ಈ ಪರಮಸ್ತುತಿಯು ವೇದವಾಣಿಯಂತೆ ಪಾವನವಾಗಿದೆ.

.....ಪರಮಸ್ತುತಿಃ

**ಕೃಪಾಕರೋಲ್ಲಸದ್ವಕ್ತ್ರಂ ಕೃಪಾವಿಪುಲಲೋಚನಮ್ ।**
**ಅಪಾರಸುಗುಣಸ್ತೋಮಂ ಉಪಾಸೇ ತಂ ತ್ರಿವಿಕ್ರಮಮ್ ॥**

ಚಂದ್ರಬಿಂಬದಂತೆ ಪ್ರಕಾಶಮಾನ ಮುಖವುಳ್ಳ,
ಕೃಪಾಸಾಂದ್ರನೇತ್ರವುಳ್ಳ ಹಾಗು ಅಪಾರಗುಣಸಂಪನ್ನನಾದ
ತ್ರಿವಿಕ್ರಮಸ್ವಾಮಿಯನ್ನು ಉಪಾಸಿಸುತ್ತೇನೆ (ಋಜುಲಕ್ಷಣ)

.....ತ್ರಿವಿಕ್ರಮಸ್ತೋತ್ರ



**ಹೇಷಾ ತವೈಷಾ ನಿರ್ದೋಷಾ ತೋಷಾಯ**
**ಸ್ಯಾದ್ಧಯಾಸ್ಯ ಮೇ ॥**

ನಿತ್ಯವೂ ಪ್ರತ್ಯಕ್ಷನಾದ ಹಯಾಸ್ಯನೇ ! ನಿನ್ನ ಹೇಷಾ ಧ್ವನಿಯು
(ಕೆನೆಯುವಿಕೆಯು) ನನಗೆ ಸಂತೋಷಪ್ರದವಾಗಲಿ.

.....ಅಕ್ಷಪಂಚಕಮ್

ತತ್ವಸಾರದ ಸೊಬಗ ಧರೆಯೊಳು
ವಿಸ್ತರಿಸಬೇಕೆಂದು ಮುನಿಕುಲ
ರತ್ನ ಶ್ರೀ ಗುರುವಾದಿರಾಜನು ಶೃತಿ ಪುರಾಣಗಳ ।
ಮೊತ್ತವನು ನೆರೆ ಮಥಿಸಿ ಮೇಲಣ
ಮುಕ್ತಿ ಸೃಷ್ಟಿಸ್ಥಿತಿಲಯಂಗಳ
ಅರ್ಥಿಯಿಂದಲಿ ಬಣ್ಣಿಸಿದ ಕಥೆ ಕೇಳಿ ಸಜ್ಜನರು ॥

.....ವೈಕುಂಠವರ್ಣನೆ



ಇದು ಪುಣ್ಯ ಕಥೆ ಲೋಕಕ್ಕಿದೆ ಮುಕುತಿಯ ಪಥ
ಇದ ಕೇಳುವವನೇ ಕೃತಾರ್ಥ ।
ಇದು ಸರ್ವಸಾಧನ ವಿಧುಗಳಿಗೆ ಸಮ್ಮತ ಮುದವ
ನೀವುದು ಕೇಳ್ವ ಜನಕೆ ॥
ಮುತ್ತುರತ್ನಂಗಳ ಕೆತ್ತಿಸುವಂತೆ ಸುತತ್ವ ಸಾರಗಳಬಿತ್ತರವ
ಯುಕ್ತಿಯಿಂದಲಿ ಪೇಳ್ದ ವಾದಿರಾಜನ ಸಂಧಿ

.....ವೈಕುಂಠವರ್ಣನೆ

ಈ ಪದವೆ ಶುಭಪದ ಈ ಪದವರ್ಥಿಯ ಪದ ಈ
ಪದ ಸಂಪದಾಸ್ಪದ ।
ಈ ಪದ ಹರಿಪಾದದೀಪವೆನಿಪ ಪದ ಈ ಪದವೆ
ಆಪದಾಂತಕಪದ ॥
ಭಯವ ಹರಿಸುವ ಪದ ನಯನ ತೋರುವ ಪದ
ಪ್ರಿಯಮುಕ್ತಿಪದವನ್ನೈದಿಸುವ ಪದ ।
ಹಯವದನದೇವನ್ನ ದಯಕೆ ಪಾತುರನಾಗಿ
ಜಯಿಸುವ ವಾದಿರಾಜನಪದ ॥

.....ವೈಕುಂಠವರ್ಣನೆ



ಈ ದಿವ್ಯಕೃತಿಕಮಲ ಕೃಷ್ಣಾರ್ಪಿತವಾಗಲಿ
ಶ್ರೀದೇವಿಯಿದನೆ ಕೈಪಿಡಿದು ।
ಮೋದದಿ ಸದಮಲ ಸಂಪದವೀಯಲಿ
ವಾದಿರಾಜಯೋಗಿವರಗೆ ॥
ಅದಭುತವಲ್ಲವೆ ಹಯವದನ ತನ್ನ ಶ್ರೀ ಪದ
ಪದುಮಸನ್ನಿಧಿಯಲ್ಲಿ
ಹುದುಗಿಸಿ ವಾದಿರಾಜನ ಪಾದೋದಕದಿ
ವಿವಿಧ ಭೀತಿಯನೊದೆದಟ್ಟುವದು

.....ವೈಕುಂಠವರ್ಣನೆ

ವಾದಿರಾಜಗೆ ದೇವ ಕಲಿಸಿದ
ಮಾಧವನಗುಣಮಾಲೆಯನು ಬರೆ
ದೋದಿ ಪಠಿಸುವ ಮಾನವರಿಗೆ ವಿಮುಕ್ತಿಪಥವಹುದು ।
ವಾದಶಕ್ತಿಯನಿತ್ತು ತನ್ನಯ
ಪಾದಪದ್ಮದ ನೆನಹನೀವ ಮ-
ಹಾದಯಾಂಬುನಿಧಿ ಹಯವದನ ಕೃಪೆಯಿಂದ
ಸಲಹುವನು॥

..... ಸ್ವಪ್ನಪದ



ಇಂತು ಸ್ವಪ್ನದಲ್ಲಿ ಕೊಂಡಾಡಿಸಿಕೊಂಡ ಲಕ್ಷುಮಿ
ಕಾಂತನ ಕಂದನೆನಿಸುವ ।
ಸಂತರ ಮೆಚ್ಚಿನ ವಾದಿರಾಜೇಂದ್ರಮುನಿ
ಪಂಥದಿ ಪೇಳಿದ ಪದವಿದು ॥

.....ಲಕ್ಷ್ಮೀಶೋಭಾನೆ

ವಾದಿರಾಜಗೊಲಿದು ಸೋದೆಪುರದಿ ನಿಂತು
ವೇದದಕಥೆಗಳ ಅರುಹಿದ ।
ವೇದದಕಥೆಗಳ ಅರುಹಿದ ಹಯವದನ
ವೇಲಾಪುರಿಚನ್ನ ದಯವಾಗೋ ॥

.....ಪದ



ತೀರ್ಥಾನಾಮುತ್ತಮಂ ತೀರ್ಥಂ
ವನಾನಾಮುತ್ತಮಂ ವನಮ್ ।
ಕ್ಷೇತ್ರಾಣಾಮುತ್ತಮಂ ಕ್ಷೇತ್ರಂ
ಮಮ ವೃಂದಾವನಂ ದ್ವಿಜ ॥

ನನ್ನ ವೃಂದಾವನಸನ್ನಿಧಿಯು ಸಕಲತೀರ್ಥ, ಪುಣ್ಯವನ ಮತ್ತು ಕ್ಷೇತ್ರಗಳಿಗಿಂತ ಉತ್ತಮವಾಗಿದೆ. ಈ ಎಲ್ಲ ಅಭಿಮಾನಿದೇವತೆಗಳು ನನ್ನ ವೃಂದಾವನದಲ್ಲಿ ಪ್ರಸನ್ನರಾಗಿ ಸನ್ನಿಹಿತರಾಗಿದ್ದಾರೆ.

.....ಸ್ವಾಪ್ನವೃಂದಾವನಾಖ್ಯಾನ

ಯೋ ಮಾಂ ದೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ ।
ಸ ಯಾತಿ ನಿಲಯಂ ಪುಣ್ಯಂ ಯದ್ಗತ್ವಾ ನ ನಿವರ್ತತೇ ॥

ಯಾವ ಪುಣ್ಯಪುರುಷನು ನನ್ನನ್ನು ಋಜುದೇವತೆಯಂದು ಚೆನ್ನಾಗಿ ತಿಳಿಯುತ್ತಾನೋ
ಆತನು ವೈಕುಂಠಾಖ್ಯಮೋಕ್ಷಧಾಮವನ್ನೇ ಹೊಂದುತ್ತಾನೆ.

.....ಸ್ವಾಪ್ನವೃಂದಾವನಾಖ್ಯಾನ



ವಾದೀಭಮೃಗರಾಜೋಽಹಂ
ವಾದಿರಾಜೋ ಹರಿಂ ಭಜೇ ।

ದುರ್ವಾದಿಗಳೆನ್ನುವ ಮದ್ದಾನೆಗಳಿಗೆ ಸಿಂಹನಾದ ನಾನು
ಶ್ರೀಹಯವದನ ಹರಿಯನ್ನು ಆರಾಧಿಸುತ್ತೇನೆ.

.....ಸ್ವಾಪ್ನವೃಂದಾವನಾಖ್ಯಾನ

ಕರ್ತುಂ ಚಾಕರ್ತುಮಪ್ಯೇವಮನ್ಯಥಾ
ಕರ್ತುಮೇವ ಚ ।
ಸಮರ್ಥೋಽಹಂ ನ ಸಂದೇಹಶ್ಚೇಶ್ವರಸ್ಯ
ಸದಾಽಽಜ್ಞಯಾ ॥

ಪರಮಾತ್ಮನ ಆಜ್ಞೆಯಿಂದ (ಅನುಗ್ರಹಬಲದಿಂದ)
ಕಾರ್ಯಮಾಡುವದಕ್ಕೂ,
ಬಿಡುವುದಕ್ಕೂ ಹಾಗೆಯೇ ಅನ್ಯಥಾ ಮಾಡುವದಕ್ಕೂ ನಾನು
ಸಮರ್ಥನು.

....ಸ್ವಾಪ್ನವೃಂದಾವನಾಖ್ಯಾನ



ಕಿಮತ್ರ ಬಹುನೋಕ್ತೇನ ಮದ್ವೈಭವಸಮೋ ನ ಹಿ ।
ನನ್ನ ವೈಭವಕ್ಕೆ ಸಮರಿಲ್ಲ

ಸರ್ವಾಣಿ ಕರಣಾನೀತಿ ಯುಕ್ತಮತ್ಕರಣಾನಿ ತೇ ।
ಕರ್ಮಾಣಿ ಪುಣ್ಯರೂಪಾಣಿ
ಕುರ್ವಂತಿ ಮಮ ಸನ್ನಿಧೇಃ ॥

ನನ್ನ ಸನ್ನಿಧಾನ ಹಾಗೂ ಇಂದ್ರಿಯ ಸಂಬಂಧದಿಂಧ ಎಲ್ಲರ
ಸಕಲೇಂದ್ರಿಯಗಳು ಪುಣ್ಯಕರ್ಮ ಮಾಡುವಲ್ಲಿ ಪ್ರವೃತ್ತವಾಗಿವೆ.

.....ಸ್ವಾಪ್ನವೃಂದಾವನಾಖ್ಯಾನ

**ಸರ್ವಜ್ಞೋऽಹಂ ನ ಸಂದೇಹಃ ।**

ನಾನು ಸರ್ವಜ್ಞನು, ಇದರಲ್ಲಿ ಸಂದೇಹವಿಲ್ಲ

**ಅಹಂ ಪೂರ್ವೇऽಪಿ ಸರ್ವಜ್ಞಃ ।**

ನಾನು ಮೊದಲೇ ಸರ್ವಜ್ಞನು

.....ಸ್ವಾಪ್ನವೃಂದಾವನಾಖ್ಯಾನ



**ಮಮಾಪಿ ಜೀವೋತ್ತಮತ್ವಂ ಶ್ರುತ್ವಾ**
**ಸರ್ವೇ ಮಮ ಪ್ರಿಯಾಃ ।**
**ಗುರ್ವಂತರ್ಯಾಮಿಣಃ ಸ್ವೈರಂ ಕರಂ**
**ದಾಸ್ಯಂತು ಭೂರಿಶಃ ॥**

ನನಗೆ ಪ್ರಿಯರಾದ ಭಕ್ತರು
ನನ್ನ ಜೀವೋತ್ತಮತ್ವ ಮಹಿಮೆಯನ್ನು ಕೇಳಿ,
ಅಂತರ್ಯಾಮಿಗೆ ಸತ್ಕಾರ್ಯರೂಪ ಕರವನ್ನು
ಶ್ರದ್ಧಯಾ ಸಮರ್ಪಿಸಲಿ.

.....ಸ್ವಾಪ್ನವೃಂದಾವನಾಖ್ಯಾನ

**ಕೋ ದಕ್ಷಶ್ಚಕ್ಷುಷಾ ದೃಷ್ಟುಂ ಮತ್ತೇಜಃ**
**ಸಾಕ್ಷಿಗೋಚರಮ್ ।**

ಸಾಕ್ಷಿಗೆ ಗೋಚರವಾಗುವ ನನ್ನ ತೇಜಸ್ಸನ್ನು ಕಣ್ಣುಗಳಿಂದ
ನೋಡಲು ಯಾರು ಸಮರ್ಥರು

.....ಸ್ವಾಪ್ನವೃಂದಾವನಾಖ್ಯಾನ



**ಮಮೋಪದೇಶವಾಕ್ಯಾನಿ ಶ್ವಾಸಮಾತ್ರಾವಶೇಷಿತಾಃ ।**
**ಶ್ರುತ್ವಾ ಶ್ವಾಸಾದಿದೋಷೈಶ್ಚ ಮುಚ್ಯಂತೇ ನಾತ್ರ ಸಂಶಯಃ ॥**

ಶ್ವಾಸಮಾತ್ರ ಉಳ್ಳವರೂ ನನ್ನ ಉಪದೇಶ–ಉಕ್ತಿವುಳ್ಳ
ಆಖ್ಯಾನವನ್ನು ಕೇಳಿದರೆ ಶ್ವಾಸಾದಿದೋಷಗಳಿಂದ
ಬಿಡುಗಡೆ ಹೊಂದುತ್ತಾರೆ.

.....ಸ್ವಾಪ್ನವೃಂದಾವನಾಖ್ಯಾನ

**ತಸ್ಮಾನ್ನಿರ್ದೋಷ ಏವಾಹಂ . . . . . . . ।**

ಶ್ರೀಶಾನುಗ್ರಹದಿಂದ (ಸ್ವೇಚ್ಛಾನಿಯತ ಜ್ಞಾನಿಯಾದ್ದರಿಂದ) ನಾನು ನಿರ್ದೋಷನು.

**ತಸ್ಮಾದರಾಗದ್ವೇಷೋऽಹಂ ವಿಷ್ಣೋಃ ಪಾದಪರಾಗಭಾಕ್ ।**

ಪರಮಾತ್ಮನ ಪಾದಾರಾಧಕನಾದ ನಾನು ರಾಗದ್ವೇಷಾದಿದೂರನು.

.....ಸ್ವಾಪ್ನವೃಂದಾವನಾಖ್ಯಾನ



**ಸ್ವಲ್ಪಾಪರಾಧೋऽಪಿ ಮಮ ಮಹಾಪಾಪಾಯ ಕಲ್ಪತೇ ।**

ನನ್ನ ವಿಷಯದಲ್ಲಿ ಮಾಡಿದ ಅಲ್ಪ ಅಪರಾಧವೂ ಮಹಾಪಾಪಕ್ಕೆ ಕಾರಣವಾಗುತ್ತದೆ.

**ಅಹಂ ಸಕಲಜೀವರಾಟ್ . . . . ।**

ನಾನು ಸಕಲಜೀವೋತ್ತಮನು.

.....ಸ್ವಾಪ್ನವೃಂದಾವನಾಖ್ಯಾನ

ಪಂಚವೃಂದಾವನೇ ಪುಣ್ಯೇ ಪಂಚರೂಪಾತ್ಮಕೋ ಹರಿಃ ।
ಪಂಚೀಕೃತ್ಯ ಸ್ವರೂಪಾಣಿ ನಿತ್ಯಂ ಸನ್ನಿಹಿತಃ ಸ್ವಯಮ್ ॥
ತೀರ್ಥಾನಾಮುತ್ತಮಂ ತೀರ್ಥಂ ವನಾನಾಮುತ್ತಮಂ ವನಮ್ ।
ಕ್ಷೇತ್ರಾಣಾಂ ಉತ್ತಮಂ ಕ್ಷೇತ್ರಂ ಮಮ ವೃಂದಾವನಂ ದ್ವಿಜ ॥
ಯಾವದ್ವೃಂದಾವನಂ ಚಾತ್ರ ಮೇದಿನ್ಯಾಂ ಮಮ ನಂದನ ।
ತಾವನ್ಮಮ ಸನ್ನಿಧಾನಂ ಸ್ಯಾದ್ಧರಣ್ಯಾಂ ಧರಣೀಸುರ ॥

ಪುಣ್ಯತಮ ಪಂಚವೃಂದಾವನಗಳಲ್ಲಿ ಶ್ರೀಹರಿಯು ಅನಿರುದ್ಧಾದಿ ಪಂಚರೂಪಗಳ ಪಂಚೀಕರಣ ಪದ್ಧತಿಯಿಂದ ಸನ್ನಿಹಿತನಾಗಿದ್ದಾನೆ. ನನ್ನ ವೃಂದಾವನವು ಸಕಲ ತೀರ್ಥ, ವನ ಹಾಗೂ ಕ್ಷೇತ್ರಗಳಿಗೆಲ್ಲ ಉತ್ತಮವಾಗಿದೆ. ಈ ಭೂಮಿಯಲ್ಲಿ ಈ ವೃಂದಾವನವಿರುವವರೆಗೂ ನನ್ನ ಸನ್ನಿಧಾನವು ಜಾಗೃತವಾಗಿರುತ್ತದೆ.

.....ಸ್ವಾಪ್ನವೃಂದಾವನಾಖ್ಯಾನ



## ಶ್ರೀವಾದಿರಾಜರ ಮಾತಿನಲ್ಲಿ ಮೃತ್ತಿಕಾಮಹಿಮೆ

ಕುಷ್ಠಾಪಸ್ಮಾರಲೂತಾನ್ ತಾನ್ ಬಾಲಸ್ಫೋಟಾದಿಕಾನ್ ಬಹೂನ್ ।
ಮೃತ್ತಿಕಾ ನಾಶಯತ್ಯೇವ ವೃಂದಾವನಗತಾ ಮುನೇಃ ॥
ಧಾರಯಂತು ಬುಧಾಗರೇ ಧಾರಯಂತು ಸದಾರಕಾಃ ।
ಆದರೈಃ ಪಾದರಜಸಾ ಧೂತಪಾಪಾಶ್ಚ ಯೇ ನರಾಃ ॥

ನನ್ನ ವೃಂದಾವನಗತಮೃತ್ತಿಕೆಯು ಕುಷ್ಠ, ಅಪಸ್ಮಾರ, ಮೊದಲಾದ ಬಹುರೋಗ ದೋಷಗಳನ್ನು ನಿಶ್ಚಿತವಾಗಿ ನಾಶಪಡಿಸುತ್ತದೆ. ಆದ್ದರಿಂದ, ನನ್ನ ಪಾದಮೃತ್ತಿಕೆ (ಧೂಳಿ)ಯಿಂದ ಪಾಪಮುಕ್ತರಾದ ಸಜ್ಜನರು ಹಾಗೂ ದೇವತೆಗಳು ಸಪತ್ನೀಕರಾಗಿ ಪರಮಾದರದಿಂದ ಅಖ್ಯಾನವೆಂಬ ಪರಿಮಳಭರಿತಕಮಲಪುಷ್ಪವನ್ನು ಶಿರಸ್ಸಿನಲ್ಲಿ ಧರಿಸಲಿ.

..... ಸ್ವಾಪ್ನವೃಂದಾವನಾಖ್ಯಾನ